ಶುಕ್ರವಾರ, ಏಪ್ರಿಲ್ 25, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಏಟು–ಎದುರೇಟು

ದೇಶದಲ್ಲಿ ಒಗ್ಗಟ್ಟು ಅಗತ್ಯವಿರುವ ಇಂತಹ ಸನ್ನಿವೇಶದಲ್ಲಿ ಬಿಜೆಪಿ, ಉಗ್ರರ ದಾಳಿಯ ಘಟನೆಯನ್ನು ಧ್ರುವೀಕರಣ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ

ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ

ನಾವು ವಿಶ್ವ ಬಂಧುತ್ವದ ಬಗ್ಗೆ ಮಾತನಾಡುತ್ತೇವೆ. ಆದರೆ ನಮ್ಮ ಸ್ವಾತಂತ್ರ್ಯ, ಸಾರ್ವಭೌಮತೆ, ಸುರಕ್ಷತೆ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ

ಮನೋಹರ್ ಲಾಲ್ ಖಟ್ಟರ್, ಕೇಂದ್ರ ಸಚಿವ


DR B.R AMBEDKAR BAHAVANA
ಭಾರತ ರತ್ನ,
ಸಂವಿಧಾನ ಶಿಲ್ಪಿ
ಡಾ|| ಬಿ.ಆರ್ ಅಂಬೇಡ್ಕರ್
ರವರ 134ನೇ ಹಾಗೂ
ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ
ಡಾ. ಬಾಬು ಜಗಜೀವನ್ ರಾಮ್ ಅವರ
118ನೇ ಜಯಂತ್ಯೋತ್ಸವ ಮತ್ತು
ನೂತನ ಡಾ. ಬಿ.ಆರ್ ಅಂಬೇಡ್ಕರ್ ಭವನದ
ಶಂಕುಸ್ಥಾಪನಾ ಸಮಾರಂಭಕ್ಕೆ ಸುಸ್ವಾಗತ
25 ಏಪ್ರಿಲ್ | 2025 ಶುಕ್ರವಾರ | ಬೆಳಿಗ್ಗೆ 10.00
ಸ್ಥಳ : ಬಯಲು ರಂಗಮಂದಿರ,
ಕೆಂಪೇಗೌಡ ಸರ್ಕಲ್, ಮಾಗಡಿ ಟೌನ್
"ಇದು ನಾನು ಕಲಿತ ಮಹತ್ವದ ಪಾಠ.
ನಾವು ಅಲ್ಪಸಂಖ್ಯಾತರ ಭಾಗವಾಗಿದ್ದಾಗ,
ಪ್ರಜಾಪ್ರಭುತ್ವವನ್ನು ನಾಶಗೊಳಿಸುತ್ತಿರುವ ಶಕ್ತಿಗಳ
ವಿರುದ್ಧ ಧೈರ್ಯವಾಗಿ ನಿಲ್ಲುವುದು ನಮ್ಮ ಕರ್ತವ್ಯ.
ಅದಕ್ಕಾಗಿ ನಾನು ಸದಾ ನಂಬುವುದೇನೆಂದರೆ
ಎಷ್ಟು ಅಂಧಕಾರ ಬಂದರೂ,
ಡಾ. ಬಿ.ಆರ್. ಅಂಬೇಡ್ಕರ್ ಅವರ
ಪರಂಪರೆಯ ಬೆಳಕು
ಭಾರತದ ಭವಿಷ್ಯವನ್ನು ಪ್ರಜ್ವಲಿಸುತ್ತಿರುತ್ತದೆ."
- ಡಾ. ಜಿ. ಪರಮೇಶ್ವರ್
ಶ್ರೀ ಬಿ.ವಿ ಜಯರಾಮು
ಕಾಂಗ್ರೆಸ್ ಮುಖಂಡರು
ಶುಭಕೋರುವವರು :
ಮಾಗಡಿ ಜಯರಾಮು ಅಭಿಮಾನಿ ಬಳಗ
ಶ್ರೀ ಕೆಂಪರಾಜು
ಗುತ್ತಿಗೆದಾರರು

ಶುಕ್ರವಾರ, ಏಪ್ರಿಲ್ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 114 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕೊಹ್ಲಿ 60ನೇ ಅರ್ಧಶತಕ

ವಿರಾಟ್ ಕೊಹ್ಲಿ ಗುರುವಾರ ಐಪಿಎಲ್‌ನಲ್ಲಿ ತಮ್ಮ 60ನೇ ಅರ್ಧಶತಕ ದಾಖಲಿಸಿದರು. ಹಾಲಿ ಆವೃತ್ತಿಯಲ್ಲಿ 9 ಪಂದ್ಯಗಳಿಂದ ಒಟ್ಟು 392 ರನ್ ಗಳಿಸಿರುವ ಕೊಹ್ಲಿ, ಒಟ್ಟಾರೆ ರನ್ ಗಳಿಕೆಯಲ್ಲಿ ಗುಜರಾತ್ ಟೈಟನ್ಸ್‌ನ ಸಾಯಿ ಸುದರ್ಶನ್ (417) ಅವರ ನಂತರದ ಸ್ಥಾನದಲ್ಲಿದ್ದಾರೆ.

ರಾಜಸ್ಥಾನ ವಿರುದ್ಧ ಆರ್‌ಸಿಬಿಗೆ 11 ರನ್‌ಗಳ ಜಯ

70 ರನ್ | 42 ಎಸೆತ

ಆಳ-ಅಗಲ ಪಾಕ್‌ಗೆ ಹೊಡೆತ ನೀಡುವುದೇ?

₹20 ಲಕ್ಷ ಲಂಚ: ವಾಣಿಜ್ಯ ತೆರಿಗೆ ಅಧಿಕಾರಿ ಬಂಧನ 11

ನೌಕಾಪಡೆಯಿಂದ ಕ್ಷಿಪಣಿ ಪರೀಕ್ಷೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,801	24,246	₹1.01 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.33

‘ಸ್ಮಾರ್ಟ್ ಮೀಟರ್ ಬೆಲೆ ಭಾರಿ ವ್ಯತ್ಯಾಸ’

ಬೆಂಗಳೂರು: ವಿದ್ಯುತ್ ಬಳಕೆಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವ ಸ್ಮಾರ್ಟ್ ಮೀಟರ್‌ಗಳ ಬೆಲೆ ವ್ಯತ್ಯಾಸವನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. 6

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಉಗ್ರರ ದಂಡನೆ: ಮೋದಿ ಶಪಥ

ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಉಗ್ರರು ಹಾಗೂ ಅವರಿಗೆ ನೆರವು ನೀಡಿದವರನ್ನು ಎಲ್ಲಿಯೇ ಅಡಗಿದ್ದರೂ ಪತ್ತೆಮಾಡಿ ಶಿಕ್ಷಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಶಪಥ ಮಾಡಿದ್ದಾರೆ. ಭಾರತವು ತನ್ನ ವಿರುದ್ಧ ತೆಗೆದುಕೊಂಡಿರುವ ಕ್ರಮಗಳಿಗೆ ಪ್ರತ್ಯುತ್ತರವಾಗಿ ಪಾಕಿಸ್ತಾನ ಕೂಡಾ ಕೆಲವು ಪ್ರತೀಕಾರದ ನಿರ್ಧಾರಗಳನ್ನು ಘೋಷಿಸಿದ್ದು, ಸಿಂಧೂ ನದಿ ನೀರಿನ ಹರಿವನ್ನು ನಿಲ್ಲಿಸುವ ಅಥವಾ ತಿರುಗಿಸುವ ಪ್ರಯತ್ನವನ್ನು ಯುದ್ಧಕ್ಕೆ ಸಮನಾದ ಕೃತ್ಯವೆಂದು ಪರಿಗಣಿಸಲಾಗುವುದು ಎಂದು ಸಾರಿದೆ. ಈ ಮಧ್ಯೆ, ದಾಳಿಯಲ್ಲಿ ಅಸುನೀಗಿದ ಕನ್ನಡಿಗರ ಅಂತ್ಯಕ್ರಿಯೆ ಗುರುವಾರ ನಡೆದಿದೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮಧುಬನಿ/ಪಟ್ನಾ(ಬಿಹಾರ): ‘ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಹತ್ಯೆ ಮಾಡಿರುವ ಉಗ್ರರನ್ನು ಹುಡುಕಿ, ಶಿಕ್ಷಿಸಲಾಗುವುದು. ಅವರ ಕಲ್ಪನೆಗೂ ಮೀರಿದಂತಹ ಶಿಕ್ಷೆ ನೀಡಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಶಪಥ ಮಾಡಿದ್ದಾರೆ.

‘ಎಲ್ಲಿಯೇ ಅಡಗಿದ್ದರೂ ಉಗ್ರರನ್ನು ಪತ್ತೆ ಮಾಡಲಾಗುವುದು. ಉಗ್ರರಿಗೆ ಮಾತ್ರವಲ್ಲ ಅವರಿಗೆ ಬೆಂಬಲ ನೀಡುತ್ತಿರುವವರನ್ನೂ ಭಾರತ ದಂಡಿಸಲಿದೆ ಎಂದು ಬಿಹಾರದ ಈ ನೆಲದಿಂದ ಇಡೀ ವಿಶ್ವಕ್ಕೆ ಹೇಳಲು ಬಯಸುತ್ತೇನೆ’ ಎನ್ನುವ ಮೂಲಕ ಪ್ರಧಾನಿ ಕಠಿಣ ಸಂದೇಶ ರವಾನಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಮಂಗಳವಾರ ನಡೆದಿದ್ದ ಉಗ್ರರ ದಾಳಿ ನಂತರ ಮೊದಲ ಬಾರಿಗೆ ಇಲ್ಲಿ ನಡೆದ ಪಂಚಾಯತ್‌ರಾಜ್ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಯೋತ್ಪಾದನೆ ಮೂಲಕ ಭಾರತದ ಆತ್ಮವನ್ನು ನಾಶ ಮಾಡಲು ಸಾಧ್ಯವಿಲ್ಲ’ ಎಂದರು. ಮೋದಿ ಅವರ ಮಾತಿಗೆ ಅನುಮೋದನೆ ಎಂಬಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನರಿಂದ ಭಾರಿ ಕರತಾಡನ ಕೇಳಿಬಂತು.

ಮೋದಿ ಅವರು ಹಿಂದಿಯಲ್ಲಿಯೇ ಭಾಷಣ ಆರಂಭಿಸಿದರು. ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟ ಕುರಿತು ವಿಶ್ವ ಸಮುದಾಯಕ್ಕೆ ಸಂದೇಶ ರವಾನಿಸುವ ಉದ್ದೇಶದಿಂದ, ಕೆಲಹೊತ್ತು ಇಂಗ್ಲಿಷ್‌ನಲ್ಲಿಯೂ ಮಾತನಾಡಿದರು.

7ನೇ ಪುಟ ನೋಡಿ

ಮೋದಿ ಭಾಷಣದ ಪ್ರಮುಖ ಅಂಶಗಳು

- ಮುಗ್ಧ ನಾಗರಿಕರನ್ನು ಬರ್ಬರವಾಗಿ ಹತ್ಯೆ ಮಾಡಿದ ಬಗ್ಗೆ ಇಡೀ ದೇಶವೇ ಶೋಕಿಸುತ್ತಿದೆ. ಕಾರ್ಗಿಲ್‌ನಿಂದ ಕನ್ಯಾಕುಮಾರಿವರೆಗೆ ಪ್ರತಿಯೊಬ್ಬ ಭಾರತೀಯರಲ್ಲಿ ದುಃಖ, ಆಕ್ರೋಶ ಮಡುಗಟ್ಟಿದೆ
- ದೇಶದ ಅಭಿವೃದ್ಧಿಗೆ ಶಾಂತಿ ಮತ್ತು ಭದ್ರತೆ ಅತ್ಯಗತ್ಯ
- ನಾನು ಅಧಿಕಾರದಲ್ಲಿ ಇರುವವರೆಗೆ ಭಯೋತ್ಪಾದನೆಯನ್ನು ಮಟ್ಟ ಹಾಕದೇ ಬಿಡುವುದಿಲ್ಲ
- ಮಾನವೀಯ ಮೌಲ್ಯಗಳ ಮೇಲೆ ನಂಬಿಕೆವುಳ್ಳವರು ನಮ್ಮೊಂದಿಗೆ ಇದ್ದಾರೆ



140 ಕೋಟಿ ಭಾರತೀಯರ ಇಚ್ಛಾಶಕ್ತಿಯು ಭಯೋತ್ಪಾದನೆ ಪೋಷಿಸುತ್ತಿರುವವರ ಹೆಡೆಮುರಿ ಕಟ್ಟಲಿದೆ

ನರೇಂದ್ರ ಮೋದಿ, ಪ್ರಧಾನಿ

ಮೃತ ಕನ್ನಡಿಗರ ಅಂತ್ಯಕ್ರಿಯೆ

ಬೆಂಗಳೂರು: ಉಗ್ರರ ಗುಂಡಿಗೆ ಬಲಿಯಾಗಿದ್ದ ಶಿವಮೊಗ್ಗದ ಮಂಜುನಾಥ ರಾವ್ ಹಾಗೂ ಬೆಂಗಳೂರಿನ ಭರತ್ ಭೂಷಣ್ ಅವರ ಮೃತದೇಹಗಳನ್ನು ಗುರುವಾರ ರಾಜ್ಯಕ್ಕೆ ಕರೆತಂದು, ಅಂತ್ಯಕ್ರಿಯೆ ನೆರವೇರಿಸಲಾಯಿತು. ದಾಳಿಯಲ್ಲಿ ಮೃತಪಟ್ಟಿದ್ದ ಬೆಂಗಳೂರಿನ ಟೆಕಿ ಮಧುಸೂದನ್ ರಾವ್ ಅವರ ಮೃತದೇಹವನ್ನು ಅವರ ಸ್ವಂತ ಊರು ಚೆನ್ನೈಗೆ ಒಯ್ದು ಅಂತ್ಯಕ್ರಿಯೆ ನಡೆಸಲಾಯಿತು.

ಗುಪ್ತಚರ ವೈಫಲ್ಯವೇ ಕಾರಣ: ವಿಪಕ್ಷ ಟೀಕೆ

ಘಟನೆಗೆ ಗುಪ್ತಚರ ವೈಫಲ್ಯವೇ ಕಾರಣ ಎಂದು ವಿರೋಧಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ. ಘಟನಾ ಸ್ಥಳದಲ್ಲಿ ಭದ್ರತಾ ವ್ಯವಸ್ಥೆ ಇರಲಿಲ್ಲ ಎಂಬ ದೂರೂ ಕೇಳಿ ಬಂದಿದೆ.

ವಿವರ 7

ಪಾಕ್ ಪ್ರತೀಕಾರದ ಕ್ರಮ

ಇಸ್ಲಾಮಾಬಾದ್ (ಪಿಟಿಐ): ಉಗ್ರರ ದಾಳಿಯ ಹಿನ್ನೆಲೆಯಲ್ಲಿ ಭಾರತವು ತನ್ನ ವಿರುದ್ಧ ತೆಗೆದುಕೊಂಡಿರುವ ಕ್ರಮಗಳಿಗೆ ಪ್ರತ್ಯುತ್ತರವಾಗಿ ಪಾಕಿಸ್ತಾನ ಕೂಡಾ ಕೆಲವು ಪ್ರತೀಕಾರದ ನಿರ್ಧಾರಗಳನ್ನು ಗುರುವಾರ ಘೋಷಿಸಿದೆ.

ಶಿಮ್ಲಾ ಒಡಂಬಡಿಕೆ ಸೇರಿದಂತೆ ದ್ವಿಪಕ್ಷೀಯ ಒಪ್ಪಂದಗಳನ್ನು ಅಮಾನತಿನಲ್ಲಿರಿಸುವುದು ಹಾಗೂ ಭಾರತದ ಜತೆಗಿನ ಎಲ್ಲ ರೀತಿಯ ವ್ಯಾಪಾರ ಸಂಬಂಧ ಸ್ಥಗಿತಗೊಳಿಸುವುದಾಗಿ ಪ್ರಕಟಿಸಿದೆ. ಸಿಂಧೂ ನದಿ ನೀರನ್ನು ತಡೆಯಲು ಭಾರತ ನಡೆಸುವ ಯಾವುದೇ ಪ್ರಯತ್ನವನ್ನು ‘ಯುದ್ಧಕ್ಕೆ ಸಮನಾದ ಕೃತ್ಯ’ ಎಂದು ಪರಿಗಣಿಸುವುದಾಗಿಯೂ ಪಾಕಿಸ್ತಾನ ಎಚ್ಚರಿಸಿದೆ.

ಪ್ರಧಾನಿ ಶೆಹಬಾಜ್ ಷರೀಫ್ ನೇತೃತ್ವದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಭದ್ರತಾ ಸಮಿತಿ (ಎನ್‌ಎಸ್‌ಸಿ) ತುರ್ತು ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಾಕ್ ಸೇನೆಯ ಮೂರೂ ಪಡೆಗಳ ಮುಖ್ಯಸ್ಥರು, ಸಚಿವರು ಮತ್ತು ಸೇನೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡರು.

7ನೇ ಪುಟ ನೋಡಿ

ಒಳ ಮೀಸಲಾತಿಗೆ ಮೇ 5ರಿಂದ ಗಣತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ರಾಜ್ಯದಾದ್ಯಂತ ಮೇ 5ರಿಂದ 17ರವರೆಗೆ ‘ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆ–2025’ ನಡೆಯಲಿದೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದಲ್ಲಿ ಸರ್ಕಾರವು ಒಳಮೀಸಲಾತಿಗಾಗಿ ರಚಿಸಿರುವ ಆಯೋಗದ ಶಿಫಾರಸಿನ ಅನ್ವಯ ಈ ಸಮೀಕ್ಷೆ ನಡೆಯಲಿದೆ.

ಸಮೀಕ್ಷೆಗಾಗಿ ರಚಿಸಿರುವ ರಾಜ್ಯಮಟ್ಟದ ಸಮನ್ವಯ ಸಮಿತಿಯ ಅಧ್ಯಕ್ಷೆ ಹಾಗೂ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಅಧ್ಯಕ್ಷತೆಯಲ್ಲಿ ಆಯೋಗವು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ವಿಡಿಯೊ ಸಂವಾದ ನಡೆಸಿತು. ಗಣತಿದಾರರಿಗೆ ಇದೇ 28ರಂದು ಜಿಲ್ಲಾಮಟ್ಟದಲ್ಲಿ, 29 ಮತ್ತು 30ರಂದು ತಾಲ್ಲೂಕುಮಟ್ಟದಲ್ಲಿ ತರಬೇತಿ ಆಯೋಜಿಸಲು ತೀರ್ಮಾನಿಸಲಾಗಿದೆ.

ಮೂರು ಹಂತಗಳಲ್ಲಿ ಮೊಬೈಲ್ ಆ್ಯಪ್ ಬಳಸಿ ಸಮೀಕ್ಷೆ ನಡೆಯಲಿದೆ. ಮೊದಲ ಹಂತದಲ್ಲಿ ಗಣತಿದಾರರು ಮನೆ ಮನೆಗೆ ತೆರಳಿ ದತ್ತಾಂಶಗಳನ್ನು ಸಂಗ್ರಹಿಸಲಿದ್ದಾರೆ. ಎರಡನೇ ಹಂತದಲ್ಲಿ ಮೇ 19ರಿಂದ 21ರವರೆಗೆ ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳನ್ನು ಏರ್ಪಡಿಸಿ ಮಾಹಿತಿ ನೀಡಲು ಅವಕಾಶ ನೀಡಲಾಗುತ್ತದೆ. ಸಮೀಕ್ಷೆಯ ಈ ಎರಡೂ ಹಂತಗಳಲ್ಲಿ ಭಾಗಿಯಾಗಲು ಸಾಧ್ಯವಾಗದವರು ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಮೇ 19ರಿಂದ 23ರವರೆಗೆ ಅವಕಾಶ ಸಿಗಲಿದೆ. ಸ್ವಯಂ ಘೋಷಣೆಗೆ ಆಧಾರ್ ನಂಬರ್ ಮತ್ತು ಜಾತಿ ಪ್ರಮಾಣಪತ್ರದ ಆರ್.ಡಿ. ಸಂಖ್ಯೆ ಕಡ್ಡಾಯವಾಗಿದೆ.

ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಜಾತಿಗಳ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕು. ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಿದ್ದರೆ ಅಂಥವರು ತಮ್ಮ ಉಪ ಜಾತಿಯನ್ನೂ ಕಡ್ಡಾಯವಾಗಿ ನಮೂದಿಸಬೇಕು. ಸಮೀಕ್ಷೆಯಲ್ಲಿ ಉಪಜಾತಿಗಳ ಜನಸಂಖ್ಯೆ, ಕುಟುಂಬಗಳ ಸಂಖ್ಯೆ, ಪಡೆದಿರುವ ಶಿಕ್ಷಣ, ವೃತ್ತಿ, ವಾಸಿಸುವ ಪ್ರದೇಶ, ಹೊಂದಿರುವ ಸೌಲಭ್ಯಗಳು ಮುಂತಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದ ಮಾಹಿತಿಗಳು, ಸರ್ಕಾರಿ ಉದ್ಯೋಗ, ಖಾಸಗಿ ಉದ್ಯೋಗ, ಭೂಮಿಯ ಒಡೆತನ, ಆದಾಯ, ಸರ್ಕಾರದಿಂದ ಪಡೆದಿರುವ ಸೌಲಭ್ಯಗಳು, ರಾಜಕೀಯ ಪ್ರಾತಿನಿಧ್ಯದ ಮಾಹಿತಿಯನ್ನೂ ನಮೂದಿಸಲಾಗುತ್ತದೆ.

ನ್ಯಾಷನಲ್ ಕಾಲೇಜು ಮೈದಾನದಲ್ಲಿ ವಾರ್ಷಿಕ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಆಟ, ಪಾಠದ ಜೊತೆ ಪರಿಸರ ರಕ್ಷಣೆಗೆ ಆದ್ಯತೆ ನೀಡಬೇಕು. ಬೀದಿಯಲ್ಲಿ ಬಿದ್ದಿರುವ ಪ್ಲಾಸ್ಟಿಕ್‌ಗಳನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು' ಎಂದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಕರೆ ನೀಡಿದ್ದಾರೆ.ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಿ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಯೋಜಿಸಿದ್ದ 77 ನೇ ವಾರ್ಷಿಕ ಅಥ್ಲೆಟಿಕ್ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಎನ್.ಇ.ಎಸ್. ಸಂಸ್ಥೆಯ ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ ಮಾತನಾಡಿ, 'ಕ್ರೀಡೆ, ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು. ಕ್ರೀಡೆಯಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯವಿದೆ' ಎಂದು ಹೇಳಿದರು.

ಎನ್.ಇ.ಎಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ವಿ. ವೆಂಕಟಶಿವಾರೆಡ್ಡಿ, ಖಜಾಂಚಿ ತಲ್ಲಂ ದ್ವಾರಕಾನಾಥ್, ಸಹ ಉಪಾಧ್ಯಕ್ಷರಾದ ವಿ. ಮಂಜುನಾಥ್, ಜಂಟಿ ಕಾರ್ಯದರ್ಶಿ ಸುಧಾಕರ್ ಎಸ್ತೂರಿ ಉಪಸ್ಥಿತರಿದ್ದರು.

ಫ್ಲೆಕ್ಸ್ ತಡೆಗೆ ಎಸ್‌ಒಪಿ ಜಾರಿ

ಕಾನೂನು ಉಲ್ಲಂಘಿಸಿ ಫ್ಲೆಕ್ಸ್ ಮುದ್ರಿಸುವವರ ಮೇಲೆ ಎಫ್‌ಐಆರ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬ್ಯಾನರ್, ಫ್ಲೆಕ್ಸ್, ಕಟೌಟ್ ಅಳವಡಿಸುವವರು, ಅದರಲ್ಲಿರುವ ವ್ಯಕ್ತಿಗಳು, ಮುದ್ರಕರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ, ತೆರವಿನ ಸಂಪೂರ್ಣ ವೆಚ್ಚವನ್ನು ಅವರಿಂದಲೇ ವಸೂಲಿ ಮಾಡಲು ಅನುವಾಗುವ ಪರಿಷ್ಕೃತ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) ಜಾರಿ ಮಾಡಲಾಗಿದೆ.

ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 158ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿನ ಯಾವುದೇ ಕಟ್ಟಡ, ಭೂಮಿ, ರಚನೆ, ಗೋಡೆ ಅಥವಾ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಮುಖ್ಯ ಆಯುಕ್ತರ ಲಿಖಿತ ಅನುಮತಿಯಿಲ್ಲದೆ ಫ್ಲೆಕ್ಸ್, ಬ್ಯಾನರ್, ಕಟೌಟ್ ಹಾಗೂ ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ.

ಮುಖ್ಯ ಆಯುಕ್ತರು ಲಿಖಿತ ಅನುಮತಿ ಸಲ್ಲಿಸದಿದ್ದರೆ, ಮುದ್ರಣ ಘಟಕದವರು ಯಾವುದೇ ರೀತಿಯ ಜಾಹೀರಾತುಗಳನ್ನು ಮುದ್ರಿಸಬಾರದು. ಕಾನೂನು ಉಲ್ಲಂಘಿಸಿ ಮುದ್ರಿಸಿದರೆ ಅವರ ಪರವಾನಗಿ ರದ್ದುಗೊಳಿಸುವ ಜೊತೆಗೆ ಕ್ರಿಮಿನಲ್ ಮೊಕದ್ದಮೆ ಹಾಕಲು ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಫ್ಲೆಕ್ಸ್, ಬ್ಯಾನರ್, ಕಟೌಟ್ ಹಾಗೂ ಇನ್ನಿತರೆ ಜಾಹೀರಾತುಗಳನ್ನು ತೆರವು ಮಾಡುವ ವೆಚ್ಚವನ್ನು ಆಸ್ತಿ ತೆರಿಗೆ ಸಂಗ್ರಹಿಸುವ ಮಾದರಿಯಲ್ಲಿ ಬಡ್ಡಿ ಮತ್ತು ದಂಡಗಳೊಂದಿಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು. ಈ ದಂಡವನ್ನು ಪಾವತಿಸದಿದ್ದರೆ, ಆಸ್ತಿ ತೆರಿಗೆಯಲ್ಲಿ ಅದನ್ನು ಸೇರಿಸಿ ವಸೂಲಿ ಮಾಡಬೇಕು. ಪೊಲೀಸರು ಸಂಪೂರ್ಣ ಸಹಕಾರ ನೀಡಿ, ತ್ವರಿತವಾಗಿ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳಬೇಕು.

ಎಸ್‌ಒಪಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಲು ವಲಯದ ಜಂಟಿ ಆಯುಕ್ತರನ್ನು ನೋಡಲ್ ಅಧಿಕಾರಿಯಾಗಿ ಹಾಗೂ ವಲಯ ಆಯುಕ್ತರನ್ನು ಮೇಲ್ವಿಚಾರಣೆ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ವಲಯ ಆಯುಕ್ತರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಉಪ ಪೊಲೀಸ್ ಕಮಿಷನರ್ (ಡಿಸಿಪಿ) ಹಾಗೂ ಪಾಲಿಕೆಯ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಭೆ ನಡೆಸಬೇಕು.

ಪೊಲೀಸ್ ಕಮಿಷನರ್ ಅವರು ಎಸ್‌ಒಪಿಯನ್ನು ಪಾಲಿಕೆಯ ಸಮನ್ವಯದೊಂದಿಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬೆಂಗಳೂರು ನಗರಕ್ಕೆ ಒಬ್ಬರು ನೋಡಲ್ ಅಧಿಕಾರಿ ಮತ್ತು ಪೊಲೀಸ್ ಠಾಣೆವಾರು ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಹೆಸರು, ಹುದ್ದೆ ಮತ್ತು ಮೊಬೈಲ್ ವಿವರಗಳನ್ನೊಳಗೊಂಡ ಲಿಖಿತ ಆದೇಶ ಹೊರಡಿಸಬೇಕು.

ಬಿಬಿಎಂಪಿ ಜಾಹೀರಾತು ವಿಭಾಗದ ವಿಶೇಷ ಆಯುಕ್ತರಿಗೆ ನೆರವಿಗೆ ಜಾಹೀರಾತಿನ ಉಪ ಆಯುಕ್ತರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತರು, ನಗರ ಪೊಲೀಸ್ ಕಮಿಷನರ್ ಅವರು ಎಸ್‌ಒಪಿ ಅನುಷ್ಠಾನದ ಬಗ್ಗೆ ನಿಯಮಿತವಾಗಿ ಪರಿಶೀಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.



ಅಕ್ರಮವಾಗಿ ಹಾಕಲಾಗಿದ್ದ ಫ್ಲೆಕ್ಸ್ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿಯವರು ಕಳೆದ ತಿಂಗಳಷ್ಟೆ ನಡೆಸಿದ್ದರು –ಪ್ರಜಾವಾಣಿ ಚಿತ್ರ

ಜಾಹೀರಾತು ನಿಯಂತ್ರಣ ತಂಡ ರಚನೆ

ಮಾರ್ಷಲ್ ಮತ್ತು ಪ್ರಹರಿಯವರ ಸಹಯೋಗದಲ್ಲಿ ಕಿರಿಯ/ ಸಹಾಯಕ/ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳನ್ನು ಒಳಗೊಂಡ ಜಾಹೀರಾತು ನಿಯಂತ್ರಣ ತಂಡವನ್ನು ವಲಯವಾರು ವಲಯ ಆಯುಕ್ತರು ರಚಿಸಬೇಕು. ಫ್ಲೆಕ್ಸ್, ಬ್ಯಾನರ್‌ಗಳ ವಿರುದ್ಧ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಅವರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಬೇಕು. ಫ್ಲೆಕ್ಸ್, ಬ್ಯಾನರ್ ಪ್ರದರ್ಶನದ ಬಗ್ಗೆ ದೂರು ಸ್ವೀಕರಿಸಲು ಎಇಇ ಅವರು ನಿಯಂತ್ರಣ ಕೊಠಡಿ ಸ್ಥಾಪಿಸಿ, ದೂರವಾಣಿ ಸಂಖ್ಯೆಯನ್ನು ಪೊಲೀಸ್ ಠಾಣೆಗೆ ನೀಡಬೇಕು. 1533 ಮತ್ತು ಸಹಾಯ ಆ್ಯಪ್‌ನಲ್ಲಿ ಬಂದಂತಹ ದೂರುಗಳನ್ನೂ ತಕ್ಷಣ ಪರಿಶೀಲಿಸಿ, ಕ್ರಮ ಕೈಗೊಳ್ಳಬೇಕು.

ಪೊಲೀಸರೊಂದಿಗೆ ಸಮನ್ವಯ

- ಬಿಬಿಎಂಪಿ ಜಾಹೀರಾತು ನಿಯಂತ್ರಣ ತಂಡಗಳು 24/7 ಕಾರ್ಯನಿರ್ವಹಿಸಬೇಕು. ಈ ತಂಡದ ಒಬ್ಬರು ಎಲ್ಲ ಸಮಯದಲ್ಲೂ ಪೊಲೀಸ್ ಠಾಣೆಯಲ್ಲಿ ಹಾಜರಿರಬೇಕು
- ಕಾರ್ಯನಿರ್ವಾಹಕರ ಹೆಸರು, ಹುದ್ದೆ, ಮೊಬೈಲ್ ಮತ್ತು ನಿಯಂತ್ರಣ ಕೊಠಡಿ ಸಂಖ್ಯೆಯ ವಿವರಗಳ ಜಾಹೀರಾತು ನಿಯಂತ್ರಣ ತಂಡದ ಪಟ್ಟಿಯನ್ನು ಪ್ರತಿ ಪೊಲೀಸ್ ಠಾಣೆಗೆ ನೀಡಬೇಕು ಹಾಗೂ ಸಾರ್ವಜನಿಕರ ಮಾಹಿತಿಗೆ ಪ್ರಕಟಿಸಬೇಕು
- ಪ್ರತಿ ಪೊಲೀಸ್ ಠಾಣೆಗೆ ಒಬ್ಬರನ್ನು ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಆಯಾ ಪೊಲೀಸ್ ಠಾಣೆಯ ಮುಖ್ಯಾಧಿಕಾರಿ ಹಾಗೂ ಸಹಾಯಕ ಸಬ್ ಇನ್‌ಸ್ಪೆಕ್ಟರ್‌ಗಳ ವಿವರ ನೀಡಬೇಕು
- ಹೊಯ್ಸಳ ಮತ್ತು ಇತರೆ ಪೊಲೀಸ್ ಗಸ್ತು ಸಿಬ್ಬಂದಿ ಗಸ್ತು ಸಮಯದಲ್ಲಿ ಯಾವುದಾದರೂ ಫ್ಲೆಕ್ಸ್, ಬ್ಯಾನರ್, ಕಟೌಟ್ ಹಾಗೂ ಇನ್ನಿತರೆ ಜಾಹೀರಾತು ಅಳವಡಿಸಿರುವುದು, ಅಳವಡಿಸುತ್ತಿರುವುದು ಕಂಡುಬಂದಲ್ಲಿ ಅಂಥವರನ್ನು ಕಾನೂನಿನ ಪ್ರಕಾರ ಸ್ಥಳದಲ್ಲೇ ಬಂಧಿಸಬೇಕು ಹಾಗೂ ಬಿಬಿಎಂಪಿ ಜಾಹೀರಾತು ನಿಯಂತ್ರಣ ತಂಡಕ್ಕೆ ಮಾಹಿತಿ ನೀಡಬೇಕು
- ಬಿಬಿಎಂಪಿ ಜಾಹೀರಾತು ನಿಯಂತ್ರಣ ತಂಡ ಬ್ಯಾನರ್, ಕಟೌಟ್ ತೆರವುಗೊಳಿಸಿ, ಎಫ್‌ಐಆರ್ ದಾಖಲಿಸಬೇಕು
- ಪ್ರಥಮ ವರ್ತಮಾನ ವರದಿಯಲ್ಲಿ ಜಾಹೀರಾತುಗಳನ್ನು ಅಳವಡಿಸಿದವರು ಹಾಗೂ ಅವುಗಳಲ್ಲಿರುವ ವ್ಯಕ್ತಿಗಳ ಹೆಸರು ದಾಖಲಿಸಬೇಕು
- ಪೊಲೀಸರು ಎಫ್‌ಐಆರ್ ದಾಖಲಿಸಿ, ಬಂಧನ ಸೇರಿದಂತೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು.
- ಫ್ಲೆಕ್ಸ್, ಬ್ಯಾನರ್, ಕಟೌಟ್ ಹಾಗೂ ಇನ್ನಿತರೆ ಜಾಹೀರಾತುಗಳನ್ನು ಮುದ್ರಿಸಿದ ಮುದ್ರಕರ ವಿರುದ್ಧ ಪ್ರಚೋದನೆ ಹಾಗೂ ಸಹ-ಸಂಚುಕೋರರೆಂದು ಪರಿಗಣಿಸಿ ಕ್ರಿಮಿನಲ್ ಮೊಕದ್ದಮೆ ಹೂಡಬೇಕು
- ಎಫ್‌ಐಆರ್‌ನಲ್ಲಿ ಬಿಬಿಎಂಪಿ ಕಾಯ್ದೆ 2020 (ಸೆಕ್ಷನ್ 254, 326), ಕರ್ನಾಟಕ ಮುಕ್ತ ಸ್ಥಳಗಳು (ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ) ಕಾಯ್ದೆ 1981, ಭಾರತೀಯ ನ್ಯಾಯ ಸಂಹಿತಾ, ಆಸ್ತಿ ನಾಶ ಮತ್ತು ನಷ್ಟ ತಡೆಗಟ್ಟುವಿಕೆ ಕಾಯ್ದೆ, 1981, ಸಾರ್ವಜನಿಕ ಆಸ್ತಿಗೆ ಹಾನಿ ತಡೆಗಟ್ಟುವಿಕೆ ಕಾಯ್ದೆ, 1984 ಯಾವುದೇ ಇತರ ಅನ್ವಯವಾಗುವ ಕಾನೂನುಗಳನ್ನು ನಮೂದಿಸಬೇಕು

'ಉಗ್ರರ ದಾಳಿ– ಶಾಂತಿ ಕದಡುವ ಯತ್ನ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಇಸ್ಲಾಂ ಧರ್ಮದಲ್ಲಿ ಅಮಾಯಕರನ್ನು ಕೊಲ್ಲುವುದು ನಿಷೇಧ
- ಕಠಿಣ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಆಗ್ರಹ

ಬೆಂಗಳೂರು: ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿ ಖಂಡನೀಯ ಎಂದು ಕರ್ನಾಟಕ ಮುಸ್ಲಿಂ ಮುತ್ತಹದ್ ಮಹಜ್ ಬೆಂಗಳೂರು ನಗರ ಘಟಕ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಜ್‌ನ ಮುಖಂಡರಾದ ಮೌಲಾನಾ ಮಕ್ಸೂದ್ ಇಮ್ರಾನ್ ರಶಾದಿ, ಇಫ್ತಿಕಾರ್ ಅಹ್ಮದ್ ಖಾಸ್ಮಿ, 'ಇದು ದೇಶದ ಕೋಮು ಸೌಹಾರ್ದ ಮತ್ತು ಶಾಂತಿಯನ್ನು ಕದಡುವ ಪ್ರಯತ್ನವಾಗಿದೆ. ಇಸ್ಲಾಂ ಧರ್ಮದ ಹೆಸರಿನಲ್ಲಿ ಇಂತಹ ದಾಳಿಗಳನ್ನು ಮಾಡುವ ಭಯೋತ್ಪಾದಕರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟ ಕುಟುಂಬದವರೊಂದಿಗೆ ನಾವೆಲ್ಲರೂ ಒಗ್ಗಟ್ಟಿನಿಂದ ನಿಲ್ಲುತ್ತೇವೆ. ಇಸ್ಲಾಂ ಧರ್ಮದಲ್ಲಿ ಅಮಾಯಕರನ್ನು ಕೊಲ್ಲುವುದು ನಿಷೇಧಿಸಲಾಗಿದೆ. ನಾವು ಜವಾಬ್ದಾರಿಯುತ ಭಾರತೀಯ ನಾಗರಿಕರಾಗಿ ಮತ್ತು ಶಾಂತಿ, ನ್ಯಾಯ ಹಾಗೂ ಮಾನವ ಜೀವನದ ಪಾವಿತ್ರ್ಯತೆಯನ್ನು ಎತ್ತಿಹಿಡಿಯುತ್ತೇವೆ' ಎಂದು ಹೇಳಿದರು.

ಇದು ಮಾನವನ ಮೇಲೆ ನಡೆದ ದಾಳಿ ಮಾತ್ರವಲ್ಲ, ಭಾರತದ ಬಹುತ್ವ, ಶಾಂತಿ ಸಹಬಾಳ್ವೆಯ ಮೌಲ್ಯಗಳ ಮೇಲೆ ನಡೆಸಿದ ದಾಳಿಯಾಗಿದೆ. ಈ ಕರಾಳ ಶಕ್ತಿಗಳನ್ನು ಯಶಸ್ವಿಯಾಗಲು ಬಿಡಬಾರದು. ನಮ್ಮನ್ನು ವಿಭಜಿಸುವುದೇ ಅವರ ಗುರಿಯಾಗಿದೆ. ಆದ್ದರಿಂದ ನಾವು ಒಂದು ರಾಷ್ಟ್ರವಾಗಿ, ಒಗ್ಗಟ್ಟಿನಿಂದ ನಿಲ್ಲಬೇಕಿದೆ' ಎಂದರು.

'ದೇಶದ ಎಲ್ಲ ಸಮುದಾಯಗಳು ಶಾಂತಿಯಿಂದ, ಒಗ್ಗಟ್ಟಿನಿಂದ ಇರಬೇಕು. ಈ ದುರಂತದಿಂದಾಗಿ ಕೀಳುಮಟ್ಟದ ದ್ವೇಷದ ಬೀಜಗಳು ಚಿಗುರಲು ಅವಕಾಶ ನೀಡಬಾರದು. ಅಂತರ್‌ಧರ್ಮೀಯ ಸಂವಾದ, ಪರಸ್ಪರ ಗೌರವ ಹಾಗೂ ಕೋಮು ಸಾಮರಸ್ಯವನ್ನು ಉತ್ತೇಜಿಸಲು ಒಟ್ಟಾಗಿ ಕೆಲಸ ಮಾಡಬೇಕು' ಎಂದು ಅವರು ಮನವಿ ಮಾಡಿದರು.

ಬಿಜೆಪಿ ಐ.ಟಿ ಘಟಕದ ಮುಖ್ಯಸ್ಥರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕುರಿತು ಅವಹೇಳನಕಾರಿಯಾಗಿ ಪೋಸ್ಟ್ ಹಾಕಲಾಗಿದೆ ಎಂದು ಆರೋಪಿಸಿ ದೂರು ನೀಡಲಾಗಿದ್ದು, ಬಿಜೆಪಿಯ ಐ.ಟಿ ಹಾಗೂ ಸಾಮಾಜಿಕ ಮಾಧ್ಯಮಗಳ ನಿರ್ವಹಣೆ ವಿಭಾಗದ ಮುಖ್ಯಸ್ಥರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾನೂನು ಮತ್ತು ಮಾನವ ಹಕ್ಕುಗಳ ಘಟಕದ ಮುಖ್ಯಸ್ಥ ಸಿ.ಎಂ. ಧನಂಜಯ್ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಪಹಲ್ಗಾಮ್‌ನಲ್ಲಿ ನಡೆದ ಘಟನೆಯನ್ನು ಆಧಾರವಾಗಿ ಇಟ್ಟುಕೊಂಡು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಬಗ್ಗೆ ಬಿಜೆಪಿ ಕರ್ನಾಟಕ ಐ.ಟಿ ಹಾಗೂ ಸೋಷಿಯಲ್ ಮೀಡಿಯಾ ಎಂಬ 'ಎಕ್ಸ್' ಖಾತೆಯಲ್ಲಿ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ರಾಹುಲ್ ಗಾಂಧಿ ಅವರು ವಿದೇಶಕ್ಕೆ ಹೋದಾಗ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆದಿದೆ. ರಾಹುಲ್ ಅವರು ಪ್ರತಿ ಬಾರಿ ವಿದೇಶಕ್ಕೆ ಹೋದಾಗಲೂ ಈ ರೀತಿಯ ಕೃತ್ಯಗಳು ನಡೆದಿವೆ ಎಂದು ಪೋಸ್ಟ್ ಹಾಕಲಾಗಿದೆ. ಇದರಿಂದ ಸಮಾಜದಲ್ಲಿ ಶಾಂತಿ–ಸೌಹಾರ್ದ ಹಾಳಾಗಲಿದೆ. ಗುಂಪು ಘರ್ಷಣೆ ಉಂಟು ಮಾಡುವ ಉದ್ದೇಶದಿಂದ ಹಾಗೂ ರಾಹುಲ್ ಗಾಂಧಿ ಅವರ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಿ ಗೌರವಕ್ಕೆ ಧಕ್ಕೆ ತರಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಇಂದಿನಿಂದ ಅಂತರರಾಷ್ಟ್ರೀಯ ಕಾಫಿ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಕಾಫಿ ಮಂಡಳಿಯು ಮತ್ತು ಕಾಫಿ ಬೆಳೆಗಾರರ ಸಂಘಗಳು ಜಂಟಿಯಾಗಿ ಆಯೋಜಿಸಿರುವ ಮೂರು ದಿನಗಳ 'ಭಾರತ–ಅಂತರರಾಷ್ಟ್ರೀಯ ಕಾಫಿ ಉತ್ಸವ–2025' ಶುಕ್ರವಾರ (ಏ.24) ಆರಂಭವಾಗಲಿದೆ.

'ನಗರದ ಜಯಮಹಲ್ ರಸ್ತೆಯಲ್ಲಿರುವ ಚಾಮರ ವಜ್ರ ಸಭಾಂಗಣದಲ್ಲಿ ಉತ್ಸವ ಆಯೋಜಿಸಲಾಗಿದೆ. ಇದು ಭಾರತದ ಮೊದಲ ಕಾಫಿ ಉತ್ಸವವಾಗಿದ್ದು, ಪ್ರತಿ ವರ್ಷವೂ ನಡೆಸಲಾಗುವುದು' ಎಂದು ಕಾಫಿ ಮಂಡಳಿಯ ಹಣಕಾಸು ನಿರ್ದೇಶಕ ಎನ್.ಎನ್.ನರೇಂದ್ರ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಭಾರತದ ಎಲ್ಲ ಕಾಫಿ ಬೆಳೆಗಾರರು, ಕಾಫಿ ಕ್ಯೂರರ್‌ಗಳು, ಕಾಫಿ ಕೆಫೆ ಕಂಪನಿಗಳನ್ನು ಒಂದೆಡೆ ಸೇರಿಸಲು ಈ ಉತ್ಸವವನ್ನು ಆಯೋಜಿಸಲಾಗಿದೆ. ಕಾಫಿ ಬೆಳೆ, ಮಾರುಕಟ್ಟೆ, ರಫ್ತು ಉತ್ತೇಜನ ಮತ್ತು ಮೌಲ್ಯವರ್ಧನೆ ಕುರಿತಾದ ಸಂಶೋಧನೆಗಳು ಮತ್ತು ಚರ್ಚೆಗಳಿಗೆ ಉತ್ಸವವು ವೇದಿಕೆ ಒದಗಿಸಲಿದೆ' ಎಂದು ಅವರು ತಿಳಿಸಿದರು.

'ಸ್ಪೆಷಲ್ ಕಾಫಿ ಅಸೋಸಿಯೇಷನ್ ಆಫ್ ಇಂಡಿಯಾ'ಗೆ (ಎಸ್‌ಸಿಎಐ) ಉತ್ಸವ ನಿರ್ವಹಣೆಯ ಹೊಣೆಗಾರಿಕೆ ನೀಡಲಾಗಿದೆ. ಎಸ್‌ಸಿಎಐ ಅಧ್ಯಕ್ಷ ಡಿ.ಎಂ.ಪೂರ್ಣೇಶ್, 'ಉತ್ಸವದಲ್ಲಿ ಅಂದಾಜು 20,000 ಮಂದಿ ಭಾಗಿಯಾಗಬಹುದು ಎಂದು ನಿರೀಕ್ಷಿಸಲಾಗಿದೆ. ಒಂದು ದಿನದ ಪ್ರವೇಶಕ್ಕೆ ₹250 ಮತ್ತು ಮೂರೂ ದಿನಗಳ ಪ್ರವೇಶಕ್ಕೆ ₹500 ಶುಲ್ಕ ನಿಗದಿ ಮಾಡಲಾಗಿದೆ. ಉತ್ಸವದಲ್ಲಿ 15 ಕಾರ್ಯಾಗಾರಗಳನ್ನು ಆಯೋಜಿಸಿದ್ದು, ಎಲ್ಲರೂ ಅವುಗಳಲ್ಲಿ ಭಾಗಿಯಾಗಬಹುದು' ಎಂದರು.

'ಉತ್ಸವದ ಭಾಗವಾಗಿ ನಾಲ್ಕು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 80ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕಾಫಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ' ಎಂದರು.

ರಾಜ್ಯಮಟ್ಟದ ಕಲಾ ಸಂಸ್ಕೃತಿ ಉತ್ಸವ

'ಸಮಾಜ ಬೆಸೆಯುವ ಜನಪದ ಕಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಪದ ಕಲೆ ಮತ್ತು ಸಂಸ್ಕೃತಿ ಸಮಾಜವನ್ನು ಬೆಸೆಯುತ್ತಿವೆ. ಇಂಥ ಕಲೆಗಳಿಂದಲೇ ಗ್ರಾಮೀಣ ಭಾಗದಲ್ಲಿ ಒಂದಷ್ಟು ಶಾಂತಿ, ನೆಮ್ಮದಿ ನೆಲಸಿದೆ' ಎಂದು ವೈದ್ಯ ಆಂಜಿನಪ್ಪ ಅಭಿಪ್ರಾಯಪಟ್ಟರು.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ರಂಗ ಸಂಸ್ಥಾನ ಏರ್ಪಡಿಸಿದ್ದ ರಾಜ್ಯಮಟ್ಟದ ಕಲಾ ಸಂಸ್ಕೃತಿ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರದರ್ಶಿತವಾದ ಜನಪದ ಕಲೆಗಳು ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತವೆ. ಮಾನವೀಯ ಮೌಲ್ಯಗಳನ್ನು ಗಟ್ಟಿಗೊಳಿಸುತ್ತವೆ' ಎಂದು ತಿಳಿಸಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, 'ಹೆಚ್ಚು ಶಿಕ್ಷಣ ಪಡೆಯುತ್ತಾ ಮನಸ್ಸು ಸಂಕುಚಿತವಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲಿಲ್ಲ. ಎಲ್ಲಿ ಮನಸ್ಸು ಮುಕ್ತವಾಗಿ ತೆರೆದುಕೊಳ್ಳುತ್ತದೆಯೋ ಅದೇ ನಿಜವಾದ ಶಿಕ್ಷಣ ಎಂದು ಅಭಿಪ್ರಾಯಪಟ್ಟರು.

ರಂಗ ಸಂಸ್ಥಾನದ ಅಧ್ಯಕ್ಷ ಬಂಡ್ಲಹಳ್ಳಿ ವಿಜಯಕುಮಾರ್ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಮೇಜರ್ ಆನಂದಪ್ಪ ಈರಮುಖದವರ, ಪತ್ರಕರ್ತರಾದ ಲೇಪಾಕ್ಷಿ ಸಂತೋಷರಾವ್, ವಾಣಿಜ್ಯ ವಿಭಾಗದ ನಿರ್ದೇಶಕರಾದ ಡಾ. ಆರ್. ಭಾರ್ಗವಿ, ಕನ್ನಡ ವಿಭಾಗದ ಡಾ. ಗೀತಾ ಅವರು ಉಪಸ್ಥಿತರಿದ್ದರು. ಶಿವಕುಮಾರ್ ಬೇಗಾರ ಅವರ ತಂಡವು 'ಕಂಸವಧೆ' ಯಕ್ಷಗಾನ ಪ್ರದರ್ಶಿಸಿತು. ರಾಮನಗರದ ಚಂದ್ರಶೇಖರ್ ತಂಡದವರು ಡೊಳ್ಳು ಕುಣಿತ ಪ್ರದರ್ಶಿಸಿದರು. ಹಿದಾಯತ್ ಅಹಮದ್ ಅವರ ನಿರ್ದೇಶನದಲ್ಲಿ ಸರ್ಕಾರಿ ಕಲಾ ಕಾಲೇಜಿನ ತಂಡದವರು ಹಾಲಕ್ಕಿ ಸುಗ್ಗಿ ಕುಣಿತವನ್ನು ಪ್ರದರ್ಶಿಸಿದರು. ಆನೇಕಲ್‌ನ ನಳಿನಾಕ್ಷಿ ತಂಡದವರು ಕೋಲಾಟ ಪ್ರದರ್ಶಿಸಿದರು.



ಕಲಾ ಸಂಸ್ಕೃತಿ ಉತ್ಸವದಲ್ಲಿ ಯಕ್ಷಗಾನ ಡೊಳ್ಳು ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಕೋಲಾಟ ಪ್ರದರ್ಶಿಸಿದ ವಿವಿಧ ತಂಡಗಳೊಂದಿಗೆ ಗಣ್ಯರು.

ಶುಕ್ರವಾರ, ಏಪ್ರಿಲ್ 25, 2025 | ಬೆಂಗಳೂರು | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಂಗೀತೋತ್ಸವ... ಬೆಂಗಳೂರಿನ ಚಾಮರಾಜಪೇಟೆ ಕೋಟೆ ಪ್ರೌಢಶಾಲೆ ಆವರಣದಲ್ಲಿ ನಡೆದ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಸಂಗೀತ ಕಛೇರಿ ನೀಡಿದ ಭಾರ್ಗವಿ ವೆಂಕಟರಾಮ್

‘ಸಾಮಾನ್ಯ ಜನರ ಜೀವಕ್ಕೆ ಬೆಲೆ ಇಲ್ಲವೇ?’ 7

‘ಕಸಾಪಕ್ಕೆ ಆಡಳಿತಾಧಿಕಾರಿ ನೇಮಿಸಿ’ 6

7 ನಗರ ಪಾಲಿಕೆಗಳನ್ನು ರಚಿಸುವ ಸಾಧ್ಯತೆಯ ಕಾಯ್ದೆ– ಅಧಿಸೂಚನೆ ಪ್ರಕಟ

‘ಗ್ರೇಟರ್ ಬೆಂಗಳೂರು’ಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ವಿಭಜಿಸಿ, ಗರಿಷ್ಠ ಏಳು ನಗರ ಪಾಲಿಕೆಗಳನ್ನು ರಚಿಸುವ ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ ಕುರಿತು ಅಧಿಸೂಚನೆ ಹೊರಡಿಸಲಾಗಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಸೂದೆ ಬಗ್ಗೆ ಮಾರ್ಚ್ 25ರಂದು ಕೆಲವು ಸ್ಪಷ್ಟನೆಗಳನ್ನು ಕೇಳಿದ್ದರು. ಏಪ್ರಿಲ್ 24ರಂದು ಮಸೂದೆಗೆ ಅವರು ಒಪ್ಪಿಗೆ ನೀಡಿದ್ದಾರೆ. ಹೀಗಾಗಿ, ಗುರುವಾರ ಸಂಜೆಯೇ ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ ಅನ್ನು ಅಧಿಸೂಚಿಸಿ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ಯಂತೆ ಸರ್ಕಾರ ‘ಗ್ರೇಟರ್ ಬೆಂಗಳೂರು’ ಪ್ರದೇಶದ ವ್ಯಾಪ್ತಿಯನ್ನು ಘೋಷಿಸಲಿದೆ. ಬೆಂಗಳೂರು ನಗರ ಜಿಲ್ಲೆ ಮಾತ್ರವಲ್ಲ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ಕೆಲವು ಪ್ರದೇಶಗಳು ಸೇರಿದಂತೆ ಸರ್ಕಾರ ಅಧಿಸೂಚಿಸುವ ಪ್ರದೇಶಗಳೂ ‘ಗ್ರೇಟರ್ ಬೆಂಗಳೂರು’ ವ್ಯಾಪ್ತಿಗೆ ಬರಲಿವೆ. ಇದು ಅಸ್ತಿತ್ವಕ್ಕೆ ಬಂದ ಬಳಿಕ, ಅದರ ವ್ಯಾಪ್ತಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ನಗರ ಪಾಲಿಕೆ, ಗ್ರಾಮ ಪಂಚಾಯಿತಿಗಳು ರದ್ದಾಗಲಿವೆ.

‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ರಂತೆ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ (ಜಿಬಿಎ), ಪಾಲಿಕೆ ಹಾಗೂ ವಾರ್ಡ್‌ಗಳೆಂಬ ಮೂರು ಹಂತದಲ್ಲಿ ಆಡಳಿತ ವ್ಯವಸ್ಥೆ ಇರಲಿದೆ. ಕಾಯ್ದೆ ಜಾರಿಯಾದ 120 ದಿನಗಳಲ್ಲಿ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ರಚನೆಯಾಗಬೇಕು. ಜಿಬಿಎ ವ್ಯಾಪ್ತಿಯಲ್ಲಿ ತಲಾ 150 ವಾರ್ಡ್‌ಗಳ ಏಳು ನಗರ ಪಾಲಿಕೆಗಳನ್ನು ಸೃಜಿಸುವ ಅವಕಾಶವಿದೆ. ಪ್ರತಿ ನಗರ ಪಾಲಿಕೆಯನ್ನು ‘ಬೆಂಗಳೂರು’ ಎಂಬ ಮೊದಲ ಪದದಿಂದ ನಾಮಕರಣ ಮಾಡಲಾಗುತ್ತದೆ.

ನಗರ ಪಾಲಿಕೆಗಳಿಗೆ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಿಬಿಎ ಅಂತಿಮಗೊಳಿಸುತ್ತದೆ. ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ನೌಕರರನ್ನೂ ಜಿಬಿಎಯೇ ನೇಮಕ ಮಾಡುತ್ತದೆ. ‘ಸಿ’ ಮತ್ತು ‘ಡಿ’ ನೌಕರರನ್ನು ನಗರ ಪಾಲಿಕೆಗಳ ಆಯುಕ್ತರು ನೇಮಕ ಮಾಡಿಕೊಳ್ಳಬಹುದಾದರೂ ಅವರ ಮೇಲೆ ಯಾವ ರೀತಿಯ ಶಿಸ್ತು ಕ್ರಮವನ್ನೂ ತೆಗೆದುಕೊಳ್ಳುವಂತಿಲ್ಲ. ಸಂವಿಧಾನದ ಅನುಚ್ಛೇದ 243 ಜೆಡ್‌ಇನಲ್ಲಿ ನಗರ ಪಾಲಿಕೆಗೆ ನೀಡಲಾಗಿರುವ ನಗರ ಯೋಜನೆ ಸಿದ್ಧಪಡಿಸುವ ಜವಾಬ್ದಾರಿಗಳನ್ನೂ, ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸೃಜಿಸಲಾಗುವ ‘ಬೆಂಗಳೂರು ಮಹಾನಗರ ಯೋಜನಾ ಸಮಿತಿ’ಗೆ (ಬಿಎಂಪಿಸಿ) ನೀಡಲಾಗಿದೆ.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ಕ್ಕೆ ಮುಖ್ಯಮಂತ್ರಿಯವರು ಅಧ್ಯಕ್ಷರಾಗಲಿದ್ದು, ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗೃಹ, ನಗರಾಭಿವೃದ್ಧಿ, ಸಾರಿಗೆ, ಇಂಧನ ಸಚಿವರು ಹಾಗೂ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು, ಮುಖ್ಯ ಆಯುಕ್ತರು, ಪಾಲಿಕೆಗಳ ಮೇಯರ್‌ಗಳು, ಪ್ರತಿ ಪಾಲಿಕೆಯಿಂದ ನಾಮನಿರ್ದೇಶನಗೊಳ್ಳುವ ಇಬ್ಬರು ಸದಸ್ಯರು, ಬಿಡಿಎ, ಜಲಮಂಡಳಿ, ಬಿಎಂಟಿಸಿ, ಬಿಎಂಆರ್‌ಸಿಎಲ್, ಬೆಸ್ಕಾಂ, ನಗರ ಪೊಲೀಸ್ ಕಮಿಷನರ್, ಬಿಎಂಎಲ್‌ಟಿಎ ಸಿಇಒ, ಬಿಎಸ್‌ಡಬ್ಲ್ಯುಎಂಎಲ್ ಎಂಡಿ, ಗ್ರೇಟರ್ ಬೆಂಗಳೂರು ನಗರ ಯೋಜನೆಯ ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರಿನ ಪ್ರಧಾನ ಎಂಜಿನಿಯರ್ ಸದಸ್ಯರಾಗಿರುತ್ತಾರೆ.

3ನೇ ಪುಟ ನೋಡಿ

ಮುಖ್ಯಾಂಶಗಳು


- 2ರಿಂದ 7 ನಗರ ಪಾಲಿಕೆಗಳು
- 100 ವಾರ್ಡ್‌ನಿಂದ 125 ವಾರ್ಡ್–ಪ್ರತಿ ನಗರ ಪಾಲಿಕೆಯ ವ್ಯಾಪ್ತಿ
- ಮೇಯರ್, ಉಪ ಮೇಯರ್ ಅಧಿಕಾರ ಅವಧಿ 30 ತಿಂಗಳು

ಸ್ಪಷ್ಟನೆ ಕೇಳಿದ್ದ ರಾಜ್ಯಪಾಲರು

ವಿಧಾನ ಮಂಡಲದಲ್ಲಿ ಮಾರ್ಚ್ 13ರಂದು ಅಂಗೀಕಾರವಾಗಿದ್ದ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕಾಗಿ ಮಾರ್ಚ್ 17ರಂದು ಕಳುಹಿಸಲಾಗಿತ್ತು. ಮಸೂದೆಯು ಸಂವಿಧಾನದ 74ನೇ ತಿದ್ದುಪಡಿಗೆ ವಿರುದ್ಧವಾಗಿದೆ ಮತ್ತು ದೆಹಲಿ ಮಹಾನಗರ ಪಾಲಿಕೆಯ ವಿಭಜನೆ ಸಂದರ್ಭದಲ್ಲಿ ಆದಂತೆ ಸಮಸ್ಯೆಗಳು ಸೃಷ್ಟಿಯಾಗುತ್ತವೆ’ ಎಂದು ಬೆಂಗಳೂರು ಟೌನ್‌ಹಾಲ್ ಸಂಘಟನೆ ಹಾಗೂ ಬಿಜೆಪಿ ನಾಯಕರ ನಿಯೋಗಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದವು. ಮಸೂದೆಯನ್ನು ತಡೆ ಹಿಡಿಯುವಂತೆಯೂ ಒತ್ತಾಯಿಸಿದ್ದವು.

‘ಎರಡೂ ಮನವಿಗಳನ್ನು ನಾನು ಪರಿಶೀಲಿಸಿದ್ದೇನೆ. ಈ ಮಸೂದೆಯು ಕಾನೂನಾತ್ಮಕ ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಒಳಗೊಂಡಿದೆ. ಆದ್ದರಿಂದ ಎರಡೂ ಮನವಿಪತ್ರಗಳಲ್ಲಿ ಪ್ರಸ್ತಾಪಿಸಿರುವ ಪ್ರಮುಖ ವಿಷಯಗಳ ಕುರಿತು ಸ್ಪಷ್ಟನೆ ಅಗತ್ಯವಿದೆ’ ಎಂದು ರಾಜ್ಯಪಾಲರು ಮಾರ್ಚ್ 25ರಂದು ಮಸೂದೆಯನ್ನು ಹಿಂದಿರುಗಿಸಿದ್ದರು. ಅದಕ್ಕೆ ಅಗತ್ಯ ಸ್ಪಷ್ಟನೆಯನ್ನು ರಾಜ್ಯ ಸರ್ಕಾರ ನೀಡಿತ್ತು.

ಬಿಬಿಎಂಪಿ ವಿಭಜನೆ ನಡೆದುಬಂದ ಹಾದಿ...



- **22 ಸೆಪ್ಟೆಂಬರ್ 2014:** ಬಿಬಿಎಂಪಿ ವಿಭಜನೆಗೆ ವರದಿ ಸಲ್ಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ನೇತೃತ್ವದ ತಜ್ಞರ ಸಮಿತಿ ರಚನೆ
- **12 ಜೂನ್ 2023:** ಬಿಬಿಎಂಪಿ ವಿಭಜನೆಗೆ ವರದಿ ಸಲ್ಲಿಸಲು ರಚಿಸಲಾಗಿದ್ದ ತಜ್ಞರ ಸಮಿತಿಯ ಪುನರ್ ರಚನೆ
- **18 ಜುಲೈ 2023:** ತಜ್ಞರ ಸಮಿತಿ ಮತ್ತೊಮ್ಮೆ ಪುನರ್ ರಚಿಸಿ ಬಿಬಿಎಂಪಿ ಸುಧಾರಣಾ ಸಮಿತಿಯ (ಬ್ರ್ಯಾಂಡ್ ಬೆಂಗಳೂರು ಸಮಿತಿ) ಎಂದು ನಾಮಕರಣ
- **8 ಜುಲೈ 2024:** ಬಿಬಿಎಂಪಿ ಸುಧಾರಣಾ ಸಮಿತಿಯಿಂದ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024’ರ ಕರಡು ಸರ್ಕಾರಕ್ಕೆ ಸಲ್ಲಿಕೆ
- **22 ಜುಲೈ 2024;** ಮೂರು ಹಂತದಲ್ಲಿ ಹೊಸ ಆಡಳಿತ ವ್ಯವಸ್ಥೆ ಕಲ್ಪಿಸುವ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024’ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ
- **23 ಜುಲೈ 2024:** ವಿಧಾನಸಭೆಯಲ್ಲಿ ಮಸೂದೆ ಮಂಡನೆ
- **25 ಜುಲೈ 2024;** ವಿರೋಧ ಪಕ್ಷಗಳ ಆಗ್ರಹದಂತೆ ಮಸೂದೆ ಪರಿಶೀಲನೆಗೆ ಜಂಟಿ ಸದನ ಸಮಿತಿ ರಚನೆಗೆ ಒಪ್ಪಿಗೆ
- **22 ಆಗಸ್ಟ್ 2024:** ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ರಚನೆ
- **21 ಫೆಬ್ರುವರಿ 2025;** ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯಿಂದ ಸ್ಪೀಕರ್ ಅವರಿಗೆ ಪರಿಶೀಲನಾ ವರದಿ ಸಲ್ಲಿಕೆ
- **5 ಮಾರ್ಚ್ 2025;** ಪರಿಶೀಲನಾ ಸಮಿತಿ ಶಿಫಾರಸಿನಂತೆ ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024 ವಿಧಾನಸಭೆಯಲ್ಲಿ ಮಂಡನೆ
- **10 ಮಾರ್ಚ್ 2025:** ಮಸೂದೆಗೆ ವಿಧಾನಸಭೆಯಲ್ಲಿ ಅಂಗೀಕಾರ
- **12 ಮಾರ್ಚ್ 2025:** ಕೆಲವು ತಿದ್ದುಪಡಿಗಳೊಂದಿಗೆ ವಿಧಾನ ಪರಿಷತ್‌ನಲ್ಲಿ ಮಸೂದೆಗೆ ಒಪ್ಪಿಗೆ
- **13 ಮಾರ್ಚ್ 2025;** ತಿದ್ದುಪಡಿಗಳೊಂದಿಗೆ ವಿಧಾನಸಭೆಯಲ್ಲಿ ಮತ್ತೊಮ್ಮೆ ಅಂಗೀಕಾರ
- **17 ಮಾರ್ಚ್ 2025;** ಮಸೂದೆಗೆ ರಾಜ್ಯಪಾಲರ ಅಂಕಿತಕ್ಕಾಗಿ ರಾಜಭವನಕ್ಕೆ ರವಾನೆ
- **25 ಮಾರ್ಚ್ 2025;** ಕೆಲವು ಸ್ಪಷ್ಟನೆ ಕೋರಿ ರಾಜ್ಯಪಾಲರಿಂದ ಮಸೂದೆ ವಾಪಸ್
- **24 ಏಪ್ರಿಲ್ 2025;** ಮಸೂದೆಗೆ ರಾಜ್ಯಪಾಲರ ಅಂಕಿತ

ಭೂಸ್ವಾಧೀನ ಕೈಬಿಡಲು ದೇವೇಗೌಡ ಒತ್ತಾಯ

ಪ್ರಜಾವಾಣಿ ವಾರ್ತೆ



ಎಚ್‌.ಡಿ .ದೇವೇಗೌಡ

ಬೆಂಗಳೂರು: ಬಿಡದಿ ಉಪನಗರ ಯೋಜನೆಗೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನ ಮಾಡಿಕೊಳ್ಳುತ್ತಿರುವ ರೈತರ ಜಮೀನುಗಳನ್ನು ಕೈಬಿಡುವಂತೆ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ‘ಪ್ರಸ್ತಾವಿತ ಉಪನಗರ ಯೋಜನೆಗಾಗಿ ಬಿಡದಿ ಹೋಬಳಿಯ ಬೈರಮಂಗಲ ಮತ್ತು ಕಂಚುಗಾರನ ಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 24 ಹಳ್ಳಿಗಳ 10 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಕೈಗಾರಿಕಾ ವಲಯಗಳ ಸ್ಥಾಪನೆಗಾಗಿ ಈಗಾಗಲೇ ಸಾವಿರಾರು ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕರ್ನಾಟಕ ಗೃಹ ಮಂಡಳಿ, ಇತರ ಸರ್ಕಾರಿ ಸಂಸ್ಥೆಗಳು ಬಿಡದಿಯ ಸುತ್ತಲೂ ಹಲವಾರು ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ಉಳಿದಿರುವ ಜಮೀನನ್ನು ಮತ್ತೆ ಸ್ವಾಧೀನಕ್ಕೆ ಪಡೆದರೆ ಅವರ ಬದುಕು ಬೀದಿಗೆ ಬೀಳುತ್ತದೆ. ಪರಿಸರಕ್ಕೂ ಧಕ್ಕೆಯಾಗುತ್ತದೆ’ ಎಂದು ಹೇಳಿದ್ದಾರೆ.

ಉಳಿದ ಕೃಷಿ ಭೂಮಿಯಲ್ಲಿ ರೈತರು ಹೈನುಗಾರಿಕೆ, ರೇಷ್ಮೆ, ತೋಟಗಾರಿಕೆ, ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ. ಸಣ್ಣ ರೈತರ ಜೀವನಕ್ಕೆ ಈ ಜಮೀನುಗಳೇ ಆಧಾರವಾಗಿವೆ.ಉಪನಗರ ಯೋಜನೆಯಿಂದಾಗಿ ಸಾವಿರಾರು ರೈತ ಕುಟುಂಬಗಳ ಜೀವನ ಸಂಕಷ್ಟಕ್ಕೆ ಸಿಲುಕುತ್ತವೆ. ಹಾಗಾಗಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

ಬಸ್‌ನಲ್ಲಿ ಯುವತಿಗೆ ಲೈಂಗಿಕ ಕಿರುಕುಳ ನಿರ್ವಾಹಕನನ್ನು ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಮುಡಿಪು–ಮಂಗಳೂರು ಸ್ಟೇಟ್ ಬ್ಯಾಂಕ್ ನಡುವೆ ಸಂಚರಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ನಿದ್ದೆ ಹೋಗಿದ್ದ ಯುವ ತಿಗೆ ಲೈಂಗಿಕ ಕಿರುಕುಳ ನೀಡಿದ ನಿರ್ವಾಹಕನನ್ನು ಕೊಣಾಜೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಮೂಲದ ಪ್ರದೀಪ ಕಾಶಪ್ಪ ನಾಯ್ಕರ್ (35) ಈ ಕೃತ್ಯವೆಸಗಿದ ಆರೋಪಿ.

ಕೆಎಸ್‌ಆರ್‌ಟಿಸಿಯು ಪ್ರದೀಪ್‌ನನ್ನು ಸೇವೆಯಿಂದ ಅಮಾನತುಗೊಳಿಸಿದೆ.

ನಿರ್ವಾಹಕ ಪ್ರದೀಪ್ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಏ. 22ರಂದು ಯುವತಿಯ ತೋಳ ಸಂದಿಯಲ್ಲಿ ಕೈತೂರಿ ಲೈಂಗಿಕ ಕಿರುಕುಳ ನೀಡಿದ್ದ. ದೃಶ್ಯವನ್ನು ಬಸ್‌ನ ಪ್ರಯಾಣಿಕರರೊಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ಈ ವಿಚಾರ ಗಮನಕ್ಕೆ ಬರುತ್ತಿದ್ದಂತೆಯೇ ಕೊಣಾಜೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು.



ಪ್ರದೀಪ ಕಾಶಪ್ಪ ನಾಯ್ಕರ್

‘ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 74 (ಮಹಿಳೆಯ ಮಾನಭಂಗ ಯತ್ನ) ಹಾಗೂ ಸೆಕ್ಷನ್ 75ರ (ಮಹಿಳೆಗೆ ಲೈಂಗಿಕ ಕಿರುಕುಳ) ಅಡಿ ಎಫ್‌ಐಆರ್ ದಾಖಲಾಗಿದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ವಜಾಕ್ಕೆ ಸಚಿವ ಸೂಚನೆ: ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಮುಗಿಸಬೇಕು. ಆರೋಪಿ ನಿರ್ವಾಹಕನನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಕೆಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ

ಮೈಸೂರು ಸೀಮೆಯ ಅಭಿವೃದ್ಧಿಗೆ ₹3,647 ಕೋಟಿ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಗಡಿ ಜಿಲ್ಲೆ ಚಾಮರಾಜನಗರವೂ ಸೇರಿದಂತೆ ಮೈಸೂರು ಕಂದಾಯ ವಿಭಾಗದಲ್ಲಿ ₹3,647 ಕೋಟಿ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಇದೇ ಮೊದಲ ಬಾರಿಗೆ ‘ಜರ್ಮನ್ ಟೆಂಟ್’ನಲ್ಲಿ ಮೂರು ತಾಸು ನಡೆದ ಸಭೆಯಲ್ಲಿ ಮಂಡನೆಯಾದ 78 ವಿಷಯಗಳಿಗೂ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಇದು ಐತಿಹಾಸಿಕ ಸಭೆ. ಇಂಧನ, ನೀರಾವರಿ, ಲೋಕೋಪಯೋಗಿ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಬುಡಕಟ್ಟು ಅಭಿವೃದ್ಧಿ, ಹಾಡಿಗಳಿಗೆ ರಸ್ತೆ ನಿರ್ಮಾಣ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ’ ಎಂದು ತಿಳಿಸಿದರು.

‘ಸಣ್ಣ ನೀರಾವರಿ ಮತ್ತು ಜಲಸಂಪನ್ಮೂಲ ಇಲಾಖೆಗಳ ವತಿಯಿಂದ 29 ಕಾಮಗಾರಿಗಳನ್ನು ₹1,787 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗುವುದು. ಇದರಿಂದ ಮೈಸೂರು ಕಂದಾಯ ವಿಭಾಗದ ಜಿಲ್ಲೆಗಳ ಜಲಾಶಯ, ಕೆರೆಗಳು, ಕಾಲುವೆಗಳ ಅಭಿವೃದ್ಧಿಯಾಗಲಿದೆ’ ಎಂದರು.

> **ಮೈಸೂರು ವಿಭಾಗದಲ್ಲಿ ತುರ್ತಾಗಿ ಮಾಡಬೇಕಾದ ಕೆಲಸ ಹಾಗೂ ಬಜೆಟ್‌ನಲ್ಲಿ ಹೇಳಿದ್ದ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಪವಿತ್ರ ಸ್ಥಳದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದೇವೆ. ಚಾಮರಾಜನಗರದ ಭಾಗ್ಯದ ಬಾಗಿಲು ತೆರೆಯುವ ನಿಟ್ಟಿನಲ್ಲಿ ಸಭೆ ಉತ್ತಮವಾಗಿ ನಡೆದಿದೆ. ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದೆ**
> **ಎಚ್‌.ಕೆ. ಪಾಟೀಲ** ಕಾನೂನು ಸಚಿವ

‘ಪರಿಶಿಷ್ಟ ಪಂಗಡದ ಜನರಿರುವ ಪ್ರದೇಶಗಳ ಅಭಿವೃದ್ಧಿಗೆಂದು ಪ್ರಮುಖವಾಗಿ 4 ಯೋಜನೆಗಳಿಗೆ ₹203 ಕೋಟಿ ವಿನಿಯೋಗಿಸಲಾಗುತ್ತಿದೆ. ರಸ್ತೆ, ಚರಂಡಿ, ವಿದ್ಯುತ್ ದೀಪ ಸೇರಿದಂತೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಇದಕ್ಕೂ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ. ಕೆರೆ ತುಂಬಿಸುವ ಯೋಜನೆ, ಆಸ್ಪತ್ರೆಗಳ ಹಾಸಿಗೆ ಸಾಮರ್ಥ್ಯವನ್ನು ಹೆಚ್ಚಿಸುವುದು, ವಿವಿಧ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸುವ ತೀರ್ಮಾನವನ್ನೂ ಕೈಗೊಳ್ಳಲಾಗಿದೆ’ ಎಂದರು.

ಬದನವಾಳು ಅಭಿವೃದ್ಧಿ: ಭಾರತ್ ಜೋಡೊ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿಯವರು ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮಕ್ಕೆ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಭೇಟಿ ನೀಡಿದ್ದರು. ಈ ಗ್ರಾಮಕ್ಕೆ ಮಹಾತ್ಮ ಗಾಂಧೀಜಿಯವರೂ ಹಿಂದೆ ಭೇಟಿ ಕೊಟ್ಟಿದ್ದರು. ಅದರ ನೆನಪಿಗಾಗಿ ₹40 ಕೋಟಿ ವೆಚ್ಚದಲ್ಲಿ ಶತಮಾನೋತ್ಸವ ಭವನ ಹಾಗೂ ಗ್ರಾಮೀಣ ಅಭಿವೃದ್ಧಿ ಕೇಂದ್ರವನ್ನು ನಿರ್ಮಿಸಲಾಗುವುದು’ ಎಂದು ತಿಳಿಸಿದರು.

‘ರಾಜ್ಯದ ನಾಲ್ಕೂ ಕಂದಾಯ ವಿಭಾಗಗಳಲ್ಲಿ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಕಲಬುರಗಿಯಲ್ಲಿ ನಡೆದಿದ್ದ ಮೊದಲ ಸಭೆಯಲ್ಲಿ 56 ವಿಷಯಗಳಿಗೆ ಅನುಮೋದನೆ ನೀಡಲಾಗಿತ್ತು. ಈಗ ಮೈಸೂರಿನಲ್ಲಿ 78 ವಿಷಯಗಳ ಬಗ್ಗೆ ಚರ್ಚಿಸಿ ಮಂಜೂರಾತಿ ನೀಡಲಾಗಿದೆ. ಬೆಳಗಾವಿ ವಿಭಾಗದ ಸಭೆಯನ್ನು ವಿಜಯಪುರದಲ್ಲಿ ಹಾಗೂ ಬೆಂಗಳೂರು ವಿಭಾಗದ ಸಭೆಯನ್ನು ನಂದಿ ಬೆಟ್ಟದಲ್ಲಿ ನಡೆಸಲು ನಿರ್ಧರಿಸಿದ್ದೇವೆ’ ಎಂದು ಅವರು ಹೇಳಿದರು.

ಹಣವಿಲ್ಲದೇ ಇದೆಲ್ಲಾ ಬಂತಾ?

ಗ್ಯಾರಂಟಿಗೆ ಹಣ ನೀಡುತ್ತಿರುವುದರಿಂದ ಸರ್ಕಾರದ ಬೊಕ್ಕಸದಲ್ಲಿ ದುಡ್ಡಿಲ್ಲ ಎಂದು ವಿರೋಧ ಪಕ್ಷದವರು ಆರೋಪಿಸುತ್ತಾರೆ. ಆದರೆ, ಅದೆಲ್ಲ ಸುಳ್ಳು. ಸರ್ಕಾರದಲ್ಲಿ ದುಡ್ಡಿಲ್ಲದಿದ್ದರೆ ಒಂದೇ ಸಚಿವ ಸಂಪುಟ ಸಭೆಯಲ್ಲಿ ₹ 3,647 ಕೋಟಿ ಮೊತ್ತದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಗುತ್ತಿತ್ತೇ?’ ಎಂದು ಮುಖ್ಯಮಂತ್ರಿ ಕೇಳಿದರು.

‘ಕಾವೇರಿ ಆರತಿಗೆ ₹ 92.30 ಕೋಟಿ’

‘ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜ ಸಾಗರ ಜಲಾಶಯದ ಬಳಿ ಗಂಗಾ ಆರತಿ ಮಾದರಿಯಲ್ಲಿ, ಕಾವೇರಿ ಆರತಿ ನಡೆಸಲು ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗೆ ₹ 92.30 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಈ ಯೋಜನೆ ಬಗ್ಗೆ ಹಿಂದೆಯೇ ಹೇಳಿದ್ದೆವು. ದಸರಾ ಉತ್ಸವದ ವೇಳೆ ಕಾವೇರಿ ಆರತಿ ನಡೆಸುವ ಉದ್ದೇಶವಿದೆ. ಅದಕ್ಕಾಗಿ ಸಿದ್ಧತೆ ನಡೆಸಲು ಅನುದಾನ ನೀಡಲಾಗುವುದು’ ಎಂದು ತಿಳಿಸಿದರು.



96ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ವರನಟನ ಗುಣಗಾನ, ಗೀತೆಗಳ ಗಾಯನ ಕಾರ್ಯಕ್ರಮ

‘ಕನ್ನಡ ಪರ ಧ್ವನಿಯಾಗಿದ್ದ ರಾಜ್‌ಕುಮಾರ್’

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಅವರು ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ರಿಜ್ವಾನ್ ಅರ್ಷದ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನುಂ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಎಂ. ನರಸಿಂಹಲು ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಾಡು–ನುಡಿಗೆ ಸಂಕಷ್ಟ ಎದುರಾದಾಗಲೆಲ್ಲ ವರನಟ ರಾಜ್‌ಕುಮಾರ್ ಅವರು ಕನ್ನಡಿಗರ ಪರ ನಿಂತು, ಧ್ವನಿಯಾಗುತ್ತಿದ್ದರು. ಆದರೆ, ಈಗಿನ ನಟರು ಕನ್ನಡ ಭಾಷೆಗೆ ಸಂಕಷ್ಟ ಬಂದರೂ ಮುಂದೆ ಬರುತ್ತಿಲ್ಲ’ ಎಂದು ಶಾಸಕ ರಿಜ್ವಾನ್ ಅರ್ಷದ್ ಬೇಸರ ವ್ಯಕ್ತಪಡಿಸಿದರು.

ಡಾ.ರಾಜ್‌ಕುಮಾರ್ ಪ್ರತಿಷ್ಠಾನದ ಸಹಯೋಗದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರಾಜ್‌ಕುಮಾರ್ ಅವರ 96ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

‘ಈಗಿನ ಸೂಪರ್ ಸ್ಟಾರ್‌ಗಳು ರಾಜ್‌ಕುಮಾರ್ ಆಗಲು ಸಾಧ್ಯವಿಲ್ಲ. ರಾಜ್‌ಕುಮಾರ್ ಕನ್ನಡಿಗರಾದದ್ದು ನಮ್ಮ ಅದೃಷ್ಟ. ಅವರನ್ನು ಕೇವಲ ಒಬ್ಬ ನಟರನ್ನಾಗಿ ನೋಡಲು ಸಾಧ್ಯವಿಲ್ಲ. ಅವರು ಈ ನಾಡಿನ ಸಾಂಸ್ಕೃತಿಕ ಲೋಕದ ಪ್ರತಿನಿಧಿ ಯಾಗಿದ್ದರು. ಅಭಿನಯದಲ್ಲಿ ನೈಜತೆ ಕಾಪಾಡಿಕೊಂಡಿದ್ದ ಅವರು, ಕನ್ನಡಕ್ಕೆ ಸಂಕಷ್ಟ ಎದುರಾದಗಲೆಲ್ಲ ಧ್ವನಿ ಎತ್ತುತ್ತಿದ್ದರು. ಈಗ ಚಿತ್ರರಂಗದಲ್ಲಿ ಅಂತಹವರು ಕಾಣಸಿಗುವುದಿಲ್ಲ. ನಟರೆನಿಸಿಕೊಂಡವರು ಕೇವಲ ಹೇಳಿಕೆ ನೀಡಿ ಸುಮ್ಮನಾಗುತ್ತಾರೆ. ರಾಜ್‌ಕುಮಾರ್ ಅವರು ಅಗಲಿ ಹಲವು ವರ್ಷಗಳಾದರೂ ಇವತ್ತಿಗೂ ತಮ್ಮ ನಟನೆ ಮೂಲಕ ನಮ್ಮ ನಡುವೆ ಬದುಕಿದ್ದಾರೆ’ ಎಂದರು.

ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್, ‘ಅಪ್ಪಾಜಿ ಅವರು ಇನ್ನೂ ಹತ್ತು ವರ್ಷಗಳು ನಮ್ಮ ಜತೆಗೆ ಇರಬೇಕೆಂಬ ಆಸೆಯಿತ್ತು. ಆಸ್ಪತ್ರೆಯ ಹಾಸಿಗೆ ಮೇಲೆ, ಗಾಲಿ ಕುರ್ಚಿಯ ಮೇಲೆ ಇರುವ ನೆನಪುಗಳನ್ನು ಬಿಟ್ಟು ಹೋಗಬಾರದೆಂಬ ಭಾವನೆ ಅವರಲ್ಲಿತ್ತು. ಅವರು ನಮ್ಮ ನಡುವೆ ಸುಂದರ ನೆನಪುಗಳನ್ನು ಬಿಟ್ಟು ಹೋಗಿದ್ದಾರೆ’ ಎಂದು ಹೇಳಿದರು.

ನಿರ್ದೇಶಕ ಎಸ್. ನಾರಾಯಣ್, ‘ರಾಜ್‌ಕುಮಾರ್ ಅವರು ಎಷ್ಟೇ ಎತ್ತರಕ್ಕೆ ಏರಿದರೂ ತಮ್ಮತನವನ್ನು ಬಿಟ್ಟುಕೊಡಲಿಲ್ಲ. ಅವರಿಗೆ ಸಿಕ್ಕಂತಹ ಪಾತ್ರಗಳು ಯಾವುದೇ ಕಲಾವಿದನಿಗೆ ಸಿಗಲು ಸಾಧ್ಯವಿಲ್ಲ. ಪಾತ್ರಗಳೇ ಅವರನ್ನು ಹುಡುಕಿಕೊಂಡು ಬಂದವು. ಅವರು ತಾವೊಬ್ಬರೇ ಬೆಳೆಯದೆ ಚಿತ್ರೋದ್ಯಮ ಬೆಳೆಸಿದರು. ಅವರು ಕಟ್ಟಿದ ಚಿತ್ರರಂಗವನ್ನು ನಾವು ಕೆಡವುತ್ತಿದ್ದೇವೆ. ಈಗ ಚಿತ್ರರಂಗ ದುಃಸ್ಥಿತಿಯಲ್ಲಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ‘ಭಾಷೆ, ಸಂಸ್ಕೃತಿ, ನೆಲ–ಜಲಕ್ಕಾಗಿ ದುಡಿದ ನಾಯಕರು ರಾಜ್‌ಕುಮಾರ್. ಎಷ್ಟೋ ಕಲಾವಿದರು ಅವರ ಗೀತೆಗಳನ್ನು ಹಾಡಿ, ಬದುಕುತ್ತಿದ್ದಾರೆ. ನನಗೆ ಅವರ ಜತೆಗೆ ಅಭಿನಯಿಸುವ ಅವಕಾಶ ಸಿಗಲಿಲ್ಲ ಎಂಬ ಕೊರಗಿದೆ’ ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ‘ಕನ್ನಡ ಕಲಿಕೆಗೆ ರಾಜ್‌ಕುಮಾರ್ ಅವರ ಸಿನಿಮಾ ಸಹಕಾರಿಯಾಯಿತು’ ಎಂದು ಸ್ಮರಿಸಿಕೊಂಡರು.

ಇದಕ್ಕೂ ಮೊದಲು ರಾಜ್‌ಕುಮಾರ್ ಅವರ ಗೀತೆಗಳ ಗಾಯನ ನಡೆಯಿತು.

ರಾಜ್‌ಕುಮಾರ್ ಮ್ಯೂಸಿಯಂ ಸ್ಥಾಪನೆಗೆ ಕ್ರಮ



ಸಿದ್ದರಾಮಯ್ಯ

ಮಲೆಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ‘ಚಾಮರಾಜನಗರ ಜಿಲ್ಲೆಯಲ್ಲಿ ವರನಟ ರಾಜ್‌ಕುಮಾರ್ ಮ್ಯೂಸಿಯಂ ಸ್ಥಾಪನೆಯನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ‘ರಾಜ್‌ಕುಮಾರ್ ನಮ್ಮವರು; ಅವರ ಬಗ್ಗೆ ನಮಗೆ ಬಹಳ ಅಭಿಮಾನವಿದೆ’ ಎಂದರು.

ಅಭಿಮಾನಿಗಳ ಸಂಭ್ರಮ

ನಗರದ ವಿವಿಧೆಡೆ ವರನಟ ದಿವಂಗತ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮದಿನವನ್ನು ಅಭಿಮಾನಿಗಳು ಗುರುವಾರ ಸಡಗರದಿಂದ ಆಚರಿಸಿದರು.

ರಾಜ್‌ಕುಮಾರ್ ಪ್ರತಿಮೆಗೆ ಹೂವಿನ ಹಾರ ಹಾಕಿ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಜನ್ಮದಿನದ ಅಂಗವಾಗಿ ನಗರದ ವಿವಿಧೆಡೆ ರಕ್ತದಾನ ಮತ್ತು ನೇತ್ರದಾನ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಯಿತು.

ಮಲ್ಲೇಶ್ವರದ ಸೇವಾ ಸದನದಲ್ಲಿ ರಾಜ್‌ಕುಮಾರ್ ಅವರ ಜನ್ಮದಿನದ ನೆನಪಿನಲ್ಲಿ ರಾಜ್‌ಕುಮಾರ್ ಅವರು ನಟಿಸಿರುವ ಹಳೆ ಚಲನಚಿತ್ರ ಗೀತೆಗಳು, ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ನಡೆಯಿತು.

ಚಲನಚಿತ್ರ ಕ್ಷೇತ್ರಕ್ಕೆ ರಾಜ್ ಕೊಡುಗೆ ಅಪಾರ: ಕರ್ನಾಟಕ ರತ್ನ, ಕನ್ನಡದ ಸಾರ್ವಭೌಮ ಎಂಬ ಬಿರುದುಗಳಿಗೆ ಭಾಜನರಾಗಿದ್ದ ರಾಜ್‌ಕುಮಾರ್ ಅವರು ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಹೇಳಿದರು.

ಬೆಂಗಳೂರು ನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ರಾಜ್‌ಕುಮಾರ್ ಅವರ 97ನೇ ಜನ್ಮದಿನಾಚರಣೆಯ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕನ್ನಡ ಕಲೆ, ಸಾಹಿತ್ಯಕ್ಕೆ ಕೀರ್ತಿಯನ್ನು ತಂದುಕೊಟ್ಟ ಶ್ರೇಯಸ್ಸು ರಾಜ್ ಕುಮಾರ್ ಅವರಿಗೆ ಸಲ್ಲುತ್ತದೆ. ಅವರು ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಪೌರಾಣಿಕ ಹಾಗೂ ಐತಿಹಾಸಿಕ ಪಾತ್ರಗಳಿಗೆ ಜೀವತುಂಬಿದ್ದಾರೆ. ಗೋಕಾಕ್ ಚಳವಳಿಯಲ್ಲಿ ಭಾಗಿಯಾಗುವ ಮೂಲಕ ಕನ್ನಡಿಗರ ಭಾಷಾಭಿಮಾನವನ್ನು ಬಡಿದೆಬ್ಬಿಸಿದ್ದರು ಎಂದು ಮೆಲುಕುಹಾಕಿದರು.

ಇದೇ ಸಂದರ್ಭದಲ್ಲಿ ರಾಜಕುಮಾರ್ ಅವರು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿದ್ದ ಯೋಗಾಭ್ಯಾಸದ ಅನುಕೂಲಗಳ ಕುರಿತು ಯುವಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ರಾಜಾಜಿನಗರದ ಎಸ್.ಜೆ.ಆರ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ವಿವಿಧ ಭಂಗಿಗಳ ಯೋಗಾಸನಗಳನ್ನು ಪ್ರದರ್ಶಿಸಿದರು.

ಜೋಗಿಲ ಸಿದ್ಧರಾಜು ಅವರ ‘ಸಂಭ್ರಮ’ ಕಲಾತಂಡದವರು ರಾಜ್‌ಕುಮಾರ್ ಅವರ ಜನಪ್ರಿಯ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಿದರು.

ಯಲಹಂಕ ವರದಿ: ಇಲ್ಲಿನ ನಗರ್ತಪೇಟೆ ರಸ್ತೆಯಲ್ಲಿರುವ ರಣಧೀರ ಕಂಠೀರವ ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ವರನಟ ರಾಜ್‌ಕುಮಾರ್ ಅವರ 97ನೇ ಜನ್ಮದಿನವನ್ನು ಆಚರಿಸಲಾಯಿತು.

ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಪೂಜೆ ಸಲ್ಲಿಸಿದ ಅಭಿಮಾನಿಗಳು, ಕೇಕ್ ಕತ್ತರಿಸಿ, ಸಿಹಿಹಂಚಿ, ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿದರು. ಅನ್ನದಾನ ಏರ್ಪಡಿಸಲಾಗಿತ್ತು.

ಸಂಘದ ಅಧ್ಯಕ್ಷ ನಾರಾಯಣ, ಪದಾಧಿಕಾರಿಗಳಾದ ನಾಗರಾಜ್, ಭಾಸ್ಕರ್, ಶೇಖರ್, ಶಕ್ತಿಗ್ರೂಪ್‌ನ ಮಂಜುನಾಥ್, ನರೇಂದ್ರಕುಮಾರ್, ಪ್ರವೀಣ್, ಅಪ್ಪಿ, ಸುಮಂತ್, ಬಾಲಾಜಿ, ನಾಗಾರ್ಜುನ, ದಶರಥ, ವೀರಭದ್ರ,ವೈ.ಸಿ, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ರಾಜಕುಮಾರ್ ಸಮಾಧಿಗೆ ಅಭಿಮಾನಿಗಳು ಭೇಟಿ ನೀಡಿದರು ಪ್ರಜಾವಾಣಿ ಚಿತ್ರ

ರಾಜ್‌ಕುಮಾರ್ ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ರಾಜ್‌ಕುಮಾರ್ ಅವರ 96ನೇ ಜನ್ಮದಿನದ ಅಂಗವಾಗಿ ನಟ ಶಿವರಾಜ್‌ಕುಮಾರ್ ದಂಪತಿ, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ, ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ರಾಜ್ ಅವರ ಸಮಾಧಿಗೆ ಗುರುವಾರ ಪೂಜೆ ಸಲ್ಲಿಸಿದರು.

ಸಾವಿರಾರು ಅಭಿಮಾನಿಗಳು ‘ಬಂಗಾರದ ಮನುಷ್ಯ’ನಿಗೆ ಪುಷ್ಪನಮನ ಅರ್ಪಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವರಾಜ್ ಕುಮಾರ್, ‘ಅಪ್ಪಾಜಿ, ಅಮ್ಮ ಹಾಗೂ ಅಪ್ಪುವನ್ನು ನೆನಪಿಸಿಕೊಳ್ಳದ ದಿನವೇ ಇಲ್ಲ. ಅಪ್ಪನ ಜನ್ಮದಿನದಂದೇ ಮಗಳ ಸಿನಿಮಾ ಬಿಡುಗಡೆಯಾಗಿದೆ. ಕಳೆದ ಫೆಬ್ರುವರಿಯಲ್ಲೇ ಸಿನಿಮಾ ಬಿಡುಗಡೆಯಾಗಬೇಕಿತ್ತು. ನನಗೆ ಶಸ್ತ್ರ ಚಿಕಿತ್ಸೆಯ ಕಾರಣ ನಿವೇದಿತಾಳೂ ಅಮೆರಿಕಕ್ಕೆ ಬಂದಿದ್ದಳು. ಹೀಗಾಗಿ ಸಿನಿಮಾ ಮುಂದೂಡಲ್ಪಟ್ಟಿತ್ತು. ಇದೀಗ ಅಪ್ಪಾಜಿ ಜನ್ಮದಿನದಂದೇ ಸಿನಿಮಾ ಪ್ರೇಕ್ಷಕರ ಎದುರಿಗೆ ಬಂದಿದೆ. ನಾನು ಅಪ್ಪಾಜಿಗೆ ಉಡುಗೊರೆ ನೀಡಿರುವುದು ನೆನಪಾಗುತ್ತಿಲ್ಲ. ನನಗೆ ಜನ್ಮ ನೀಡಿರುವುದೇ ಅವರು ನನಗೆ ನೀಡಿರುವ ಉಡುಗೊರೆ. ‘ಗಂಧದಗುಡಿ’ ಸಿನಿಮಾವೂ ಮರುಬಿಡುಗಡೆಯಾಗಿದೆ. ಇಂತಹ ಸಿನಿಮಾಗಳು ಬರಬೇಕು’ ಎಂದು ಹೇಳಿದರು.

ಜನ್ಮದಿನದ ಅಂಗವಾಗಿ ನಗರದೆಲ್ಲೆಡೆ ಅನ್ನಸಂತರ್ಪಣೆ, ರಕ್ತದಾನ ಶಿಬಿರಗಳು ನಡೆದವು.

ಸಂಕ್ಷಿಪ್ತ ಸುದ್ದಿ

ಜಲಮಂಡಳಿ: ‘ಫೋನ್ ಇನ್’ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು ಇದೇ 25ರಂದು(ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ: 080-22945119 ಮತ್ತು 080-22229639.

‘ದೂರು ಬಾರದಂತೆ ಘನತ್ಯಾಜ್ಯ ನಿರ್ವಹಣೆಯಾಗಲಿ’

ಬೆಂಗಳೂರು: ಸಾರ್ವಜನಿಕರಿಂದ ದೂರುಗಳು ಬಾರದ ರೀತಿಯಲ್ಲಿ ಘನತ್ಯಾಜ್ಯದ ವಿಲೇವಾರಿ, ನಿರ್ವಹಣೆ ಮಾಡಬೇಕೆಂದು ಬಿಬಿಎಂಪಿ ಅಧಿಕಾರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಸೂಚಿಸಿದರು.

ಕಸ ವಿಲೇವಾರಿ, ಬೀದಿ ನಾಯಿಗಳ ಹಾವಳಿ, ಕೆರೆ ನೈರ್ಮಲೀಕರಣ ಹಾಗೂ ಇನ್ನಿತರ ವಿಷಯಗಳ ಕುರಿತು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ಬಿಬಿಎಂಪಿ ಅಧಿಕಾರಿಗಳನ್ನು ಅವರು ಗುರುವಾರ ವಿಚಾರಣೆ ನಡೆಸಿದರು.

ಅಂಗಾಂಗ ಜೋಡಣಾ ಉಚಿತ ಶಿಬಿರ 27ಕ್ಕೆ

ಬೆಂಗಳೂರು: ನಾರಾಯಣ ಸೇವಾ ಸಂಸ್ಥಾನದಿಂದ ಏಪ್ರಿಲ್ 27ರಂದು (ಭಾನುವಾರ) ಬಸವನಗುಡಿಯ ಮಾರಾಠ ಹಾಸ್ಟೆಲ್‌ನ ಮೈದಾನದಲ್ಲಿ ಕೃತಕ ಅಂಗಾಂಗ ಜೋಡಣಾ ಶಿಬಿರ ನಡೆಯಲಿದೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥಾನದ ಶಾಖಾ ಮುಖ್ಯಸ್ಥ ವಿನೋದ್ ಜೈನ್, ನಿರ್ದೇಶಕ ಭಗವಾನ್ ಪ್ರಸಾದ್ ಗೌರ್, ‘ನಮ್ಮ ಸಂಸ್ಥೆಯಿಂದ ದೇಶದ ಹಲವೆಡೆ ಪ್ರತಿ ವಾರ ಶಿಬಿರವನ್ನು ಆಯೋಜಿಸುತ್ತೇವೆ’ ಎಂದರು.

ನಗರದಲ್ಲಿ ಇಂದು

‘ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ–2025’ ಪುಸ್ತಕ ಬಿಡುಗಡೆ: ಉದ್ಘಾಟನೆ: ಜಿ. ಶ್ರೀಧರ್, ಅತಿಥಿ: ಕೆ.ಎಲ್. ಅಶೋಕ್, ಅಧ್ಯಕ್ಷತೆ: ಸಿ.ಎಸ್. ಪಾಟೀಲ್, ಸಮಾರೋಪ ಸಮಾರಂಭ: ಎಚ್.ಕೆ. ಪಾಟೀಲ, ಅತಿಥಿ: ಬಿ.ಎಲ್. ಶಂಕರ್, ಆಯೋಜನೆ: ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಸ್ಥಳ: ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣ, ಬನಶಂಕರಿ, ಬೆಳಿಗ್ಗೆ 9.30

ಕರ್ನಾಟಕ ಫಿಸಿಕಾನ್–2025: ಅತಿಥಿಗಳು: ಯು.ಟಿ. ಖಾದರ್, ಡಾ. ಶರಣಪ್ರಕಾಶ ಪಾಟೀಲ, ನಸೀರ್ ಅಹ್ಮದ್, ಸ್ಥಳ: ಅರಮನೆ ಮೈದಾನ, ಗೇಟ್ ಸಂಖ್ಯೆ–8, ಬೆಳಿಗ್ಗೆ 10

‘ಬಿ.ಎಸ್. ಆಮೂರ ಅವರ ಬದುಕು–ಬರಹ’ ಜನ್ಮಶತಮಾನೋತ್ಸವ ವಿಚಾರಸಂಕಿರಣ: ಉದ್ಘಾಟನೆ: ಎಸ್. ದಿವಾಕರ್, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಅತಿಥಿ: ರವಿ ಆಮೂರ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಚುಂಚಾದ್ರಿ ಉತ್ಸವ 2025 –ಮಹಿಳಾ ಕ್ರೀಡೆ ಮತ್ತು ಸಂಸ್ಕೃತಿಯ ಸಂಭ್ರಮ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಶಾಲಿನಿ ರಜನೀಶ್, ಅಧ್ಯಕ್ಷತೆ: ಕೆ. ಗೋಪಾಲಯ್ಯ, ಆಯೋಜನೆ: ರಾಜ್ಯ ಚುಂಚಾದ್ರಿ ಮಹಿಳಾ ಪ್ರತಿಷ್ಠಾನ, ಸ್ಥಳ: ಬಿಜಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಮಹಾಲಕ್ಷ್ಮಿಪುರ, ಬೆಳಿಗ್ಗೆ 10

ನಾಮದೇವ ಭವನದ ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಜ್ಞಾನೇಶ್ವರ ತುಳಸಿದಾಸ್ ನಾಮದಾಸ್ ಮಹಾರಾಜ, ಅಧ್ಯಕ್ಷತೆ: ನಾರಾಯಣರಾವ್ ವಿ. ಕೋಪರ್ಡೆ, ಅತಿಥಿಗಳು: ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿ, ಶಿವರಾಜ ತಂಗಡಗಿ, ಜಗದೀಶ್ ಶೆಟ್ಟರ್, ಸಿ.ಸಿ. ಪಾಟೀಲ, ಉದಯ್ ಬಿ. ಗರುಡಾಚಾರ್, ಪ್ರಕಾಶ ಕೋಳಿವಾಡ, ಜಯಮಾಲಾ, ನಾಗರಾಜ ಯಾದವ, ಆಯೋಜನೆ: ಕರ್ನಾಟಕ ರಾಜ್ಯ ನಾಮದೇವ ಸಿಂಪಿ ಸಮಾಜ, ಸ್ಥಳ: ಹೊಂಬೇಗೌಡನಗರ, ವಿಲ್ಸನ್‌ಗಾರ್ಡನ್, ಮಧ್ಯಾಹ್ನ 12

ಕಾಶ್ಮೀರ ಉಗ್ರರ ದಾಳಿ ಖಂಡಿಸಿ ಸಭೆ: ಭಾಗವಹಿಸುವವರು: ರೋಶನ್ ಬೇಗ್, ಸೈಯದ್ ಅಶ್ರಫ್, ಬೇಲಗೂರು ಸಮಿಉಲ್ಲಾ, ಆಯೋಜನೆ: ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆ, ಸ್ಥಳ: ಮಸ್ಜಿದ್–ಎ–ತಾಹ ಆವರಣ, ಮತ್ತಿಕೆರೆ, ಮಧ್ಯಾಹ್ನ 2

ಮಾಧ್ಯಮ ಮಿತ್ರರೊಡನೆ ದಲಿತ ಉದ್ದಿಮೆದಾರರ ಸಮಾಲೋಚನೆ: ಭಾಗವಹಿಸುವವರು: ಎಲ್. ಹನುಮಂತಯ್ಯ, ಆರ್. ಮಂಜುನಾಥ್, ಗಣಪತಿ ಎಂ. ಸ್ವಾಧಿ, ಗಣಪತಿ ರಾಥೋಡ್, ಪ್ರಸನ್ನ, ಮೋಹನಾಂಗಯ್ಯ ಸ್ವಾಮಿ, ಚಂದ್ರಶೇಖರ್, ಎನ್. ಚನ್ನಕೇಶವ, ಎಸ್. ನಾರಾಯಣಸ್ವಾಮಿ, ಪಿ. ವಿಜಯಕುಮಾರ್, ಸೇವಂತ ವಾಸುದೇವ ಕೆ., ಚಂದ್ರಕಾಂತ್ ಹಾಗರಕಿ, ಜನಾರ್ದನ ವಿ., ಯಲ್ಲಪ್ಪ ಬೆಂಡಿಗೇರಿ, ನರಸಿಂಹ ಎಂ., ಸಿ.ಜಿ. ಶ್ರೀನಿವಾಸನ್, ಆಯೋಜನೆ: ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರಜತ ಮಹೋತ್ಸವ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಎಲ್.ಕೆ. ಅತೀಕ್, ಡಿ.ಟಿ. ಶ್ರೀನಿವಾಸ್, ಆಯೋಜನೆ: ಶಿವ ಶಕ್ತಿ ನೃತ್ಯ ಶಾಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5



ಪುರುಷೋತ್ತಮ ಬಿಳಿಮಲೆ

‘ಭಾಷಾವಾರು ರಾಜ್ಯಗಳ ರಚನೆಯ ಆಶಯ ಈಡೇರಿದೆಯೇ?’, ಆರ್. ಪ್ರಭುಶಂಕರ್–60 ಅಭಿನಂದನೆ: ಉದ್ಘಾಟನೆ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಮನು ಬಳಿಗಾರ್, ವಿಷಯ ಮಂಡನೆ: ಸ.ರ. ಸುದರ್ಶನ, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ವೀರ ಸನ್ಯಾಸಿಯ ಆತ್ಮಗೀತೆ: ಆಯೋಜನೆ: ಪರಮ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

‘ನೀರ್ಮಾದಳ ಹೂವಿನೊಂದಿಗೆ’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಪಾದ್ ಭಟ್, ಅಭಿನಯ: ಇಂದಿರಾ ನಾಯರ್, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಸರಸ್ವತಿ ಮತ್ತು ತಂಡ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ವೆಂಕಟೇಶ್ ಕುಮಾರ್, ವ್ಯಾಸಮೂರ್ತಿ ಕಟ್ಟಿ, ಕೇಶವ ಜೋಶಿ,ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಕಾರ್ಮಿಕರ ಬಹಿರಂಗ ಸಭೆ ಮೇ 1ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೇ 1ರಂದು ಪುರಭವನದಲ್ಲಿ ಬಹಿರಂಗ ಸಭೆ ಆಯೋಜಿಸಲಾಗುತ್ತದೆ ಎಂದು ಕರ್ನಾಟಕ ವರ್ಕರ್ಸ್ ಯೂನಿಯನ್ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೂನಿಯನ್ ಪ್ರಧಾನ ಕಾರ್ಯದರ್ಶಿ ಇ.ಕೆ.ಎನ್. ರಾಜನ್, ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಗಮನಹರಿಸುತ್ತಿಲ್ಲ. ಇಎಸ್ಐ, ವೇತನ ಮಿತಿ ರದ್ದು, ಗ್ರಾಚುಯಿಟಿ ಕಾಯ್ದೆಗೆ ತಿದ್ದುಪಡಿ ಕೋರಿ ಲಕ್ಷಾಂತರ ಕಾರ್ಮಿಕರು ಸಹಿ ಮಾಡಿದ ಮನವಿ ಪತ್ರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಳುಹಿಸಿದರೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ಬದಲಾಯಿಸಲಾಗುತ್ತಿದೆ’ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ, ನಟ ಅಶೋಕ್ ಮತ್ತು ಕವಯತ್ರಿ ಕೆ. ಷರೀಫಾ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ರಕ್ತದ ಅಭಾವ ನೀಗಿಸಲು ಹೊಸ ಕೇಂದ್ರ ಸ್ಥಾಪನೆಗೆ ಅನುಮೋದನೆ

ವಾಣಿವಿಲಾಸ ಆಸ್ಪತ್ರೆಯಲ್ಲಿ ರಕ್ತನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಂದಿರ ಸಾವು ತಡೆ ಹಾಗೂ ನಗರದಲ್ಲಿ ರಕ್ತದ ಅಭಾವ ನೀಗಿಸುವ ಉದ್ದೇಶದಿಂದ ವಾಣಿವಿಲಾಸ ಆಸ್ಪತ್ರೆಯಲ್ಲಿ ಹೊಸದಾಗಿ ರಕ್ತನಿಧಿ ಕೇಂದ್ರ ಪ್ರಾರಂಭಿಸಲಾಗುತ್ತಿದೆ.

ಈ ಕೇಂದ್ರ ನಿರ್ಮಾಣಕ್ಕೆ ಆರೋಗ್ಯ ಇಲಾಖೆಯು ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

ನಗರದ ಕೇಂದ್ರ ಸ್ಥಳದಲ್ಲಿರುವ ವಾಣಿವಿಲಾಸ ಆಸ್ಪತ್ರೆಯು, ರಾಜ್ಯ ಮಟ್ಟದ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯಾಗಿದೆ. ತೃತೀಯ ಹಂತದ ಈ ಆಸ್ಪತ್ರೆಗೆ ರಾಜ್ಯದ ವಿವಿಧೆಡೆಗಳಿಂದ ಶಿಫಾರಸು ಆಧಾರದಲ್ಲಿ ತಾಯಂದಿರು ಹಾಗೂ ಮಕ್ಕಳು ಬರುತ್ತಾರೆ. ಪ್ರತಿನಿತ್ಯ ಸರಾಸರಿ 1,500ರಿಂದ 1,800 ಹೊರ ರೋಗಿಗಳು, 350ರಿಂದ 500 ಒಳ ರೋಗಿಗಳು ಭೇಟಿ ನೀಡುತ್ತಾರೆ.


ವಾಣಿವಿಲಾಸ ಆಸ್ಪತ್ರೆ

ವಾರ್ಷಿಕ 3,600 ಯುನಿಟ್ ರಕ್ತದ ಅವಶ್ಯವಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡುವ, ರಕ್ತದ ಅಗತ್ಯವಿರುವ ತಾಯಂದಿರು ವಿಕ್ಟೋರಿಯಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮೇಲೆ ಅವಲಂಬಿತರಾಗಿರುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಕೇಂದ್ರದಲ್ಲಿ ವಾರ್ಷಿಕ 8 ಸಾವಿರ ಯೂನಿಟ್ ರಕ್ತಕ್ಕೆ ಬೇಡಿಕೆಯಿದೆ. ಆ ಕೇಂದ್ರವು ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲ ಸರ್ಕಾರಿ ರಕ್ತನಿಧಿ ಕೇಂದ್ರ ಹಾಗೂ ರಕ್ತ ಶೇಖರಣಾ ಘಟಕಗಳಿಗೆ ಮಾತೃ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಸಕಾಲದಲ್ಲಿ ಹಾಗೂ ತುರ್ತು ಸಂದರ್ಭದಲ್ಲಿ ರಕ್ತವನ್ನು ಪಡೆಯುವುದು ಮತ್ತು ಪೂರೈಸುವುದು ಕಷ್ಟಸಾಧ್ಯ ಎನ್ನಲಾಗಿದೆ.

ವಾಣಿವಿಲಾಸ ತಾಯಿ ಹಾಗೂ ಮಕ್ಕಳ ಆಸ್ಪತ್ರೆಯಲ್ಲಿ ಸರ್ಕಾರಿ ರಕ್ತನಿಧಿ ಕೇಂದ್ರ ಕಾರ್ಯಾರಂಭಿಸಿದಲ್ಲಿ, ನಿಗದಿತ ಸಮಯದಲ್ಲಿ ತಾಯಂದಿರಿಗೆ ರಕ್ತ ಒದಗಿಸಲು ಸಾಧ್ಯ. ಆದ್ದರಿಂದ ಅಗತ್ಯ ಯಂತ್ರೋಪಕರಣ ಅಳವಡಿಸಿಕೊಂಡು, ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಮೂಲಕ ಪ್ರಾರಂಭಿಸಬೇಕು ಎಂದು ತಿಳಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆ ಹಾಗೂ ಗೋಕಾಕ್ ತಾಲ್ಲೂಕು ಆಸ್ಪತ್ರೆಯಲ್ಲಿಯೂ ರಕ್ತನಿಧಿ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಿ, ಆದೇಶ ಹೊರಡಿಸಲಾಗಿದೆ.

ಡ್ರಗ್ಸ್ ಮಾರಾಟ: ನೈಜೀರಿಯಾ ಪ್ರಜೆಗೆ 14 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ನೈಜೀರಿಯಾ ಪ್ರಜೆ ಕಿಂಗ್ಸ್ ಲೇ ಎಂಬಾತನಿಗೆ ಸಿಸಿಎಚ್–33ನೇ ನ್ಯಾಯಾಲಯವು (ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ) 14 ವರ್ಷ ಜೈಲು ಹಾಗೂ ₹1.60 ಲಕ್ಷ ದಂಡ ವಿಧಿಸಿದೆ.


ಕಿಂಗ್ಸ್ ಲೇ

ನಗರದ ಎಚ್‌ಆರ್‌ಬಿಆರ್ ಲೇಔಟ್‌ನ ಮೂರನೇ ಬ್ಲಾಕ್‌ನ ಬಿಡಿಎ ಪಾರ್ಕ್ ಬಳಿ ಕಿಂಗ್ಸ್ ಲೇ ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ 2022ರ ಅಕ್ಟೋಬರ್ 9ರಂದು ದಾಳಿ ನಡೆಸಿ ಅಪರಾಧಿಯನ್ನು ಬಂಧಿಸಲಾಗಿತ್ತು. ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾಫ್ಟ್‌ವೇರ್ ಎಂಜನಿಯರ್‌ಗಳಿಗೆ ಕಿಂಗ್ಸ್ ಲೇ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿತ್ತು.

ಪ್ರಕರಣದ ತನಿಖೆಯನ್ನು ನಡೆಸಿದ್ದ ಬಾಣಸವಾಡಿ ಠಾಣೆಯ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದರು.

ನ್ಯಾಯಾಧೀಶರಾದ ವಿಜಯ ದೇವರಾಜ ಅರಸ್ ಅವರು ಅಪರಾಧಿಗೆ ದಂಡ ಹಾಗೂ ಶಿಕ್ಷೆಯನ್ನು ವಿಧಿಸಿ ಆದೇಶಹೊರಡಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ವಿ.ಅಶ್ವತ್ಥ್ ನಾರಾಯಣ ಅವರು ವಾದ ಮಂಡನೆ ಮಾಡಿದ್ದರು.

ಮೇಲ್ಸೇತುವೆಯಿಂದ ಬಿದ್ದು ಸವಾರ ಸಾವು

ಬೆಂಗಳೂರು: ಶಾಂತಿ ನಗರದ ರೆಸಿಡೆನ್ಸಿ ರಸ್ತೆಯ ರಿಚ್ಮಂಡ್ ವೃತ್ತದ ಮೇಲ್ಸೇತುವೆಯಲ್ಲಿ ಸವಾರನ ನಿಯಂತ್ರಣ ತಪ್ಪಿ ಮೇಲ್ಸೇತುವೆಯ ತಡೆಗೋಡೆಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮವಾಗಿ ಸವಾರ ಶ್ರೇಯಸ್ ಪಾಟೀಲ್ (19) ಎನ್ನುವವರು ಮೃತಪಟ್ಟಿದ್ದಾರೆ. ಹಿಂಬದಿಯ ಸವಾರ ಕೆ. ಚೇತನ್ ಗಂಭೀರವಾಗಿ ಗಾಯಗೊಂಡಿದ್ದಾರೆ.

‘ಗ್ರೇಟರ್ ಬೆಂಗಳೂರು’ಗೆ ಅಸ್ತು

ಒಂದನೇ ಪುಟದಿಂದ...

ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಪಾಲಿಕೆಗಳಿಗೆ ಹಂಚುವ ಜವಾಬ್ದಾರಿ ಪ್ರಾಧಿಕಾರದ್ದಾಗಿದ್ದು, ಅಂತರ್ ಇಲಾಖೆಗಳ ಕೆಲಸಗಳು, ಯೋಜನೆಗಳ ಮೇಲುಸ್ತುವಾರಿಯನ್ನು ಹೊಂದಿರುತ್ತದೆ. ಮೇಲ್ಸೇತುವೆ, ಸುರಂಗ ರಸ್ತೆಯಂತಹ ಬೃಹತ್ ಯೋಜನೆಗಳನ್ನು ಕೂಡ ಪ್ರಾಧಿಕಾರವೇ ನಿರ್ವಹಿಸಲಿದೆ.

ನಗರ ಪಾಲಿಕೆಗಳ ವ್ಯಾಪ್ತಿ, ಅವುಗಳ ವಾರ್ಡ್‌ಗಳನ್ನು ವಿಂಗಡಣೆ ಕಾರ್ಯ, ವಾರ್ಡ್‌ಗಳ ಸಂಖ್ಯೆ, ಅವುಗಳ ಮೀಸಲಾತಿಯನ್ನು ರಾಜ್ಯ ಸರ್ಕಾರ ನಿರ್ಧರಿಸಬಹುದು. ಗ್ರೇಟರ್ ಬೆಂಗಳೂರು ವ್ಯಾಪ್ತಿಯನ್ನು ಸರ್ಕಾರವು ಅಧಿಸೂಚನೆ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾಗಿದೆ. ನಗರ ಪಾಲಿಕೆಗಳಲ್ಲಿ ಮೇಯರ್, ಉಪ ಮೇಯರ್, ಜಂಟಿ ಆಯುಕ್ತರು, ಸ್ಥಾಯಿ ಸಮಿತಿ, ವಲಯ ಸಮಿತಿ, ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭಾಗಳು ಇರಲಿವೆ.

‘ಆಗಸ್ಟ್ 15ರ ನಂತರ ಚುನಾವಣೆ’

‘ಬೆಂಗಳೂರಿನ ಪಾಲಿಕೆಗಳಿಗೆ ಆಗಸ್ಟ್ 15ರ ನಂತರ ಚುನಾವಣೆ ನಡೆಯಲಿದೆ. ಆ ವೇಳೆಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ವಾರ್ಡ್, ಮೀಸಲಾತಿ ವಿವರಗಳನ್ನು ಸಲ್ಲಿಸಲಾಗುವುದು’ ಎಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ಬಿಬಿಎಂಪಿಗೆ ಚುನಾವಣೆ ನಡೆಸುವ ಸಂಬಂಧ ರಾಜ್ಯ ಸರ್ಕಾರ ಹಾಗೂ ಶಿವರಾಜು ಅವರ ನಡುವೆ ನಡೆಯುತ್ತಿರುವ ಮೊಕದ್ದಮೆಗೆ ಅನ್ವಯಿಸಿದಂತೆ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಫೆಬ್ರುವರಿ 22ರಂದು ಪ್ರಮಾಣಪತ್ರ ಸಲ್ಲಿಸಿದ್ದರು.

ರಾಜ್ಯ ಸರ್ಕಾರ ‘ಬೆಂಗಳೂರು ಆಡಳಿತ ಮಸೂದೆ– 2024’ (ಜಿಬಿಎ) ಅನ್ನು ವಿಧಾನ ಮಂಡಲದಲ್ಲಿ ಮಂಡಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ವಿಧಾನ ಮಂಡಲದ ಜಂಟಿ ಸಮಿತಿಯೂ ವರದಿ ಸಲ್ಲಿಸಲಿದೆ. ಮಾರ್ಚ್‌ನಲ್ಲಿ ನಡೆಯುವ ಬಜೆಟ್ ಅಧಿವೇಶನದಲ್ಲಿ ಮಸೂದೆ ಮಂಡಿಸಿ, ಅನುಮೋದನೆ ಪಡೆಯಲಾಗುತ್ತದೆ ಎಂದಿದ್ದರು.

ಬಿಬಿಎಂಪಿಯನ್ನು ವಿಭಜಿಸಿ, ಹೊಸ ಪಾಲಿಕೆಗಳನ್ನು ಮೇ 15ರ ಒಳಗೆ ಸರ್ಕಾರ ರಚಿಸುತ್ತದೆ. ಜುಲೈ 15ರ ಒಳಗೆ ಪಾಲಿಕೆಗಳ ವಾರ್ಡ್‌ಗಳ ಗಡಿ ಗುರುತಿಸಿ, ಮರು ವಿಂಗಡಣೆ ಕಾರ್ಯ ಪೂರ್ಣಗೊಳಿಸಲಾಗುತ್ತದೆ. ಆಗಸ್ಟ್ 15ರ ಒಳಗೆ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಿ, ರಾಜ್ಯ ಚುನಾವಣೆ ಆಯೋಗಕ್ಕೆ ಚುನಾವಣೆ ನಡೆಸಲು ಸಲ್ಲಿಸಲಾಗುವುದು ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

ವ್ಹೀಲಿ: ಆರು ಮಂದಿ ವಿರುದ್ಧ ಎಫ್‌ಐಆರ್, ₹47 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಸಂಚಾರ ವಿಭಾಗದ ವ್ಯಾಪ್ತಿಯಲ್ಲಿ ವ್ಹೀಲಿ ನಡೆಸುತ್ತಿದ್ದವರ ವಿರುದ್ಧ ಕಾರ್ಯಾಚರಣೆ ಮುಂದುವರೆದಿದ್ದು, ಆರು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಲ್ಲದೇ ₹47 ಸಾವಿರ ದಂಡ ವಸೂಲಿ ಮಾಡಲಾಗಿದೆ.

ಬ್ಯಾಟರಾಯನಪುರ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಮೇಲ್ಸೇತುವೆ, ವಿವಿಧ ಬಡಾವಣೆಯ ರಸ್ತೆಗಳಲ್ಲಿ ಅಪಾಯಕಾರಿ ವ್ಹೀಲಿ ನಡೆಸುತ್ತಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.


ಸಾಂದರ್ಭಿಕ ಚಿತ್ರ

ಹಾಸಿಗೆ ಮೇಲೆ ಕುಳಿತಿದ್ದಕ್ಕೆ ಕೈದಿಗಳ ಮಧ್ಯೆ ಗಲಾಟೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಮಧ್ಯೆ ಮಾರಾಮಾರಿ ನಡೆದಿದ್ದು, ಘಟನೆಯಲ್ಲಿ ಕೈದಿಯೊಬ್ಬನ ಕೈ ಮುರಿದಿದೆ.

ಹಲ್ಲೆ ನಡೆಸಿದ ಕೈದಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಕಾರಾಗೃಹದ ಅಧೀಕ್ಷಕ ಇಮಾಮ್ ಸಾಬ್ ಮ್ಯಾಗೇರಿ ಅವರು ದೂರು ನೀಡಿದ್ದಾರೆ.

ಸಜಾ ಕೈದಿಗಳಾದ ಹರೀಶ್ ಅಲಿಯಾಸ್ ನಿರಾಣಿ, ಕುಮಾರಸ್ವಾಮಿ ಅಲಿಯಾಸ್ ಚೇತು, ಬಾಹುಬಲಿ ಸುಭಾಷ್ ವೀರಾಪುರ ಹಾಗೂ ಶಿವರಾಜ್ ಅಲಿಯಾಸ್ ಸುರೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದಾರೆ.


ಈ ನಾಲ್ವರು ಕೈದಿಗಳು ಸೇರಿಕೊಂಡು ಸಜಾಬಂದಿ ಶಂಕರ್ ಎಂಬಾತನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಹಲ್ಲೆಯಿಂದ ಶಂಕರ್‌ನ ಎಡಗೈ ಮುರಿದಿದೆ. ಮೂಗು ಹಾಗೂ ಬೆನ್ನಿನ ಭಾಗದಲ್ಲಿ ಗಾಯವಾಗಿದೆ. ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹಾಸಿಗೆ ಮೇಲೆ ಕುಳಿತಿದ್ದಕ್ಕೆ ಗಲಾಟೆ: ಕಾರಾಗೃಹದ ಸಜಾ ಬಂದಿಗಳ ವಿಭಾಗ ‘ಡಿ’ ಬ್ಯಾರಕ್‌ನ ಕೊಠಡಿ ಸಂಖ್ಯೆ 7ರಲ್ಲಿ ಶಂಕರ್‌ಗೆ ಸೇರಿದ ಹಾಸಿಗೆಯ ಮೇಲೆ ನಾಲ್ವರು ಕೈದಿಗಳು ಕುಳಿತಿದ್ದರು. ಇದನ್ನು ಗಮನಿಸಿದ ಶಂಕರ್, ಹಾಸಿಗೆ ಮೇಲಿಂದ ಏಳುವಂತೆ ಸೂಚಿಸಿದ್ದ. ಇದರಿಂದ ಸಿಟ್ಟಿಗೆದ್ದ ನಾಲ್ವರು ಆರೋಪಿಗಳು, ಶಂಕರ್ ಮೇಲೆ ಹಲ್ಲೆ ನಡೆಸಿದ್ದರು ಎಂದು ಗೊತ್ತಾಗಿದೆ.

ಇನ್ನೊಂದು ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿರುವ ಮಹಿಳೆ, ಕೊಠಡಿ ಬದಲಾವಣೆಗೆ ತೆರಳಿದ್ದ ವೀಕ್ಷಕಿಯ ಕೈಕಚ್ಚಿದ್ದಾಳೆ. ಕೈಕಚ್ಚಿದ್ದ ಕೈದಿ ನಜ್ಮಾ ವಿರುದ್ಧ ಪ್ರಕರಣ ದಾಖಲಾಗಿದೆ.

ಏಪ್ರಿಲ್ 17ರಂದು ನಜ್ಮಾಳನ್ನು ಒಂದು ಬ್ಯಾರಕ್‌ನಿಂದ ಮತ್ತೊಂದು ಬ್ಯಾರಕ್‌ಗೆ ಸ್ಥಳಾಂತರ ಮಾಡಲು ಜೈಲಿನ ವೀಕ್ಷಕಿ ಆರ್.ಎಚ್. ರೇಷ್ಮಾ ತೆರಳಿದ್ದರು. ಆಗ ನಜ್ಮಾ ಜಗಳ ತೆಗೆದು ರೇಷ್ಮಾ ಅವರ ಕೈ ಕಚ್ಚಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ಎರಡು ಘಟನೆಗಳು ನಡೆದ ಬಳಿಕ ಇಮಾಮ್ ಸಾಬ್ ಮ್ಯಾಗೇರಿ ಅವರು ವಿಚಾರಣಾಧೀನ ಕೈದಿಗಳ ವಿಭಾಗದ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಪರಿಶೀಲಿಸಿದರು. ಆಗ ಎರಡು ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ ಎಂದು ಗೊತ್ತಾಗಿದೆ.



ಹರಿಶರ್ವಾ, ದೀಪಿಕಾ ಆರಾಧ್ಯ

ಪ್ರವೀಣ್ ಕುಮಾರ್ ಜಿ. ಬರೆದು ನಿರ್ದೇಶಿಸಿರುವ 'ಅಮರ ಪ್ರೇಮಿ ಅರುಣ್' ಚಿತ್ರ ಇಂದು (ಏ.25) ತೆರೆ ಕಾಣುತ್ತಿದೆ. ಚಿತ್ರದ ಕುರಿತು ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಬಳ್ಳಾರಿ ಸೀಮೆ ಸೊಗಡಿನ ಅರುಣ



ಪ್ರವೀಣ್ ಕುಮಾರ್ ಜಿ.

ವಿನಾಯಕ ಕೆ.ಎಸ್

'ಇದು ಬಯಲು ಸೀಮೆ ಬಳ್ಳಾರಿಯ ಕಥೆ. ಇದೇ ಮೊದಲ ಸಲ ಸ್ಥಳೀಯ ಕನ್ನಡವನ್ನೇ ಬಳಸಿದ್ದೇವೆ. ಉತ್ತರ ಕರ್ನಾಟಕದ ಕನ್ನಡಕ್ಕೂ ಬಳ್ಳಾರಿಯದ್ದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಇಲ್ಲಿ ಕೆಲವು ಪದಗಳು ಬೇರೆ. ಜೊತೆಗೆ ಗಡಿಭಾಗದ ತೆಲುಗು ಮಿಶ್ರಣವಿದೆ. ಹಾಗಂತ ಇದು ಬಳ್ಳಾರಿಯವರಿಗೆ ಮಾತ್ರ ಅರ್ಥವಾಗುವ ಭಾಷೆಯಲ್ಲ. ಎಲ್ಲರಿಗೂ ಅರ್ಥವಾಗುವ ಮಾಮೂಲಿ ಕನ್ನಡವೆ. ಮಾತನಾಡುವ ಧಾಟಿ ಬದಲು. ಈ ಭಾಗದಲ್ಲಿ ಸ್ವಲ್ಪ ವೇಗವಾಗಿ ಮಾತನಾಡುತ್ತಾರೆ' ಎನ್ನುತ್ತಾರೆ ಪ್ರವೀಣ್.

ಗಿರೀಶ ಕಾಸರವಳ್ಳಿ ತಂಡದಿಂದ ಸಿನಿಮಾ ಪಯಣ ಪ್ರಾರಂಭಿಸಿದ ಪ್ರವೀಣ್ ಅವರ ಚೊಚ್ಚಲ ನಿರ್ದೇಶನದ ಚಿತ್ರವಿದು. ಬಿ.ಸುರೇಶ್, ಮಹೇಶ್ ರಾವ್ ಸಿನಿಮಾಗಳಲ್ಲಿ ಇವರು ಕೆಲಸ ಮಾಡಿದ್ದಾರೆ. 'ಕಹಿ' ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿದ್ದರು. ಬಳಿಕ ಯೋಗರಾಜ್ ಭಟ್ ತಂಡ ಸೇರಿಕೊಂಡು ಚಿತ್ರಕಥೆ, ಸಂಭಾಷಣೆ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡರು.


'ಚಿತ್ರದ ನಾಯಕ ಅರುಣ ಮೆಡಿಕಲ್ ರೆಪ್. ಆತನ ಪ್ರೇಮವೇ ಚಿತ್ರದ ಮುಖ್ಯಕಥೆ. ಅವನ ಸುತ್ತಲಿನ ಪಾತ್ರಗಳ ಕಥೆಯೂ ಬರುತ್ತದೆ. 90ರ ದಶಕದ ಹುಡುಗನೊಬ್ಬನ ಕಥೆ ಎನ್ನಬಹುದು. ರೊಮ್ಯಾಂಟಿಕ್ ಕಾಮಿಡಿ ಡ್ರಾಮಾವಿದ್ದು ಕುಟುಂಬ ಸಮೇತ ವೀಕ್ಷಿಸಬಹುದಾದ 'ಯು' ಸರ್ಟಿಫಿಕೆಟ್ ಹೊಂದಿರುವ ಚಿತ್ರ. ಸಿಗರೇಟು, ಮದ್ಯಪಾನದ ಎಚ್ಚರಿಕೆ ಸಂದೇಶ ಕೂಡ ಚಿತ್ರದಲ್ಲಿಲ್ಲ. ಅಷ್ಟು ಶುದ್ಧವಾದ ಸಿನಿಮಾ' ಎಂದರು.

'ಒಲವು ಸಿನಿಮಾ' ಬ್ಯಾನರ್‌ನಲ್ಲಿ ಸಮಾನ ಮನಸ್ಕ ಗೆಳೆಯರು ಸೇರಿ ಈ ಸಿನಿಮಾ ನಿರ್ಮಿಸಿದ್ದಾರೆ. ಹೊಸ ನಟ ಹರಿಶರ್ವಾಗೆ ದೀಪಿಕಾ ಆರಾಧ್ಯ ಜೋಡಿಯಾಗಿದ್ದಾರೆ.

'ಚಿತ್ರ ನೋಡಿದ ಪ್ರತಿಯೊಬ್ಬರೂ ತಮ್ಮನ್ನು ಚಿತ್ರದ ಒಂದು ಪಾತ್ರದೊಂದಿಗೆ ಹೋಲಿಸಿಕೊಳ್ಳಬಹುದು. ಆ ರೀತಿ ಪಾತ್ರಗಳಿವೆ. ಎಲ್ಲವೂ ನಮ್ಮ ನಡುವಿನ ತೀರ ಸಹಜವಾದ ಪಾತ್ರಗಳು. ಧರ್ಮಣ್ಣ ಕಡೂರು, ಕ್ರಿತಿ ಭಟ್, ಅರ್ಚನಾ ಕೊಟ್ಟಿಗೆ, ಮಂಜಮ್ಮ ಜೋಗತಿ, ರಾಧಾ ರಾಮಚಂದ್ರ, ಬಲ ರಾಜವಾಡಿ ಮೊದಲಾದವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ' ಎಂದರು. ❖

ಭಾಷೆ ಸವಾಲೆನಿಸಿತು

'ನಾಯಕನಾಗಿ ಇದು ಮೊದಲ ಸಿನಿಮಾ. ಮೂಲತಃ ಶಿವಮೊಗ್ಗದವನು. ಎಂಜಿನಿಯರ್ ಆಗಿ ಬೆಂಗಳೂರಿಗೆ ಬಂದೆ. ಮೊದಲು ಆರ್‌ಜೆ ಆಗಬೇಕು ಅಂದುಕೊಂಡಿದ್ದೆ. ಸಾಧ್ಯವಾಗಲಿಲ್ಲ. ರಂಗಭೂಮಿಯಲ್ಲಿ 15 ವರ್ಷ ಕೆಲಸ ಮಾಡಿದೆ. ನಾನೇ ನಾಟಕ ಬರೆದು ನಿರ್ದೇಶಿಸಿರುವೆ. 'ಅಭಿನಯ ತರಂಗ'ದಲ್ಲಿ ಕೆಲಸ ಮಾಡಿದ್ದೇನೆ. ಸಾಕಷ್ಟು ಉತ್ತಮ ರಂಗ ನಿರ್ದೇಶಕರುಗಳೊಂದಿಗೆ ಕೆಲಸ ಮಾಡಿದೆ. ಅದಾದ ಬಳಿಕ ಸಣ್ಣ ಪಾತ್ರಗಳ ಮೂಲಕ ಸಿನಿಮಾಗೆ ಬಂದೆ. 'ಕಹಿ' ಸಿನಿಮಾದಲ್ಲಿ ನಾಲ್ವರಲ್ಲಿ ಓರ್ವ ನಾಯಕನಾಗಿದ್ದೆ. 'ಹೊಂದಿಸಿ ಬರೆಯಿರಿ' ಚಿತ್ರದಲ್ಲಿ ಒಂದು ಸಣ್ಣ ಪಾತ್ರ ಮಾಡಿದೆ. 'ರೂಪಾಂತರ' ಚಿತ್ರದಲ್ಲಿಯೂ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡೆ. 'ಹಂಪಿ ಎಕ್ಸ್‌ಪ್ರೆಸ್' ಚಿತ್ರದಲ್ಲಿ ನಾಯಕನಾಗಿ ನಟಿಸಿರುವೆ. ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ಮತ್ತೊಂದು ಚಿತ್ರ ಮಾತುಕತೆ ಹಂತದಲ್ಲಿದೆ. ಈಗ ಕೆಲಸ ಬಿಟ್ಟು ಸಂಪೂರ್ಣವಾಗಿ ನಟನೆಯಲ್ಲಿಯೇ ತೊಡಗಿಸಿಕೊಂಡಿರುವೆ. ಈ ಚಿತ್ರದಲ್ಲಿ ಬಳ್ಳಾರಿ ಭಾಷೆ ಮೊದಲಿಗೆ ಸ್ವಲ್ಪ ಸವಾಲೆನಿಸಿತು. ವರ್ಕ್‌ಶಾಪ್ ಮಾಡಿದೆವು. ಬಳಿಕ ಭಾಷೆ ಅಭ್ಯಾಸವಾಯಿತು' ಎನ್ನುತ್ತಾರೆ ಚಿತ್ರದ ನಾಯಕ ಹರಿಶರ್ವಾ.



ಖುಷಿ ರವಿ

'ಸಿನಿಮಾವೊಂದನ್ನೇ ನಂಬಿಕೊಳ್ಳುವಂತಿಲ್ಲ'

ಖುಷಿ ರವಿ ನಟಿಸಿರುವ 'ಅಯ್ಯನ ಮನೆ' ವೆಬ್ ಸರಣಿ ಏ.25ರಂದು ಜಿ5 ಒಟಿಟಿ ವೇದಿಕೆಯಲ್ಲಿ ಬಿಡುಗಡೆಗೊಳ್ಳುತ್ತಿದೆ. ಜೊತೆಗೆ 'ನಾಕು ತಂತಿ' ಸೇರಿದಂತೆ ಹಲವು ಸಿನಿಮಾಗಳು ಬಿಡುಗಡೆಗೆ ಸಿದ್ಧ ಇವೆ. ತಮ್ಮ ಸಿನಿಪಯಣದ ಕುರಿತು ಅವರು ಮಾತನಾಡಿದ್ದಾರೆ...

'ರಮೇಶ್ ಇಂದಿರಾ ಜೊತೆ ಕೆಲಸ ಮಾಡಬೇಕೆಂದು ಬಹಳ ಆಸೆಯಿತ್ತು. ಅವರು ನಟ, ಬರಹಗಾರ, ನಿರ್ದೇಶಕ. 'ಅಯ್ಯನ ಮನೆ' ವೆಬ್ ಸರಣಿಗೆ ಕರೆದರು. ಇದರಲ್ಲಿ ಜಾಜಿ ಎಂಬ ಪಾತ್ರ ಮಾಡಿದ್ದೇನೆ. ಅಯ್ಯನ ಮನೆಗೆ ಸೊಸೆಯಾಗಿ ಬಂದೆ. ನಾನು ನಿರ್ದೇಶಕರ ನಟಿ. ಅವರು ಹೇಳಿದ್ದನ್ನು ಚಾಚು ತಪ್ಪದೇ ಮಾಡುತ್ತೇನೆ. ಹೀಗಾಗಿ ನನಗೆ ಈ ಪಾತ್ರವಾಗಲಿ, ಚಿತ್ರೀಕರಣವಾಗಲಿ ಸವಾಲು ಎನಿಸಲಿಲ್ಲ' ಎಂದು ಮಾತು ಪ್ರಾರಂಭಿಸಿದರು ಖುಷಿ.

'ದಿಯಾ' ಚಿತ್ರದಿಂದ ಜನಪ್ರಿಯರಾದ ಖುಷಿ ತೆಲುಗು, ತಮಿಳು ಚಿತ್ರರಂಗಕ್ಕೂ ಕಾಲಿಟ್ಟಿದ್ದಾರೆ. ನಾಯಕಿಯಾದ ಬಳಿಕವೂ ಆಲ್ಬಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇವರ 'ಬಡ್ಡಿ' ಎಂಬ ತಮಿಳು ಆಲ್ಬಂ ಸಾಂಗ್ ಎರಡು ತಿಂಗಳ ಹಿಂದೆ ಬಿಡುಗಡೆಗೊಂಡಿದ್ದು, ಮಣಿರತ್ನಂ ಪ್ರೆಸೆಂಟ್ ಮಾಡಿದ್ದಾರೆ.

'ನಾವು ಟ್ರೆಂಡ್ ಪ್ರಕಾರ ಬದಲಾಗಬೇಕು ಅನ್ನಿಸುತ್ತದೆ. ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಆದರೆ ನಟಿಗೆ ಸಿಗುವ ಬೆಲೆಯೇ ಬೇರೆ. ಇವತ್ತು ಸಿನಿಮಾವೊಂದನ್ನೇ ಮಾಡುತ್ತೇನೆ ಎಂದು ಕುಳಿತುಕೊಂಡರೆ ಕೆಲಸವೇ ಸಿಗುವುದಿಲ್ಲ. ಹೀಗಾಗಿ ವೆಬ್ ಸರಣಿಗೆ ಕಾಲಿಟ್ಟೆ. ಬೇರೆ ಭಾಷೆಯವರು ಇದನ್ನು ನೋಡಿ ನನಗೆ ಅಲ್ಲಿಂದಲೂ ಅವಕಾಶ ಸಿಗಬಹುದೆಂದು ಮಾಡಿದೆ. ನಯನತಾರಾರಂಥ ದೊಡ್ಡ ನಟಿಯರೇ ಇವತ್ತು ಸಿನಿಮಾ ಜೊತೆಗೆ ವೆಬ್ ಸರಣಿಯಲ್ಲಿ ನಟಿಸುತ್ತಿದ್ದಾರೆ' ಎನ್ನುತ್ತಾರೆ ಅವರು.

ಇವರ ನಟನೆಯ 'ಫುಲ್ ಮಿಲ್ಸ್' ಚಿತ್ರ ಬಿಡುಗಡೆಗೆ ಕಾದಿದೆ. 'ಸನ್ ಆಫ್ ಮುತ್ತಣ್ಣ' ಚಿತ್ರದಲ್ಲಿ ಪ್ರಣಮ್ ದೇವರಾಜ್‌ಗೆ ಜೋಡಿಯಾಗಿದ್ದಾರೆ. 'ನಾಕುತಂತಿ' ಎಂಬ ಸಿನಿಮಾ ಸಿದ್ಧವಾಗಿದೆ. ನಾಲ್ಕು ಹೆಣ್ಣುಮಕ್ಕಳ ಕಥೆಯ ಅದ್ಭುತವಾದ ಸಿನಿಮಾ. ಒಳ್ಳೆಯ ಪ್ರೆಸೆಂಟರ್‌ಗಾಗಿ ಕಾಯುತ್ತಿದ್ದೇವೆ. ನಾಲ್ಕು ಕಥೆಯನ್ನು ನಾಲ್ಕು ಯುವ ನಿರ್ದೇಶಕರು ನಿರ್ದೇಶಿಸಿದ್ದಾರೆ. ಈ ಚಿತ್ರದ ಮೇಲೆ ಬಹಳ ಕೆಲಸ ಮಾಡುತ್ತಿದ್ದೇವೆ. ಮತ್ತೊಂದು ಚಿತ್ರ 'ಒನ್ ವೇ' ಹಿಂದಿನ ವರ್ಷ ಚಿತ್ರೀಕರಣ ಮಾಡಿದ್ದು. ಇಡೀ ಸಿನಿಮಾದಲ್ಲಿ ಎರಡೇ ಪಾತ್ರಗಳು. ಇದೊಂದು ಪ್ರಯೋಗಾತ್ಮಕ ಸಿನಿಮಾ. ಬೇಬಿ ಹನಿಮೂನ್ ಕಾನ್ಸೆಪ್ಟ್ ಇಟ್ಟುಕೊಂಡು ಮಾಡಿರುವ ವಿಭಿನ್ನ ಸಿನಿಮಾ. 'ನೀತಿ' ಎಂಬ ಒಂದು ಸಿನಿಮಾ ಮಾಡಿದ್ದೇವೆ. ಇವಿಷ್ಟು ಬಿಡುಗಡೆಗೆ ಸಿದ್ಧವಿದೆ' ಎಂದು ಮಾಹಿತಿ ನೀಡಿದರು.

ಮದುವೆಯಾಗಿ, ಮಗುವಾದ ಬಳಿಕ ಚಿತ್ರರಂಗದಲ್ಲಿ ಸೂಕ್ತ ನೆಲೆ ಕಂಡುಕೊಂಡವರು ಇವರು. 'ಮದುವೆಯಾಗಿ ಮಗುವಿದೆ. ಸರಿಯಾದ ಸಮಯಕ್ಕೆ ಚಿತ್ರೀಕರಣಕ್ಕೆ ಬರುತ್ತಾರೋ ಇಲ್ಲವೋ ಎಂಬ ಅನುಮಾನ ಕೆಲವರಿಗೆ ಇರುತ್ತದೆ. ಆ ತಪ್ಪು ಕಲ್ಪನೆಯನ್ನು ಸರಿಪಡಿಸಲು ಸಾಧ್ಯವಿಲ್ಲ. ಮದುವೆಯಾಗದ ನಟಿಯರು ಯಾವ ಬದ್ಧತೆಯಿಂದ ಕೆಲಸ ಮಾಡುತ್ತಾರೋ ಅದೇ ಬದ್ಧತೆಯಿಂದ ನಾನು ಕೆಲಸ ಮಾಡುತ್ತೇನೆ' ಎಂದು ಮಾತಿಗೆ ವಿರಾಮವಿತ್ತರು. ❖

ಮೂರು ಚಿತ್ರಗಳು ತೆರೆಗೆ



ವಂಶಿ

ಯಾವುದೇ ದೊಡ್ಡ ಸ್ಟಾರ್‌ಗಳ, ಪರಭಾಷಾ ಸ್ಟಾರ್‌ಗಳ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಇಲ್ಲ. ಆದಾಗ್ಯೂ ಕನ್ನಡ ಚಿತ್ರೋದ್ಯಮದಲ್ಲಿ ಚಿತ್ರ ಬಿಡುಗಡೆಗೆ ಪೈಪೋಟಿ ಕಾಣುತ್ತಿಲ್ಲ. 'ಅಮರ ಪ್ರೇಮಿ ಅರುಣ್' ಸೇರಿದಂತೆ ಮೂರು ಚಿತ್ರಗಳು ಈ ವಾರ ತೆರೆ ಕಾಣುತ್ತಿವೆ.

ಫೈರ್‌ಫ್ಲೈ

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ ಚಿತ್ರವಿದು. ಶಿವರಾಜ್‌ಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರುವುದು, ಧ್ರುವ ಸರ್ಜಾ ಚಿತ್ರದ ಹಾಡನ್ನು ಬಿಡುಗಡೆ ಮಾಡಿರುವುದು ಸೇರಿದಂತೆ ನಾನಾ ಕಾರಣಗಳಿಂದ ಚಿತ್ರದ ಮೇಲಿನ ನಿರೀಕ್ಷೆ ಹೆಚ್ಚಿದೆ.

ವಂಶಿ ಚಿತ್ರದ ನಾಯಕ ಹಾಗೂ ನಿರ್ದೇಶಕ. ಇದು ಇವರ ಚೊಚ್ಚಲ ಚಿತ್ರ. ಸುಧಾರಾಣಿ, ರಚನಾ ಇಂದರ್, ಅಚ್ಯುತ್ ಕುಮಾರ್, ಮೂಗು ಸುರೇಶ್, ಶೀತಲ್ ಶೆಟ್ಟಿ ಸೇರಿ ಹಲವರು ತಾರಾಗಣದಲ್ಲಿದ್ದಾರೆ.

'ಒಂಟಿತನ ಹಾಗೂ ಖಿನ್ನತೆ ಎನ್ನುವುದು ಯುವಜನತೆಯಲ್ಲಿ ಹೆಚ್ಚಿದೆ. ಒಂದು ವಿಷಯದಿಂದ ಹೊರಬರಲು ಬಹಳ ಸಮಯ ತೆಗೆದುಕೊಳ್ಳುತ್ತಾರೆ. ಅವರು ಬಹಳ ಸೂಕ್ಷ್ಮ. ಇದನ್ನು ಹಲವರಲ್ಲಿ ನೋಡಿದ್ದೆ. ಈ ವಿಷಯವನ್ನೇ ಇಟ್ಟುಕೊಂಡು ಮನರಂಜನಾತ್ಮಕವಾಗಿ ಕಥೆ ಬರೆದೆ. ನಮ್ಮೊಳಗೇ ಬೆಳಕಿದೆ. ಅದನ್ನು ಅರಿತುಕೊಳ್ಳುವುದು ಮುಖ್ಯ ಎನ್ನುವುದಕ್ಕೆ 'ಫೈರ್‌ಫ್ಲೈ'(ಮಿಂಚು ಹುಳ) ಎಂಬ ಶೀರ್ಷಿಕೆ ಇಟ್ಟೆ' ಎಂದಿದ್ದಾರೆ ನಿರ್ದೇಶಕರು.

ಮಗಳ ನಿರ್ಮಾಣದ ಸಿನಿಮಾದಲ್ಲಿ ಶಿವಣ್ಣ ನಟಿಸಿದ್ದಾರೆ. ಅವರ ಲುಕ್ ಗಮನ ಸೆಳೆದಿದೆ. ಚರಣ್ ರಾಜ್ ಸಂಗೀತ, ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ರಘು ನಿಡುವಳ್ಳಿ ಸಂಭಾಷಣೆ, ಸುರೇಶ್ ಆರ್ಮುಗಮ್ ಸಂಕಲನ ಚಿತ್ರಕ್ಕಿದೆ.

ಗ್ಯಾಂಗ್‌ಸ್ಟರ್ ಅಲ್ಲ ಪ್ರಾಂಕ್‌ಸ್ಟರ್

ಗಿರೀಶ್ ಕುಮಾರ್ ನಿರ್ದೇಶಿಸಿ, ನಾಯಕನಾಗಿ ಕಾಣಿಸಿಕೊಂಡಿರುವ ಚಿತ್ರವಿದು. ಇವರು ಈ ಹಿಂದೆ 'ಭಾವಚಿತ್ರ' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದರು. 'ಉಗ್ರಂ' ಖ್ಯಾತಿಯ ತಿಲಕ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

'ಇದೊಂದು ಯೂಟ್ಯೂಬರ್ ಕಥೆಯಾಗಿದ್ದು, ಪ್ರಾಂಕ್ ವಿಡಿಯೊ ಮಾಡಿಕೊಂಡು ಇರುವವನ ಸಿನಿಮಾ. ಜೊತೆಗೆ ಇದೊಂದು ಆ್ಯಕ್ಷನ್, ಕಾಮಿಡಿ ಚಿತ್ರ ಕೂಡ. ಇದರಲ್ಲಿ ನಾನು ಪ್ರಾಂಕ್‌ಸ್ಟಾರ್ ಆಗಿದ್ದರೆ, ತಿಲಕ್ ಅವರು ಗ್ಯಾಂಗ್‌ಸ್ಟಾರ್ ಆಗಿರುತ್ತಾರೆ. ಜೀವನದಲ್ಲಿ ಸಾಧನೆ ಮಾಡಬೇಕು ಎಂಬುವವರಿಗೆ ಚಿತ್ರ ಸ್ಫೂರ್ತಿಯಾಗಲಿದೆ. ಎಲ್ಲರ ಜೀವನಕ್ಕೂ ಕನೆಕ್ಟ್ ಆಗುವ ಕಥೆ' ಎನ್ನುತ್ತಾರೆ ಗಿರೀಶ್.

ವಿರಾನಿಕ ಶೆಟ್ಟಿ ಚಿತ್ರದ ನಾಯಕಿ. ಬಲ ರಾಜವಾಡಿ, ಹೊನ್ನವಳ್ಳಿ ಕೃಷ್ಣ, ಯುವ ಕಿಶೋರ್, ಲೋಕೇಂದ್ರ, ಸೂರಜ್ ಮುಂತಾದವರು ಚಿತ್ರದಲ್ಲಿದ್ದಾರೆ. ಈ ಚಿತ್ರಕ್ಕೆ ಜಾನ್ ಕೆನಡಿ ಸಂಗೀತ ಸಂಯೋಜಿಸಿದ್ದು, ಅಜಯ್ ಕುಮಾರ್ ಛಾಯಾಚಿತ್ರಗ್ರಹಣ ಹಾಗೂ ರತೀಶ್ ಕುಮಾರ್ ಸಂಕಲನವಿದೆ. ❖



ಯುವ

'ಎಕ್ಕ' ಟೀಸರ್ ರಿಲೀಸ್

ನಟ ಯುವರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ಹೊಸ ಅವತಾರದಲ್ಲಿ ಯುವ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ ಎನ್ನುವುದಕ್ಕೆ ಟೀಸರ್ ಸಾಕ್ಷಿಯಾಗಿದೆ.

ಮಗು-ಮೃಗ ಎನ್ನುವ ಡೈಲಾಗ್ ಹೊಡೆಯುತ್ತಾ ಕೈಯಲ್ಲಿ ಪೊರಕೆ ಹಿಡಿದು ವಿಭಿನ್ನ ಅವತಾರದಲ್ಲಿ ಯುವ ಕಾಣಿಸಿಕೊಂಡಿದ್ದಾರೆ. ಸಿನಿಮಾ ಜೂನ್ 6ರಂದು ತೆರೆಕಾಣುತ್ತಿದ್ದು, ಚಿತ್ರಕ್ಕೆ ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಸಂಪದ ಹಾಗೂ ಸಂಜನಾ ಆನಂದ್ ನಾಯಕಿಯರಾಗಿ ಅಭಿನಯಿಸಿದ್ದಾರೆ. ಅತುಲ್ ಕುಲಕರ್ಣಿ, ಡೆಡ್ಲಿ ಆದಿತ್ಯ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಮತ್ತು ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿದೆ. ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ರಾವ್ ಅವರ ಕೆಆರ್‌ಜಿ ಸ್ಟುಡಿಯೊಸ್, ಜಯಣ್ಣ ಹಾಗೂ ಭೋಗೇಂದ್ರ ಅವರ ಜಯಣ್ಣ ಫಿಲ್ಮ್ಸ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಪಿಆರ್‌ಕೆ ಪ್ರೊಡಕ್ಷನ್ಸ್ ಈ ಸಿನಿಮಾವನ್ನು ಜಂಟಿಯಾಗಿ ನಿರ್ಮಾಣ ಮಾಡುತ್ತಿದೆ. ❖

ಕಿರುತೆರೆ ಕಲಾವಿದರ ಪ್ರೀತಿ ಪ್ರೇಮ ಪಂಗನಾಮ

'ಹಾಸ್ಯ ಲಾಸ್ಯ' ಕಾಮಿಡಿ ಧಾರಾವಾಹಿ ಮೂಲಕ ಜನಪ್ರಿಯರಾಗಿದ್ದ ಮುತ್ತುರಾಜ್ ಎಂ.ಎಸ್ ಮತ್ತು ಶ್ರೀಕಂಠ ಬಿ.ಎ ಜೋಡಿ 'ಪ್ರೀತಿ ಪ್ರೇಮ ಪಂಗನಾಮ' ಚಿತ್ರದ ಮೂಲಕ ಮತ್ತೆ ಬಂದಿದ್ದಾರೆ. ಚಿತ್ರದ ಟೀಸರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಶ್ರೀಕಂಠ ಬಿ.ಎ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ನಾನು ವೃತ್ತಿಯಿಂದ ಕ್ಷೌರಿಕ. ಚಿತ್ರದಲ್ಲಿಯೂ ಅದೇ ಪಾತ್ರ ಮಾಡಿರುವೆ. ಒಂದು ಕಾಲದಲ್ಲಿ ರಾಜ್‌ಕುಮಾರ್, ವಿಷ್ಣುವರ್ಧನ್, ದೇವೆಗೌಡರಂಥವರು ನಮ್ಮ ಧಾರಾವಾಹಿಯನ್ನು ತಪ್ಪದೇ ನೋಡುತ್ತಿದ್ದರು. ಚಿತ್ರರಂಗದ ನಂಟು ಎಂದಿಗೂ ಮುಗಿಯುವುದಿಲ್ಲ. ಚಿತ್ರಕ್ಕೆ ನಾನೇ ಬಂಡವಾಳ ಹೂಡಿರುವೆ' ಎಂದರು ಮುತ್ತುರಾಜ್.ಎಂ.ಎಸ್.


'ಗತಕಾಲದಲ್ಲಿ ಪ್ರೀತಿ, ಪ್ರೇಮಕ್ಕೆ ಬೆಲೆ ಇತ್ತು. ಆದರೆ ಈಗ ಮೂರು, ಆರು ತಿಂಗಳಿಗೆ ಪ್ರೀತಿ ಅಂತ್ಯವಾಗುತ್ತಿದೆ. ದುಡ್ಡೇ ಪ್ರೀತಿಗಿಂತ ಮುಖ್ಯ ಎಂಬಂತಾಗಿದೆ. ಜಗತ್ತಿನಲ್ಲಿ ಜಾತಿಗಿಂತ ದೊಡ್ಡದು ಪ್ರೀತಿ. ಯಾರಾದರೇನು? ಪ್ರೀತಿಯಲ್ಲಿ ತಾರತಮ್ಯ ಕೂಡದು. ಅದನ್ನೇ ಚಿತ್ರದಲ್ಲಿ ಹೇಳಿದ್ದೇವೆ. ನಿರ್ದೇಶನದ ಜೊತೆಗೆ ಇಸ್ತ್ರಿ ಮಾಡುವವನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಹಾಸ್ಯದೊಂದಿಗೆ ಉತ್ತಮ ಸಂದೇಶ ಹೊಂದಿರುವ ಚಿತ್ರ. ಯುವ ಪ್ರತಿಭೆ ಶ್ರೀಕಾಂತ್ ನಿರ್ದೇಶನದಲ್ಲಿ ನನಗೆ ಸಹಾಯಕರಾಗಿದ್ದು ಎಲ್ಲ ಜವಾಬ್ದಾರಿ ತೆಗೆದುಕೊಂಡರು. ಸದಭಿರುಚಿಯ ಸಿನಿಮಾವಿದು' ಎಂದರು ನಿರ್ದೇಶಕರು.

ಧೀರಜ್, ಉದಯ್‌ಗೆ ಡಯಾನ, ಚೈತ್ರಾ ಜೋಡಿಯಾಗಿದ್ದಾರೆ. ಕುಮಾರ್ ಈಶ್ವರ್ ಸಂಗೀತ, ಗುರುರಾಜ್ ಛಾಯಾಚಿತ್ರಗ್ರಹಣ, ದೊಡ್ಡಮನೆ ಗಣೇಶ್ ಸಂಕಲನವಿದೆ. ಹಾಸನ, ಚಿಕ್ಕಮಗಳೂರು, ಮಡಿಕೇರಿ, ಮೈಸೂರು ಮೊದಲಾದೆಡೆ ಚಿತ್ರೀಕರಣಗೊಂಡಿದೆ. ❖



ಶ್ರೀಕಂಠ ಬಿ.ಎ ಮುತ್ತುರಾಜ್‌ಎಂ.ಎಸ್

ದೂರ ತೀರ ಯಾನದ ಇದೇನಿದು ಸೂಚನೆ...



ವಿಜಯ್ ಕೃಷ್ಣ, ಪ್ರಿಯಾಂಕ ಕುಮಾರ್

ಮಂಸೋರೆ ನಿರ್ದೇಶಿಸಿರುವ 'ದೂರ ತೀರ ಯಾನ' ಚಿತ್ರದ 'ಇದೇನಿದು ಸೂಚನೆ..' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕವಿರಾಜ್ ಅವರು ಬರೆದಿರುವ ಗೀತೆಗೆ ಬಕ್ಕೇಶ್-ಕಾರ್ತಿಕ್ ಸ್ವರ ಸಂಯೋಜನೆ ಮಾಡಿದ್ದು, ಅರ್ಮಾನ್ ಮಲಿಕ್ ಹಾಡಿದ್ದಾರೆ.

'ಈ ಸಿನಿಮಾದಲ್ಲಿ ಆರು ಹಾಡುಗಳಿದ್ದು ಜಯಂತ್ ಕಾಯ್ಕಿಣಿ, ಕವಿರಾಜ್, ಪ್ರಮೋದ್ ಮರವಂತೆ ಹಾಗೂ ಕಿರಣ್ ಕಾವೇರಪ್ಪ ಬರೆದಿದ್ದಾರೆ. ಶೀರ್ಷಿಕೆ ಗೀತೆಯನ್ನು ಮುಂದಿನ ತಿಂಗಳು ಪ್ರೇಕ್ಷಕರಿಂದಲೇ ಬಿಡುಗಡೆ ಮಾಡಿಸುವ ಆಲೋಚನೆ ಇದ್ದು, ರಾಜ್ಯದ ಪ್ರಮುಖ ನಗರವೊಂದರಲ್ಲಿ ಬಿಡುಗಡೆ ಮಾಡಲು ಯೋಜನೆ ರೂಪಿಸಿದ್ದೇವೆ' ಎಂದಿದ್ದಾರೆ ನಿರ್ದೇಶಕರು.

ವಿಜಯ್ ಕೃಷ್ಣ ಹಾಗೂ ಪ್ರಿಯಾಂಕ ಕುಮಾರ್ ಮುಖ್ಯಪಾತ್ರದಲ್ಲಿದ್ದಾರೆ. ಆರ್. ದೇವರಾಜ್ ಬಂಡವಾಳ ಹೂಡಿದ್ದಾರೆ. ಬೆಂಗಳೂರು, ಉಡುಪಿ, ಕುಂದಾಪುರ, ಗೋಕರ್ಣ, ಮುರುಡೇಶ್ವರ, ಕಾರವಾರ, ಯಲ್ಲಾಪುರ, ದಾಂಡೇಲಿ, ಗೋವಾದಲ್ಲಿ ಚಿತ್ರೀಕರಣಗೊಂಡಿದೆ. ಸಿನಿಮಾ ಡಬ್ಬಿಂಗ್ ಹಂತದಲ್ಲಿದ್ದು, ಜುಲೈ ತಿಂಗಳಿನಲ್ಲಿ ತೆರೆಗೆ ಬರಲಿದೆ. ❖

'ಪಪ್ಪಿ'ಗೆ ಧ್ರುವ ಸರ್ಜಾ ಸಾಥ್



ಮುದ್ದಾದ ನಾಯಿಮರಿಯ ಕಥೆ ಹೊಂದಿರುವ ಆಯುಷ್ ಮಲ್ಲಿ ನಿರ್ದೇಶನದ 'ಪಪ್ಪಿ' ಚಿತ್ರ ಟ್ರೇಲರ್‌ನಿಂದಲೇ ಗಮನ ಸೆಳೆದಿತ್ತು. ನಟ ಧ್ರುವ ಸರ್ಜಾ ಈ ಚಿತ್ರ ಅರ್ಪಿಸುತ್ತಿದ್ದು, ಮೇ 1ಕ್ಕೆ ತೆರೆಗೆ ಬರಲಿದೆ.

'ಪಪ್ಪಿ' ಸಿನಿಮಾವನ್ನು ನಾನು ನೋಡಿದ್ದೇನೆ. ಬಾಲನಟರಾದ ಜಗದೀಶ್ ಹಾಗೂ ಆದಿತ್ಯ ತುಂಬಾ ಒಳ್ಳೆಯ ನಟರು. ಎಲ್ಲ ಕಲಾವಿದರು ಸಹಜವಾಗಿ ನಟಿಸಿದ್ದಾರೆ. ಇದಕ್ಕೆ ಕಾರಣಕರ್ತ ನಿರ್ದೇಶಕರು. ತಿಥಿ ಸಿನಿಮಾಕ್ಕಿರುವ ವೈಬ್ಸ್ ಈ ಚಿತ್ರಕ್ಕಿದೆ. ಎಲ್ಲರೂ ಈ ಚಿತ್ರವನ್ನು ಚಿತ್ರಮಂದಿರದಲ್ಲಿಯೇ ನೋಡಿ. ಹೊಸ ಪ್ರತಿಭೆಗಳನ್ನು ಕನ್ನಡಾಭಿಮಾನಿಗಳು ಕೈಬಿಡಬೇಡಿ' ಎಂದರು ಧ್ರುವ.

'ಚಿತ್ರದ ಟ್ರೇಲರ್ ನೋಡಿ ಧ್ರುವ ಕರೆ ಮಾಡಿದರು. ಉತ್ತರ ಕರ್ನಾಟಕದವರು ಚಿತ್ರರಂಗಕ್ಕೆ ಬರಬೇಕು ಎಂದು ಉತ್ತೇಜಿಸಿದರು. ಸಾಕಷ್ಟು ನಟರು ಟ್ರೇಲರ್ ನೋಡಿ ಹರಸಿದ್ದರು. ಸ್ಥಳೀಯ ಕಲಾವಿರಾದ ಜಗದೀಶ್ ಕೊಪ್ಪಳ, ಆದಿತ್ಯ ಸಿಂಧನೂರು, ಅದೃಷ್ಟ ಸಂಕನೂರು, ಋತ್ವಿಕ್ ಬಳ್ಳಾರಿ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ' ಎಂದರು ನಿರ್ದೇಶಕರು.

ಶ್ರೀಧರ್ ಕಶ್ಯಪ್, ರವಿ ಬಿಲ್ಲೂರ್ ಸಂಗೀತ, ಬಿ.ಸುರೇಶ್ ಬಾಬು ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ❖

ಸುರಕ್ಷಿತವಾಗಿ ಬಂದ 177 ಕನ್ನಡಿಗರು

ಕಾಶ್ಮೀರದಲ್ಲಿ ಉಗ್ರರ ದಾಳಿ: ರಾಜ್ಯ ಸರ್ಕಾರದ ಕಾರ್ಯಾಚರಣೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದಲ್ಲಿ ಸಿಲುಕಿದ್ದ 177 ಕನ್ನಡಿಗ ಪ್ರವಾಸಿಗರನ್ನು ಹೊತ್ತಿದ್ದ ವಿಶೇಷ ವಿಮಾನವು ಗುರುವಾರ ಮಧ್ಯಾಹ್ನದ ವೇಳೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿಯಿತು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ನೇತೃತ್ವದಲ್ಲಿ ತೆರಳಿದ್ದ ತಂಡ ಮತ್ತು ಹಿರಿಯ ಐಪಿಎಸ್ ಅಧಿಕಾರಿ ಆರ್.ಚೇತನ್ ನೇತೃತ್ವದಲ್ಲಿ ತೆರಳಿದ್ದ ಅಧಿಕಾರಿಗಳ ತಂಡವು ಕನ್ನಡಿಗ ಪ್ರವಾಸಿಗರನ್ನು ಸುರಕ್ಷಿತವಾಗಿ ಕರೆ ತರುವ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿದೆ.

ಮಂಗಳವಾರ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯಲ್ಲಿ ಕನ್ನಡಿಗರು ಮೃತಪಟ್ಟಿದ್ದಾರೆ ಎಂದು ತಿಳಿಯುತ್ತಿದ್ದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತುರ್ತು ಸಭೆ ನಡೆಸಿದರು. ತಕ್ಷಣವೇ ಕಾಶ್ಮೀರಕ್ಕೆ ತೆರಳಿ ತೆರವು ಕಾರ್ಯಾಚರಣೆ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಆರ್.ಚೇತನ್ ಅವರ ನೇತೃತ್ವದ ತಂಡವು ಮಂಗಳವಾರ ರಾತ್ರಿಯೇ ಶ್ರೀನಗರಕ್ಕೆ ತೆರಳಿ, ಕನ್ನಡಿಗ ಪ್ರವಾಸಿಗರ ಮಾಹಿತಿ ಕಲೆಹಾಕಿತ್ತು.

ಮುಖ್ಯಮಂತ್ರಿಯ ಸೂಚನೆಯಂತೆ ಸಚಿವ ಸಂತೋಷ್ ಲಾಡ್ ನೇತೃತ್ವದ ಇನ್ನೊಂದು ತಂಡವು ಬುಧವಾರ ಶ್ರೀನಗರ ತಲುಪಿತ್ತು. ಎರಡೂ ತಂಡಗಳು ಕಾಶ್ಮೀರದ ವಿವಿಧೆಡೆ ಇದ್ದ ಕನ್ನಡಿಗ ಪ್ರವಾಸಿಗರನ್ನು ಪತ್ತೆ ಮಾಡಿ, ಸಂಪರ್ಕಿಸಿತು.

‘ಕಾಶ್ಮೀರದಲ್ಲಿ ರಾಜ್ಯದ 180 ಪ್ರವಾಸಿಗರು ಇರುವ ಬಗ್ಗೆ ಮಾಹಿತಿ ಇತ್ತು. ಅವರಲ್ಲಿ 168 ಮಂದಿ ಬುಧವಾರ ರಾತ್ರಿಯ ವೇಳೆಗೆ ನಮ್ಮ ಸಂಪರ್ಕಕ್ಕೆ ಸಿಕ್ಕಿದ್ದರು. 14–15 ಲಾಡ್ಜ್‌ಗಳಲ್ಲಿ ಅವರೆಲ್ಲರೂ ಇದ್ದರು. ಅಲ್ಲಿಗೆ ಖುದ್ದು ಭೇಟಿ ನೀಡಿ, ಹೊರಗೆಲ್ಲೂ ಹೋಗದಂತೆ ತಿಳಿಸಿದ್ದೆವು. ವಿಮಾನದ ವ್ಯವಸ್ಥೆ ಮಾಡುವುದಾಗಿ ಧೈರ್ಯ ಹೇಳಿದ್ದೆವು’ ಎಂದು ಸಂತೋಷ್ ಲಾಡ್ ಹೇಳಿದರು.

‘ವಿಶೇಷ ವಿಮಾನದ ವ್ಯವಸ್ಥೆ ಖಾತರಿಯಾದ ನಂತರ, ಬುಧವಾರ ತಡರಾತ್ರಿಯೇ ವಿಮಾನ ನಿಲ್ದಾಣಕ್ಕೆ ಬರುವಂತೆ ಮಾಹಿತಿ ನೀಡಿದ್ದೆವು. ಅದರಂತೆ 177 ಮಂದಿ ಬಂದಿದ್ದರು. ನಾವು 200 ಆಸನದ ವಿಮಾನದ ವ್ಯವಸ್ಥೆ ಮಾಡಿದ್ದೆವು. ಹೀಗಾಗಿ ಎಲ್ಲರನ್ನೂ ಕರೆದುಕೊಂಡು ಬರಲು ಸಾಧ್ಯವಾಯಿತು’ ಎಂದು ರಕ್ಷಣಾ ತಂಡದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಶ್ರೀನಗರದಿಂದ ಗುರುವಾರ ಬೆಳಿಗ್ಗೆ ಹೊರಟಿದ್ದ ವಿಮಾನವು ಮಧ್ಯಾಹ್ನ 1.30ರ ವೇಳೆಗೆ ಬೆಂಗಳೂರು ತಲುಪಿತು. ವಿಮಾನದಲ್ಲಿ ಬಂದಿಳಿದ ಪ್ರವಾಸಿಗರು, ರಾಜ್ಯದ ಬೇರೆ–ಬೇರೆ ಭಾಗಗಳಲ್ಲಿ ಇರುವ ತಮ್ಮ ಊರು ಮತ್ತು ಮನೆಗಳಿಗೆ ತೆರಳಿದರು. ತಮ್ಮನ್ನು ನಾಡಿಗೆ ತಲುಪಿಸಿದ ತಂಡಕ್ಕೆ ಅಭಿನಂದನೆ ಹೇಳಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮಂಗಳವಾರ ನಡೆದ ಭಯೋತ್ಪಾದಕರ ದಾಳಿಯಲ್ಲಿ ಇಬ್ಬರು ಕನ್ನಡಿಗರು ಸೇರಿ, 27 ಮಂದಿ ಪ್ರವಾಸಿಗರು ಬಲಿಯಾಗಿದ್ದರು. ಅಲ್ಲಿಗೆ ಪ್ರವಾಸಕ್ಕೆಂದು ತೆರಳಿದ್ದ ಸುಮಾರು 180 ಮಂದಿ ಅಲ್ಲಿಯೇ ಸಿಲುಕಿದ್ದರು.

ದಾಳಿಯ ಕಾರಣದಿಂದ ಕನ್ನಡಿಗರೂ ಸೇರಿ ಬಹುತೇಕ ಪ್ರವಾಸಿಗರು, ಪ್ರವಾಸವನ್ನು ಮೊಟಕುಗೊಳಿಸಿ ತಮ್ಮ ರಾಜ್ಯಗಳಿಗೆ ಮರಳಲು ಮುಂದಾಗಿದ್ದರು. ಆದರೆ ವಿಮಾನಯಾನ ಕಂಪನಿಗಳು ಟಿಕೆಟ್ ದರ ಏರಿಕೆ ಮಾಡಿದ್ದರಿಂದ ಮರಳಲಾಗದೇ ಅಲ್ಲಿಯೇ ಉಳಿದಿದ್ದರು.



ಕನ್ನಡಿಗ ಪ್ರವಾಸಿಗರ ಜತೆಗೆ ವಿಮಾನ ನಿಲ್ದಾಣದಿಂದ ಹೊರಬಂದ ಸಚಿವ ಸಂತೋಷ್ ಲಾಡ್

₹1.37 ಕೋಟಿ ವೆಚ್ಚ ಭರಿಸಿದ ಲಾಡ್

‘ಇಡೀ ಕಾರ್ಯಾಚರಣೆಗೆ ₹1.37 ಕೋಟಿ ವೆಚ್ಚವಾಗಿದ್ದು, ಸಚಿವ ಸಂತೋಷ್ ಲಾಡ್ ಅವರು ಇಡೀ ಮೊತ್ತವನ್ನು ತಾವೇ ಭರಿಸಿದ್ದಾರೆ. ವೆಚ್ಚವನ್ನು ಸರ್ಕಾರದಿಂದ ಮರಳಿ ಪಡೆಯಬೇಡಿ ಎಂದು ಸೂಚಿಸಿದ್ದಾರೆ’ ಎಂದು ಲಾಡ್ ಅವರ ಆಪ್ತ ಮೂಲಗಳು ತಿಳಿಸಿವೆ.

‘ಕಾಶ್ಮೀರದಲ್ಲಿನ ಪ್ರವಾಸಿಗರ ರಕ್ಷಣೆಗೆ ಹುಬ್ಬಳ್ಳಿಯಿಂದ ತೆರಳಿದ್ದ ರಾಜ್ಯದ ವಿಶೇಷ ತಂಡದ ಪ್ರಯಾಣ ಮತ್ತು ಶ್ರೀನಗರದಲ್ಲಿನ ಇನ್ನಿತರ ವೆಚ್ಚ ಸುಮಾರು ₹60 ಲಕ್ಷವಾಗಿದೆ. ಅಲ್ಲಿಂದ 177 ಪ್ರವಾಸಿಗರು ಮತ್ತು ರಾಜ್ಯ ಸರ್ಕಾರದ ತಂಡಗಳನ್ನು ವಿಶೇಷ ವಿಮಾನದಲ್ಲಿ ಕರೆತರಲು ₹77 ಲಕ್ಷವಾಗಿದೆ’ ಎಂದು ಮಾಹಿತಿ ನೀಡಿವೆ.

‘ಬಿಂದಿ ತೆಗೆದು, ಅಲ್ಲಾಹು ಅಕ್ಬರ್ ಪಠಿಸಿದೆವು...’

ಪುಣೆ (ಪಿಟಿಐ): ‘ನಮ್ಮ ಗುಂಪಿನಲ್ಲಿದ್ದ ಪುರುಷರಿಗೆ ‘ಅಜಾನ್’ ಪಠಿಸುವಂತೆ ಉಗ್ರರು ಸೂಚನೆ ನೀಡಿದರು. ಇದರ ಬೆನ್ನಲ್ಲೇ, ನಾನು ಹಾಗೂ ಗುಂಪಿನಲ್ಲಿದ್ದ ಇತರ ಮಹಿಳೆಯರು ಬಿಂದಿಗಳನ್ನು ತೆಗೆದು, ಅಲ್ಲಾಹು ಅಕ್ಬರ್ ಎಂದು ಹೇಳಲು ಶುರು ಮಾಡಿದೆವು...’

– ಪಹಲ್ಗಾಮ್‌ನಲ್ಲಿ ಮಂಗಳವಾರ ಉಗ್ರರ ಗುಂಡೇಟಿಗೆ ಪತಿಯನ್ನು ಕಳೆದುಕೊಂಡಿರುವ ಪುಣೆಯ ಸಂಗೀತಾ ಗಣಬೋಟೆ ಹೇಳುವ ಮಾತುಗಳಿವು.

ಗಣಬೋಟೆ ನಿವಾಸಕ್ಕೆ ಭೇಟಿ ನೀಡಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದ ಎನ್‌ಸಿಪಿ-(ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರಿಗೆ ಸಂಗೀತಾ ಅವರು ಅಂದಿನ ಭಯಾನಕ ಕ್ಷಣಗಳನ್ನು ವಿವರಿಸಿದರು.

ಈ ದಾಳಿಯಲ್ಲಿ ಸಂಗೀತಾ ಅವರ ಪತಿ ಕೌಸ್ತುಭ್ ಗಣಬೋಟೆ ಮೃತಪಟ್ಟಿದ್ದಾರೆ.

‘ಬಿಂದಿಗಳನ್ನು ತೆಗೆಯುವ ಮೂಲಕ ಧಾರ್ಮಿಕ ಗುರುತು ಮರೆಮಾಚಲು ನಡೆಸಿದ ಯತ್ನಗಳು ನಮ್ಮವರ ಜೀವ ಉಳಿಸಲು ನೆರವಾಗಲಿಲ್ಲ. ನನ್ನ ಪತಿ ಹಾಗೂ ಪತಿಯ ಸ್ನೇಹಿತನನ್ನು (ಸಂತೋಷ್ ಜಗದಾಳೆ) ಉಗ್ರರು ಕೊಂದು ಹಾಕಿದರು’ ಎಂದೂ ಸಂಗೀತಾ ಹೇಳಿದ್ದಾರೆ.

‘ಅಮಾಯಕ ಜನರನ್ನು ಏಕೆ ಕೊಲ್ಲುತ್ತಿದ್ದೀರಿ ಎಂದು ಸ್ಥಳೀಯ ಮುಸ್ಲಿಂ ವ್ಯಕ್ತಿಯೊಬ್ಬ ಉಗ್ರರನ್ನು ಪ್ರಶ್ನಿಸಿದ. ಆತನನ್ನು ವಿವಸ್ತ್ರಗೊಳಿಸಿದ ಉಗ್ರರು, ನಂತರ ಗುಂಡಿಕ್ಕಿ ಆತನನ್ನೂ ಕೊಂದರು’ ಎಂದು ವಿವರಿಸಿದ್ದಾರೆ.

‘5–6 ಜನ ಉಗ್ರರು ನಮ್ಮ ಬಳಿ ಬಂದು, ನಾವು ಮುಸ್ಲಿಮರೋ ಅಥವಾ ಹಿಂದೂಗಳೋ ಎಂದು ಪ್ರಶ್ನಿಸಿದರು. ಯಾರಾದರೂ ಮುಸ್ಲಿಮರು ಇದ್ದಲ್ಲಿ ಕಲ್ಮಾ ಪಠಿಸಲು ಸೂಚಿಸಿದರು’ ಎಂದು, ಈ ದಾಳಿಯಲ್ಲಿ ಹತರಾಗಿರುವ ಸಂತೋಷ್ ಜಗದಾಳೆ ಅವರ ಪುತ್ರಿ ಅಸಾವರಿ ಜಗದಾಳೆ ವಿವರಿಸಿದರು.

ನಿಧನ ವಾರ್ತೆ

ಬೇಗಾನೆ ರಾಮಯ್ಯ




ಬೆಂಗಳೂರು: ಮಾಜಿ ಸಚಿವ ಬೇಗಾನೆ ರಾಮಯ್ಯ (90) ಗುರುವಾರ ನಿಧನರಾದರು.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕು ಅಡ್ಡಗದ್ದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೇಗಾನೆಯ ಬೆಳ್ಳಪ್ಪ ಗೌಡ ಅವರ ಪುತ್ರ ರಾಮಯ್ಯ ಅವರು ಶೃಂಗೇರಿಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ ಪಡೆದ ನಂತರ ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಪದವಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ, ಸರ್ಕಾರಿ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದಿದ್ದರು. 1972ರಲ್ಲಿ ಎನ್.ಆರ್. ಪುರ ಘಟಕದ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದರು.

1978ರಲ್ಲಿ ಶೃಂಗೇರಿ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಮೊದಲ ಪ್ರಯತ್ನದಲ್ಲೇ ಯಶಸ್ವಿಯಾಗಿದ್ದರು. ಆರ್. ಗುಂಡೂರಾವ್ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವರಾಗಿದ್ದರು. ಮಲೆನಾಡಿನಲ್ಲಿ ತಲೆ ತೋರಿದ್ದ ಕುಡಿಯುವ ನೀರಿನ ಅಭಾವ ನೀಗಿಸಲು ಕೊಳವೆಬಾವಿ ಕೊರೆಸಲು ಸಹಕರಿಸಿದ್ದರು. ಹಾಗಾಗಿ, ಅವರನ್ನು ಅಲ್ಲಿನ ಜನರು ಬೋರ್‌ವೆಲ್ ರಾಮಯ್ಯ ಎಂದೇ ಕರೆಯುತ್ತಿದ್ದರು.

ಹೃದಯ ಕಾಯಿಲೆಯಿಂದ ಬಳಲುತ್ತಿದ್ದ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ ಸೀತಮ್ಮ, ಪುತ್ರ ಅಂಜನ್ ಬೇಗಾನೆ, ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆಯೂ ಆಗಿರುವ ಪುತ್ರಿ ಆರತಿ ಕೃಷ್ಣ ಇದ್ದಾರೆ. ಮೃತರ ಅಂತ್ಯಕ್ರಿಯೆ ಶಿವಮೊಗ್ಗ ಸಮೀಪದ ಹೊಸಹಳ್ಳಿಯ ಸೀತಾ ಫಾರಂನಲ್ಲಿ ಶುಕ್ರವಾರ (ಏ.25) ನೆರವೇರಲಿದೆ.

ಮಿಟ್ಟು ಚಂಗಪ್ಪ



ಮಡಿಕೇರಿ: ಪ್ರತಿ ಚುನಾವಣೆಯಲ್ಲೂ ಮೊದಲಿಗೆ ಮತದಾನ ಮಾಡುತ್ತಿದ್ದವರೆಂದೇ ಖ್ಯಾತಿಯಾಗಿದ್ದ, ಕಾಂಗ್ರೆಸ್ ಹಿರಿಯ ಮುಖಂಡ ಬೊಟ್ಟೋಳಂಡ ಮಿಟ್ಟು ಚಂಗಪ್ಪ (83) ವಯೋಸಹಜ ಕಾರಣಗಳಿಂದ ಅಮ್ಮತ್ತಿಯಲ್ಲಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ. ‘ಶುಕ್ರವಾರ ಮಧ್ಯಾಹ್ನದವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಇಲ್ಲಿನ ಗಾಂಧಿ ಮೈದಾನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಬಳಿಕ ಮಡಿಕೇರಿಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ’ ಎಂದು ಕಾಂಗ್ರೆಸ್‌ನ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಧರ್ಮಜ ಉತ್ತಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

1962ರಿಂದ ಲೋಕಸಭೆ, ವಿಧಾನಸಭೆ ಹಾಗೂ ನಗರಸಭೆ ಸೇರಿದಂತೆ ಎಲ್ಲ ಚುನಾವಣೆಗಳಲ್ಲೂ ಮೊದಲಿಗರಾಗಿ ಒಟ್ಟು 31 ಬಾರಿ ಮತದಾನ ಮಾಡಿದ್ದ ಚಂಗಪ್ಪ, ಪ್ರಜಾಪ್ರಭುತ್ವದ ಬಹಳ ದೊಡ್ಡ ಪ್ರತಿಪಾದಕರಾಗಿದ್ದರು.

ಸುಮಾರು 5 ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದ ಅವರು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ ಹಾಗೂ ಎಐಸಿಸಿ ಸದಸ್ಯರಾಗಿದ್ದರು.

ರಿಕ್ಕಿ ರೈ ಮೇಲೆ ಶೂಟೌಟ್ ಪ್ರಕರಣ: ಅಂಗರಕ್ಷಕ ಬಂಧನ

ಪ್ರಜಾವಾಣಿ ವಾರ್ತೆ



ಮೋನಪ್ಪ ವಿಠ್ಠಲ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ತಾಲ್ಲೂಕಿನ ಬಿಡದಿ– ಮುದುವಾಡಿ ರಸ್ತೆ ಕರಿಯಪ್ಪನದೊಡ್ಡಿ ಬಳಿ ವಾರದ ಹಿಂದೆ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ ರಿಕ್ಕಿ ಅಂಗರಕ್ಷಕ ಮೋನಪ್ಪ ವಿಠ್ಠಲ ಎಂಬಾತನನ್ನು ಬಿಡದಿ ಪೊಲೀಸರು ಗುರುವಾರ ಬಂಧಿಸಿದರು.

ಘಟನೆ ದಿನ ರಿಕ್ಕಿ ಮನೆಯಲ್ಲಿದ್ದ ಅಂಗರಕ್ಷಕರು, ಕೆಲಸಗಾರರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಆ ಪೈಕಿ ಏ.22ರಂದು ಮೋನಪ್ಪನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದ್ದರು. ಈ ವೇಳೆ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮೋನಪ್ಪ ಚೇತರಿಸಿಕೊಳ್ಳುತ್ತಿದ್ದಂತೆ ತನಿಖಾ ಅಧಿಕಾರಿಗಳು ಗುರುವಾರ ಸಂಜೆ ಬಂಧಿಸಿದರು. ನಂತರ ರಾಮನಗರ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಬಿಗಿ ಭದ್ರತೆಯಲ್ಲಿ ಕರೆ ತಂದರು. ನ್ಯಾಯಾಲಯದ ಎದುರು ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ 10 ದಿನ ಪೊಲೀಸ್ ವಶಕ್ಕೆ ಪಡೆದರು.

ಪೂರಕ ಸಾಕ್ಷ್ಯಾಧಾರ: ‘ತನಿಖೆ ಸಂದರ್ಭದಲ್ಲಿ ಸಿಕ್ಕ ಸಾಕ್ಷ್ಯಾಧಾರ ಹಾಗೂ ವಿಚಾರಣೆಯಲ್ಲಿ ಮೋನಪ್ಪನೇ ಕೃತ್ಯ ಎಸಗಿರುವುದು ಗೊತ್ತಾಗಿದೆ. ಹಾಗಾಗಿ ಬಂಧಿಸಿ ಹೆಚ್ಚಿನ ವಿಚಾರಣೆಗೆ ವಶಕ್ಕೆ ಪಡೆಯಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸಗೌಡ ತಿಳಿಸಿದರು.

ಮೇ 1ರಿಂದ ಜೋಗ ವೀಕ್ಷಣೆಗೆ ಅವಕಾಶ



ಶಿವಮೊಗ್ಗ: ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿರುವ ವಿಶ್ವ ಪ್ರಸಿದ್ಧ ಜೋಗ ಜಲಪಾತದ ವೀಕ್ಷಣೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಪ್ರವೇಶವನ್ನು ಮೇ 1ರಿಂದ ಪುನರಾರಂಭಿಸಲಾಗುತ್ತಿದೆ.

ಜಲಪಾತದ ಪ್ರವೇಶ ದ್ವಾರದ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದ ಕಾರಣ ಏ.30ರವರೆಗೆ ಪ್ರವಾಸಿಗರ ಹಾಗೂ ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು. ಈಗ ಮತ್ತೆ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜೋಗ ನಿರ್ವಹಣಾ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗುರುದತ್ತ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್ ವಿಭಾಗೀಯ ಪೀಠದಿಂದ ವಿಚಾರಣೆ ಆರಂಭ • ಬೆಸ್ಕಾಂಗೆ ನೋಟಿಸ್ ಜಾರಿಗೊಳಿಸಲು ಆದೇಶ

‘ಸ್ಮಾರ್ಟ್ ಮೀಟರ್ ಬೆಲೆ ಭಾರಿ ವ್ಯತ್ಯಾಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಬಳಕೆಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವ ಸ್ಮಾರ್ಟ್ ಮೀಟರ್‌ಗಳ ಬೆಲೆ ವ್ಯತ್ಯಾಸವನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.



ಈ ಸಂಬಂಧ ನಗರದ ‘ಅಶ್ವ ರಾಮಾನುಜ ಮೀಡಿಯಾ ಪ್ರೈವೆಟ್ ಲಿಮಿಟೆಡ್’ ಕಂಪನಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರ ಆರ್. ಅನ್ವೇರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಮಧುಸೂದನ ಅಡಿಗ, ‘ಸ್ಮಾರ್ಟ್ ಮೀಟರ್‌ಗಳ ಬೆಲೆಯನ್ನು ಶೇ 170ರಷ್ಟು ಹೆಚ್ಚಿಸಲಾಗಿದೆ. ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್ ನಿಗದಿತ ದರ ₹2,461 ಇದ್ದರೆ ಟೆಂಡರ್‌ನಲ್ಲಿ ₹4,235 ಇದೆ. ಅಂತೆಯೇ, ತ್ರೀ ಫೇಸ್ ಸ್ಮಾರ್ಟ್ ಮೀಟರ್‌ಗೆ ₹3,292 ದರ ಇದ್ದರೆ, ₹7,525ಗೆ ನಿಗದಿಪಡಿಸಲಾಗಿದೆ. ಇದರಿಂದ ಸಾರ್ವಜನಿಕರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ, ಟೆಂಡರ್‌ಗೆ ತಡೆ ನೀಡಬೇಕು’ ಎಂದು ಕೋರಿದರು.

ಟೆಂಡರ್‌ಗೆ ತಡೆ ನೀಡಲು ನಿರಾಕರಿಸಿದ ನ್ಯಾಯಪೀಠ, ಪ್ರತಿವಾದಿಯಾದ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ‘ನಗರದ ರಾಜಶ್ರೀ ಎಲೆಕ್ಟ್ರಿಕಲ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಸ್ಮಾರ್ಟ್ ಮೀಟರ್‌ಗಳ ಮಾರಾಟ ಮತ್ತು ನಿರ್ವಹಣೆ ಟೆಂಡರ್ ನೀಡಿರುವುದನ್ನು ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಬಸವಣ್ಣ ಪುತ್ಥಳಿ ಅನಾವರಣಕ್ಕೆ ತಡೆ ನೀಡಲು ನಕಾರ

ಬೆಂಗಳೂರು: ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸ್ಥಾಪಿಸಲಾಗಿರುವ ಬಸವಣ್ಣನವರ ಪುತ್ಥಳಿ ಅನಾವರಣಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

‘ಪುತ್ಥಳಿ ತೆರವುಗೊಳಿಸಬೇಕು ಹಾಗೂ ಅನಾವರಣಕ್ಕೆ ತಡೆ ನೀಡಬೇಕು’ ಎಂದು ಕೋರಿ ಚಾಮರಾಜನಗರ ತಾಲ್ಲೂಕು ಹೊಂಗನೂರಿನ ನಟರಾಜ, ಭೋಗಪುರದ ನಾಗೇಶ ಮತ್ತು ದೊಡ್ಡರಾಯಪೇಟೆಯ ಎನ್.ಅಂಬರೀಷ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಪ್ರತಿಮೆ, ಪುತ್ಥಳಿಗಳ ಸ್ಥಾಪನೆ, ಅನಾವರಣ ಅಥವಾ ತೆರವು, ಸರ್ಕಾರಿ ಕಚೇರಿಗಳ ಸ್ಥಳಾಂತರದಂತಹ ಸಂಗತಿಗಳು ಆಡಳಿತಾತ್ಮಕ ವಿಷಯಗಳಾಗಿವೆ. ಇವುಗಳಲ್ಲಿನ ಮಧ್ಯಪ್ರವೇಶ ನ್ಯಾಯಾಲಯದ ವ್ಯಾಪ್ತಿಗೆ ಹೊರತಾಗಿದೆ’ ಎಂದು ಸೂಚ್ಯವಾಗಿ ತಿಳಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಚಾಮರಾಜನಗರ ಜಿಲ್ಲಾಧಿಕಾರಿ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 25ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಚಾಮರಾಜನಗರ ಜಿಲ್ಲಾ ರಂಗಮಂದಿರ ಮುಂಭಾಗದಲ್ಲಿ ಬಸವಣ್ಣನ ಪುತ್ಥಳಿ ಸ್ಥಾಪನೆಗೆ 2023ರಲ್ಲಿ ಭೂಮಿ ಪೂಜೆ ನೆರವೇರಿಸಲಾಗಿತ್ತು. ಆದರೆ, ಯಾವುದೇ ಅನುಮತಿ ಪಡೆದುಕೊಳ್ಳದೇ ಕಾನೂನು ಮತ್ತು ನಿಯಮಗಳನ್ನು ಉಲ್ಲಂಘಿಸಿ ಕೆಲವು ಅನಾಮಧೇಯ ವ್ಯಕ್ತಿಗಳು ರಾತ್ರೋರಾತ್ರಿ ಪುತ್ಥಳಿಯನ್ನು ಸ್ಥಾಪಿಸಿದ್ದಾರೆ. ಇದರಿಂದ ವಾಹನಗಳ ಪಾರ್ಕಿಂಗ್‌ಗೆ ಅನನುಕೂಲವಾಗುತ್ತದೆ. ಆದ್ದರಿಂದ, ಪುತ್ಥಳಿ ತೆರವುಗೊಳಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಎನ್‌ಕೌಂಟರ್ ಪ್ರಕರಣ: ಸ್ಥಿತಿಗತಿ ವರದಿ ಸಲ್ಲಿಕೆ

ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂಬ ಆರೋಪದಡಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ಪಾಟ್ನಾದ ರಿತೇಶ್ ಕುಮಾರ್ ಪ್ರಕರಣದ ಸ್ಥಿತಿಗತಿ ವರದಿಯನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ.

ಈ ಕುರಿತಂತೆ, ‘ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್-ಕರ್ನಾಟಕ’ (ಪಿಯುಸಿಎಲ್) ಸಂಘಟನೆಯ ಪ್ರಧಾನ ಕಾರ್ಯದರ್ಶಿ ಇ.ಶುಜಾಯುತ್ ಉಲ್ಲಾ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮಧು ಭೂಷಣ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಪ್ರಕರಣದ ಸ್ಥಿತಿಗತಿ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದೇ ವೇಳೆ ಅರ್ಜಿದಾರರ ಪರ ವಕೀಲೆ, ‘ಹಿರಿಯ ವಕೀಲರಾದ ಆದಿತ್ಯ ಸೋಂಧಿ ಅವರು ವಾದ ಮಂಡಿಸಲಿದ್ದಾರೆ. ಇಂದು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವೊಂದರ ವಿಚಾರಣೆಯಲ್ಲಿ ಭಾಗಿಯಾಗಿರುವ ಕಾರಣ ಬೇರೊಂದು ದಿನಾಂಕ ನಿಗದಿಪಡಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಪೊಲೀಸರು ಸ್ವತಃ ನ್ಯಾಯಾಧೀಶರಾಗಿ, ಆರೋಪಿಗೆ ನ್ಯಾಯ-ದಂಡನೆ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ, ಬಾಲಕಿ ಮತ್ತು ಎನ್‌ಕೌಂಟರ್‌ಗೆ ಗುರಿಯಾಗಿರುವ ವ್ಯಕ್ತಿಯ ಮೃತದೇಹಗಳನ್ನು ಸಂರಕ್ಷಿಸಿಡಬೇಕು. ಶವಪರೀಕ್ಷೆಗಾಗಿ ದೆಹಲಿ ಅಥವಾ ಕರ್ನಾಟಕ ಹೊರತುಪಡಿಸಿದ ಅನ್ಯ ರಾಜ್ಯಗಳ ಶಸ್ತ್ರಚಿಕಿತ್ಸಕರು ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರನ್ನು ಒಳಗೊಂಡ ಸ್ವತಂತ್ರ ವಿಶೇಷ ತನಿಖಾ ತಂಡ ರಚನೆ ಮಾಡಬೇಕು. ಈ ತನಿಖಾ ತಂಡವು ಕೋರ್ಟ್ ನಿಗಾದಲ್ಲಿ ಕಾರ್ಯ ನಿರ್ವಹಿಸುವಂತೆ ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಸುದ್ದಿ 2 ನಿಮಿಷ

ವಾಸ್ತುಶಿಲ್ಪಶಾಸ್ತ್ರ ಕೋರ್ಸ್‌ಗೆ ಪಿಜಿ–ಸಿಇಟಿ ಇಲ್ಲ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪಿಜಿ–ಸಿಇಟಿ ಪ್ರಕ್ರಿಯೆಯಿಂದ ವಾಸ್ತುಶಿಲ್ಪಶಾಸ್ತ್ರ ಕೋರ್ಸ್ ಅನ್ನು ಕೈಬಿಟ್ಟಿದೆ.

ಸ್ನಾತಕೋತ್ತರ ಪದವಿಯ ವಾಸ್ತುಶಿಲ್ಪ ಶಾಸ್ತ್ರ ಕೋರ್ಸ್ ಸೀಟುಗಳನ್ನು ಇದುವರೆಗೂ ಸಿಇಟಿ ಮೂಲಕ ಕೆಇಎ ಭರ್ತಿ ಮಾಡುತ್ತಿತ್ತು. ಈ ವರ್ಷದಿಂದಲೇ ನಿಯಮದಲ್ಲಿ ಬದಲಾವಣೆ ಮಾಡಲಾಗಿದ್ದು, ವಾಸ್ತುಶಿಲ್ಪಶಾಸ್ತ್ರ ಪರಿಷತ್ತು ನಡೆಸುವ ರಾಷ್ಟ್ರಮಟ್ಟದ ಅರ್ಹತಾ ಪರೀಕ್ಷೆಯ ಅಂಕಗಳ ಆಧಾರದಲ್ಲೇ ಪ್ರವೇಶ ನೀಡಲು ನಿರ್ಧರಿಸಿದೆ.

‘ಪ್ರಾಧಿಕಾರ ಇನ್ನುಮುಂದೆ ಪ್ರವೇಶ ಪರೀಕ್ಷೆ ನಡೆಸುವುದಿಲ್ಲ. ಆಸಕ್ತ ವಿದ್ಯಾರ್ಥಿಗಳು ವಾಸ್ತುಶಿಲ್ಪಶಾಸ್ತ್ರ ಪರಿಷತ್ತು ನಡೆಸುವ ರಾಷ್ಟ್ರಮಟ್ಟದ ಪರೀಕ್ಷೆ ತೆಗೆದುಕೊಂಡು, ಇಲ್ಲಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಕಳೆದ ವರ್ಷ ಈ ಕೋರ್ಸ್‌ನಲ್ಲಿ 136 ಸೀಟು ಲಭ್ಯವಿದ್ದವು. 127 ಅರ್ಜಿ ಸಲ್ಲಿಕೆಯಾಗಿದ್ದವು. ಪ್ರವೇಶ ಪಡೆದಿದ್ದು 28 ವಿದ್ಯಾರ್ಥಿಗಳು.



ವೈದ್ಯಕೀಯ ಕಾಲೇಜು: ಮೇ 1ರಿಂದ ಮುಖಚಹರೆ ಆಧಾರಿತ ಹಾಜರಾತಿ

ಬೆಂಗಳೂರು: ಭಾರತದ ಎಲ್ಲಾ ವೈದ್ಯಕೀಯ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಮುಖಚಹರೆ ಆಧಾರಿತ ಹಾಜರಾತಿ ವ್ಯವಸ್ಥೆ ಜಾರಿಗೊಳಿಸುವುದನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ಕಡ್ಡಾಯಗೊಳಿಸಿದೆ.

‘ಹಾಜರಾತಿ ಪ್ರಕ್ರಿಯೆಯನ್ನು ಬಳಕೆದಾರ ಸ್ನೇಹಿಯನ್ನಾಗಿ ಮಾಡಲು ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಅದಕ್ಕಾಗಿ ಎಲ್ಲ ಅಧ್ಯಾಪಕರು ತಮ್ಮ ಮೊಬೈಲ್ ಫೋನ್‌ಗಳಿಗೆ ಮುಖ ಆಧಾರಿತ ಆಧಾರ್ ದೃಢೀಕರಣ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಇದೇ ಮೇ 1ರಿಂದ ವ್ಯವಸ್ಥೆ ಅಳವಡಿಸಿಕೊಳ್ಳಬೇಕು’ ಎಂದು ಆಯೋಗ ತನ್ನ ಆದೇಶದಲ್ಲಿ ಸೂಚಿಸಿದೆ.

ವೈದ್ಯಕೀಯ ಕಾಲೇಜುಗಳಲ್ಲಿ ಪ್ರಸ್ತುತ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆ ಇದೆ. ಹಲವು ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಕರ್ತವ್ಯಕ್ಕೆ ಸರಿಯಾಗಿ ಹಾಜರಾಗುತ್ತಿಲ್ಲ. ಕಿರಿಯ ವೈದ್ಯರ ಬಳಿ ಕೆಲಸ ಮಾಡಿಸುತ್ತಾರೆ ಎಂಬ ದೂರುಗಳ ಕಾರಣದಿಂದ ಆಯೋಗ ಹೊಸ ಪದ್ಧತಿ ಅಳವಡಿಕೆಗೆ ಮುಂದಾಗಿದೆ. ಇನ್ನು ಮುಂದೆ ಅಧ್ಯಾಪಕರ ಹಾಜರಾತಿಯ ಮೇಲ್ವಿಚಾರಣೆಯನ್ನು ಆಯೋಗವೇ ನೇರವಾಗಿ ಮಾಡಲಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಇತಿಹಾಸ ಪ್ರಸಿದ್ಧ ಸೈಯ್ಯದ್ ಮದನಿ ದರ್ಗಾದಲ್ಲಿ ಗುರುವಾರ ಉರುಸ್ ಪ್ರಾರಂಭವಾಗಿದ್ದು, ದರ್ಗಾ ಸಮೀಪದ ಕೆರೆಯನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದೆ ಚಿತ್ರ: ಮೋಹನ್ ಕುತ್ತಾರ್

ಸುಚಿವ್ರತ್‌ಗೆ ಎರಡು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಿವಾರ ತೆಗೆಯಲು ನಿರಾಕರಿಸಿ, ಗಣಿತ ಪರೀಕ್ಷೆಗೆ ಹಾಜರಾಗದೇ ಮನೆಗೆ ತೆರಳಿದ್ದ ಬೀದರ್‌ನ ವಿದ್ಯಾರ್ಥಿ ಸುಚಿವ್ರತ್ ಕುಲಕರ್ಣಿಗೆ ಸರ್ಕಾರ ಎರಡು ಆಯ್ಕೆಗಳನ್ನು ನೀಡಿದೆ.

ಈ ಕುರಿತು ಪರಿಶೀಲಿಸಲು ನೇಮಿಸಿದ್ದ ತಜ್ಞರ ಸಮಿತಿಯು ಭೌತ ವಿಜ್ಞಾನ ಹಾಗೂ ರಸಾಯನ ವಿಜ್ಞಾನ ವಿಷಯಗಳಲ್ಲಿ ಪಡೆದ ಸರಾಸರಿ ಅಂಕಗಳನ್ನು ಗಣಿತ ವಿಷಯಕ್ಕೆ ನೀಡಲು ಶಿಫಾರಸು ಮಾಡಿದೆ. ಈ ಆಯ್ಕೆಯ ಜತೆಗೆ ಮತ್ತೆ ಪರೀಕ್ಷೆ ಬರೆಯುವ ಅವಕಾಶವನ್ನೂ ಸರ್ಕಾರ ವಿದ್ಯಾರ್ಥಿಯ ಮುಂದಿಟ್ಟಿದೆ.

ದೂರವಾಣಿ ಮೂಲಕ ವಿದ್ಯಾರ್ಥಿ ಜತೆ ಮಾತನಾಡಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಈ ಎರಡು ಅವಕಾಶಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಹೇಳಿದ್ದಾರೆ.

‘ತಜ್ಞರ ಸಮಿತಿಯ ಶಿಫಾರಸಿನಂತೆ ಭೌತ ವಿಜ್ಞಾನ ಹಾಗೂ ರಸಾಯನ ವಿಜ್ಞಾನ ವಿಷಯಗಳಲ್ಲಿ ಪಡೆದ ಸರಾಸರಿ ಅಂಕಗಳನ್ನು ನೀಡುವುದು, ಬೇಡವೆಂದರೆ ಮತ್ತೊಮ್ಮೆ ಪರೀಕ್ಷೆ ಬರೆಯುವ ಅವಕಾಶ ನೀಡುವುದಾಗಿ ವಿದ್ಯಾರ್ಥಿಗೆ ತಿಳಿಸಿದ್ದೇನೆ. ವಿದ್ಯಾರ್ಥಿ ಆಯ್ಕೆಯ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಒಪ್ಪಿಗೆ ನೀಡಲಿದೆ’ ಎಂದು ಸುಧಾಕರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಕೆಇಎ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಏ.17ರಂದು ನಡೆಸಿದ್ದ ಗಣಿತ ಪರೀಕ್ಷೆಯಲ್ಲಿ ಬೀದರ್‌ನ ಸಾಯಿಸ್ಫೂರ್ತಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ವಿದ್ಯಾರ್ಥಿಗೆ ಜನಿವಾರ ತೆಗೆಯುವಂತೆ ಅಲ್ಲಿನ ಪ್ರಥಮ ದರ್ಜೆ ಸಹಾಯಕ ಸೂಚಿಸಿದ್ದರು. ಅದನ್ನು ನಿರಾಕರಿಸಿ, ಸುಚಿವ್ರತ್ ಕುಲಕರ್ಣಿ ಪರೀಕ್ಷಾ ಕೇಂದ್ರದಿಂದ ತೆರಳಿದ್ದರು. ಈ ಘಟನೆಗೆ ರಾಜ್ಯದ ಎಲ್ಲೆಡೆ ಆಕ್ರೋಶ ವ್ಯಕ್ತವಾಗಿತ್ತು.

ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ವಿದ್ಯಾರ್ಥಿಗೆ ಭಾಲ್ಕಿಯಲ್ಲಿನ ತಮ್ಮ ಕಾಲೇಜಿನಲ್ಲಿ ಉಚಿತ ಎಂಜಿನಿಯರಿಂಗ್ ಸೀಟು ನೀಡುವ ಭರವಸೆ ನೀಡಿದ್ದಾರೆ.

‘ಕಸಾಪಕ್ಕೆ ಆಡಳಿತಾಧಿಕಾರಿ ನೇಮಿಸಿ’

ಬೈ–ಲಾ ತಿದ್ದುಪಡಿ ಖಂಡಿಸಿ ಸಮಾನ ಮನಸ್ಕರಿಂದ ಸಭೆ, ಏಳು ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಪದಚ್ಯುತಿಗೊಳಿಸಿ, ಆಡಳಿತಾಧಿಕಾರಿ ನೇಮಿಸಲು ಸರ್ಕಾರಕ್ಕೆ ಒತ್ತಾಯಿಸುವುದು ಸೇರಿ ಏಳು ನಿರ್ಣಯಗಳನ್ನು ಸಮಾನ ಮನಸ್ಕರ ಸಭೆ ಕೈಗೊಂಡಿದೆ.

ಕಸಾಪ ಬೈ–ಲಾ ತಿದ್ದುಪಡಿ ಖಂಡಿಸಿ ನಗರದಲ್ಲಿ ಗುರುವಾರ ಹಮ್ಮಿಕೊಳ್ಳಲಾದ ಸಭೆಯಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಪಾಲ್ಗೊಂಡಿದ್ದರು. ಕೆ.ಮರುಳಸಿದ್ದಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಎಸ್.ಜಿ. ಸಿದ್ಧರಾಮಯ್ಯ, ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ಮಾವಳ್ಳಿ ಶಂಕರ್, ಕೆ.ಎಸ್. ವಿಮಲಾ, ಸಿ.ಕೆ. ರಾಮೇಗೌಡ, ಜಯಪ್ರಕಾಶ್ ಗೌಡ, ಶ್ರೀನಿವಾಸ ಜಿ. ಕಪ್ಪಣ್ಣ, ಸುನಂದಾ ಜಯರಾಮ್, ಡಾ. ವಸುಂಧರಾ ಭೂಪತಿ, ಕೆ.ಟಿ. ಶ್ರೀಕಂಠೇಗೌಡ ಮೊದಲಾದವರು ಅಭಿಪ್ರಾಯ ವ್ಯಕ್ತಪಡಿಸಿದರು.

‘ಕಸಾಪದ ಆರ್ಥಿಕ ಅಶಿಸ್ತನ್ನು ಪ್ರಶ್ನಿಸಿ, ಪರಿಷತ್ತಿನ ಅಧ್ಯಕ್ಷರನ್ನು ಸರ್ಕಾರ ವಿಚಾರಣೆಗೆ ಒಳಪಡಿಸಬೇಕು. ವಿಚಾರಣೆ ಪೂರ್ಣಗೊಳ್ಳುವವರೆಗೂ ಮಹೇಶ ಜೋಶಿ ಅವರ ಅಧ್ಯಕ್ಷಗಿರಿ ಅಮಾನತು ಮಾಡಬೇಕು. ಆ ಸ್ಥಾನಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಹಿಂದಿನ ಸರ್ಕಾರ ಪರಿಷತ್ತಿನ ಅಧ್ಯಕ್ಷರಿಗೆ ನೀಡಿರುವ ರಾಜ್ಯ ಸಚಿವ ದರ್ಜೆಯ ಸ್ಥಾನಮಾನವನ್ನು ತಕ್ಷಣ ಹಿಂಪಡೆಯಬೇಕು’ ಎಂಬ ಆಗ್ರಹ ವ್ಯಕ್ತವಾಯಿತು.



ಸಭೆಯಲ್ಲಿ ಪಾಲ್ಗೊಂಡಿದ್ದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು

> **ಕಸಾಪ ಜಿಲ್ಲಾ ಘಟಕಗಳ ಅಧ್ಯಕ್ಷರ ಮೇಲೆ ರಾಜ್ಯ ಘಟಕದ ಅಧ್ಯಕ್ಷರಿಂದ ಪ್ರಹಾರವಾಗುತ್ತಿದೆ. ಅಧ್ಯಕ್ಷ ಸ್ಥಾನದ ಗೌರವ ಕಳೆಯುತ್ತಿದ್ದರೂ ಸರ್ಕಾರ ಮತ್ತು ಸಾಂಸ್ಕೃತಿಕ ವಲಯ ಸುಮ್ಮನಿರುವುದು ವಿಪರ್ಯಾಸ**
> **ಎಸ್.ಜಿ.ಸಿದ್ಧರಾಮಯ್ಯ,** ಸಾಹಿತಿ

> **ಗಡಿ, ನಾಡು, ಭಾಷೆಗೆ ಆಪತ್ತು ಬಂದಾಗ ಪರಿಷತ್ತಿನ ಹಾಲಿ ಅಧ್ಯಕ್ಷರು ಧ್ವನಿ ಎತ್ತಿಲ್ಲ. ಇಷ್ಟೆಲ್ಲಾ ವಿರೋಧದ ನಡುವೆ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರ ಹಣ ನೀಡಬಾರದು**
> **ಜಯಪ್ರಕಾಶ್ ಗೌಡ**
> ಕರ್ನಾಟಕ ಸಂಘದ ಅಧ್ಯಕ್ಷ, ಮಂಡ್ಯ

> **ಪರಿಷತ್ತನ್ನು ಕಟ್ಟಿ ಬೆಳೆಸುವ ಬದಲು, ಕಟ್ಟಿ ಹಾಕುವ ಕೆಲಸ ಆಗುತ್ತಿದೆ. ಅಧ್ಯಕ್ಷರ ಸರ್ವಾಧಿಕಾರಿ ಧೋರಣೆ ವಿರುದ್ಧ ಜನಾಂದೋಲನ ರೂಪಿಸಬೇಕಾದ ಅಗತ್ಯವಿದೆ**
> **ಬಂಜಗೆರೆ ಜಯಪ್ರಕಾಶ್**
> ಸಾಹಿತಿ

ಅಧ್ಯಕ್ಷರ ಅವಧಿ ಇಳಿಸಿ: ‘ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿಯನ್ನು ಐದರಿಂದ ಮೂರು ವರ್ಷಗಳಿಗೆ ಇಳಿಸಬೇಕು. ಕಸಾಪ ಹಾಲಿ ಕಾರ್ಯಕಾರಿ ಸಮಿತಿ ಅವಧಿಯಲ್ಲಿ ಈ ಹಿಂದೆ ಎರಡು ಬಾರಿ ಬೈ–ಲಾ ತಿದ್ದುಪಡಿ ಮಾಡಲಾಗಿದ್ದು, ಅದನ್ನು ರದ್ದುಗೊಳಿಸಬೇಕು. ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಬೇಕು. ಸದಸ್ಯರ ಅಮಾನತು ಆದೇಶವನ್ನು ವಾಪಸ್ ಪಡೆಯಬೇಕು. ಬಳ್ಳಾರಿಯಲ್ಲಿ ಜರುಗುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹40 ಕೋಟಿ ಅನುದಾನ ನೀಡದಂತೆ ಸರ್ಕಾರವನ್ನು ಒತ್ತಾಯಿಸಬೇಕು’ ಎಂದು ಸಭೆಯಲ್ಲಿ ಒಕ್ಕೊರಲಿನ ನಿರ್ಧಾರ ಕೈಗೊಳ್ಳಲಾಯಿತು.

ಕೆ.ಮರುಳಸಿದ್ದಪ್ಪ ಮಾತನಾಡಿ, ‘ಸಾಹಿತ್ಯದ ಗಂಧ, ಗಾಳಿ ಗೊತ್ತಿಲ್ಲದ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಆರಿಸಿದ್ದೇವೆ. ಅಧ್ಯಕ್ಷರ ಸರ್ವಾಧಿಕಾರಿ ಧೋರಣೆಯನ್ನು ತಡೆಯಲು ಪರಿಷತ್ತಿನ ಚುನಾವಣಾ ಪ್ರಕ್ರಿಯೆಯನ್ನು ಬದಲಾಯಿಸಬೇಕು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಿ, ಆಯ್ಕೆಯಾದ ಜಿಲ್ಲಾ ಘಟಕದ ಅಧ್ಯಕ್ಷರೇ ರಾಜ್ಯ ಘಟಕದ ಅಧ್ಯಕ್ಷರನ್ನು ಆಯ್ಕೆ ಮಾಡುವಂತೆ ಆಗಬೇಕು’ ಎಂದರು.

‘ಸಾಹಿತ್ಯ ಪರಿಷತ್ತಿನಲ್ಲಿ ಸಂಭವಿಸುತ್ತಿರುವ ಅನ್ಯಾಯಕ್ಕೆ ಕೋರ್ಟ್‌ಗಳಲ್ಲಿ ನ್ಯಾಯ ಸಿಗುವುದು ತಡವಾಗಬಹುದಾದ ಕಾರಣ, ಜನ ಚಳವಳಿ ಸದ್ಯ ನಮ್ಮ ಮುಂದಿರುವ ಹಾದಿ. ಪರಿಷತ್ತಿನ ಇಂದಿನ ಸ್ಥಿತಿ ರಾಜ್ಯದ ಪ್ರತಿ ಪ್ರಜೆಗೂ ತಲುಪುವಂತೆ ಚಳವಳಿ ರೂಪಿಸಬೇಕು’ ಎಂದು ಒತ್ತಾಯಿಸಿದರು.

ಓಂ ಪ್ರಕಾಶ್ ಕೊಲೆ: ಪುತ್ರಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಅವರ ಕೊಲೆ ಪ್ರಕರಣದ ಆರೋಪಿಯಾಗಿರುವ ಕೃತಿ ಮಾನಸಿಕವಾಗಿ ಸ್ಥಿರವಾಗಿದ್ದಾರೆ. ಅವರನ್ನು ಪೊಲೀಸರು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಳ್ಳಬಹುದು ಎಂದು ನಿಮ್ಹಾನ್ಸ್‌ನ ವೈದ್ಯರು ವರದಿ ನೀಡಿದ್ದಾರೆ.

ಓಂ ಪ್ರಕಾಶ್ ಅವರ ಕೊಲೆ ಎಚ್‌ಎಸ್‌ಆರ್ ಲೇಔಟ್‌ನ ಮನೆಯಲ್ಲಿ ಏಪ್ರಿಲ್ 20ರಂದು ನಡೆದಿತ್ತು. ಓಂ ಪ್ರಕಾಶ್ ಅವರ ಪುತ್ರ ಕಾರ್ತಿಕೇಶ್ ನೀಡಿದ ದೂರು ಆಧರಿಸಿ ಪಲ್ಲವಿ–ಕೃತಿ (ತಾಯಿ ಹಾಗೂ ತಂಗಿ) ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು ಪ್ರಕರಣದ ದಾಖಲಿಸಿಕೊಂಡಿದ್ದರು. ಪಲ್ಲವಿ ಅವರನ್ನು ಪೊಲೀಸರು ಬಂಧಿಸಿದ್ದರು. ವಿಚಾರಣೆ ವೇಳೆ ಕೃತಿ ಅವರು ರಂಪಾಟ ಮಾಡಿದ್ದರಿಂದ ಅವರನ್ನು ನಿಮ್ಹಾನ್ಸ್‌ಗೆ ದಾಖಲಿಸಲಾಗಿತ್ತು.

‘ಕೃತಿ ಅವರಿಗೆ ನಿಮ್ಹಾನ್ಸ್ ವೈದ್ಯರು ಚಿಕಿತ್ಸೆ ನೀಡಿ ವಿವಿಧ ಪರೀಕ್ಷೆಗೆ ಒಳಪಡಿಸಿದ್ದಾರೆ. ಅವರನ್ನು ಆಪ್ತ ಸಮಾಲೋಚನೆಗೂ ಒಳಪಡಿಸಿದ್ದಾರೆ. ಅವರಿಗೆ ಯಾವುದೇ ಮಾನಸಿಕ ಆರೋಗ್ಯ ಸಮಸ್ಯೆ ಇಲ್ಲ. ಅವರನ್ನು ವಿಚಾರಣೆಗೆ ಒಳಪಡಿಸಬಹುದು ಎಂಬುದಾಗಿ ವೈದ್ಯರು ವರದಿ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೃತಿ ಅವರನ್ನು ಆಸ್ಪತ್ರೆಯಲ್ಲೇ ಕೆಲವು ಪ್ರಶ್ನೆ ಕೇಳಿ ಮಾಹಿತಿ ಪಡೆದುಕೊಳ್ಳಲಾಗಿದೆ. ಮೂರು ದಿನ ಆಸ್ಪತ್ರೆಯಲ್ಲಿದ್ದ ಅವರು, ಅಲ್ಲಿಂದ ಮನೆಗೆ ಹೋಗಿದ್ದಾರೆ. ಅಗತ್ಯ ಬಿದ್ದರೆ ಮತ್ತೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತನಿಖಾಧಿಕಾರಿ ನೇಮಕ: ‘ಪ್ರಕರಣದ ತನಿಖೆಯನ್ನು ಸಿಸಿಬಿ ವರ್ಗಾವಣೆ ಮಾಡಲಾಗಿದ್ದು ತನಿಖಾಧಿಕಾರಿಯಾಗಿ ಸಿಸಿಬಿಯ ಎಸಿಪಿ ಧರ್ಮೇಂದ್ರ ಅವರನ್ನು ನೇಮಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಕೃತಿಯನ್ನು ಬಂಧಿಸಲು ಸಾಕ್ಷ್ಯಗಳು ಲಭಿಸಿಲ್ಲ. ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು ಕಡತವನ್ನು ಸಿಸಿಬಿ ಹಸ್ತಾಂತರ ಮಾಡಿದ್ದಾರೆ. ಆಕೆಯ ಪಾತ್ರವಿರುವುದು ಮುಂದಿನ ತನಿಖೆ ವೇಳೆ ಕಂಡುಬಂದರೆ ವಶಕ್ಕೆ ಪಡೆದುಕೊಳ್ಳುತ್ತೇವೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಹತ್ತು ಕಡೆ ಇರಿದು ಓಂ ಪ್ರಕಾಶ್ ಅವರನ್ನು ಕೊಲೆ ಮಾಡಿರುವುದು ಮರಣೋತ್ತರ ಪರೀಕ್ಷೆಯಿಂದ ಗೊತ್ತಾಗಿದೆ. ಮನೆಯಲ್ಲಿ ಜಪ್ತಿ ಮಾಡಿಕೊಂಡಿರುವ ಕೆಲವು ವಸ್ತುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದ್ದು, ವರದಿಯ ನಿರೀಕ್ಷೆಯಲ್ಲಿದ್ದೇವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪ್ರಕರಣದ ಮೊದಲನೇ ಆರೋಪಿ ಪಲ್ಲವಿ ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲು ಬಾಡಿ ವಾರಂಟ್ ಮೇಲೆ ತಮ್ಮ ಕಸ್ಟಡಿಗೆ ನೀಡುವಂತೆ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪುರಸ್ಕರಿಸಿದ ನ್ಯಾಯಾಲಯವು ಏಳು ದಿನ ಸಿಸಿಬಿ ಕಸ್ಟಡಿಗೆ ನೀಡಿ ಗುರುವಾರ ಆದೇಶಿಸಿದೆ’ ಎಂದು ಮೂಲಗಳು ತಿಳಿಸಿವೆ.

ಯುಪಿಎಸ್ಸಿ ಸಾಧಕರು



690 ರ‍್ಯಾಂಕ್

‘ಎಂಜಿನಿಯರ್ ಈಗ ಅಧಿಕಾರಿ’

ಹೆಸರು: ಸಂಜಯ ಶಶಿಕಾಂತ ಕೌಜಲಗಿ **ಊರು:** ಮೂಡಲಗಿ ತಾಲ್ಲೂಕಿನ ಫುಲಗಡ್ಡಿ

ಹಿನ್ನೆಲೆ: ತಂದೆ ಸರ್ಕಾರಿ ಪಶು ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ, ತಾಯಿ ಸಿಡಿಪಿಒ ಆಗಿದ್ದಾರೆ. 5ನೇ ತರಗತಿಯಿಂದ ಎಸ್ಸೆಸ್ಸೆಲ್ಸಿಯವರೆಗೆ ವಿಜಯ ಪುರದ ಸೈನಿಕ ಶಾಲೆಯ ವಿದ್ಯಾರ್ಥಿ. ನಂತರ ಬೆಂಗಳೂರಿನಲ್ಲಿ ದ್ವಿತೀಯ ಪಿಯು, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಿಂದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ಸ್ ಪದವಿ ಪಡೆದಿದ್ದಾರೆ.

‘ಕೋಚಿಂಗ್ ಪಡೆಯದೆ ಪಾಸಾದೆ’



552 ರ‍್ಯಾಂಕ್

ಹೆಸರು: ಡಾ. ಶ್ರೇಯಸ್‌ರಾವ್ **ಊರು:** ಉಪ್ಪುಂದ, ಬೈಂದೂರು

ಹಿನ್ನೆಲೆ: ಎಂಬಿಬಿಎಸ್, ಎಂಡಿ ಮಾಡಿರುವ ಶ್ರೇಯಸ್ ರಾವ್ ಅವರು ಮೂರನೇ ಪ್ರಯತ್ನದಲ್ಲಿ ಯುಪಿಎಸ್‌ಸಿಯಲ್ಲಿ 552ನೇ ರ‍್ಯಾಂಕ್ ಪಡೆದಿದ್ದಾರೆ. ಕಳೆದ ವರ್ಷ ಎರಡನೇ ಪ್ರಯತ್ನದಲ್ಲಿ ಸಫಲರಾಗಿದ್ದ ಅವರು 640ನೇ ರ‍್ಯಾಂಕ್ ಪಡೆದು ಭಾರತೀಯ ಕಂದಾಯ ಸೇವೆಗೆ ಆಯ್ಕೆಯಾಗಿದ್ದರು. ಸದ್ಯ ಆಂಧ್ರಪ್ರದೇಶದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರು ಉಪ್ಪುಂದದ ಗಣೇಶ್ ರಾವ್ ಮತ್ತು ಸುಶೀಲಾ ರಾವ್ ದಂಪತಿ ಪುತ್ರರಾಗಿದ್ದಾರೆ.

ಅಭಿಪ್ರಾಯ: ಯುಪಿಎಸ್‌ಸಿ ಪರೀಕ್ಷೆ ಬರೆಯಲು ನಾನು ಕೋಚಿಂಗ್ ಪಡೆದಿಲ್ಲ. ನನ್ನ ಸ್ನೇಹಿತರು ಸಿದ್ಧತೆ ನಡೆಸುತ್ತಿದ್ದರು. ಅದರಿಂದ ಪ್ರೇರಿತನಾಗಿ ನಾನೂ ಪರೀಕ್ಷೆ ಬರೆದ ಎರಡನೇ ಪ್ರಯತ್ನದಲ್ಲಿ ಐಆರ್‌ಎಸ್‌ಗೆ ಆಯ್ಕೆಯಾದೆ. ಈ ಬಾರಿ ಐಪಿಎಸ್, ಐಎಫ್‌ಎಸ್‌ಗೆ ಆಯ್ಕೆಯಾಗುವ ನಿರೀಕ್ಷೆ ಇದೆ.

ವೈದ್ಯೆಗೆ ಐಎಫ್‌ಎಸ್ ಅಧಿಕಾರಿಯಾಗುವ ಆಸೆ



206 ರ‍್ಯಾಂಕ್

ಹೆಸರು: ಡಾ. ಇಶಿಕಾ ಸಿಂಗ್ **ಊರು:** ಹುಬ್ಬಳ್ಳಿ

ವಿದ್ಯಾರ್ಹತೆ: ಎಂಬಿಬಿಎಸ್

ಹಿನ್ನೆಲೆ: ಹುಬ್ಬಳ್ಳಿಯ ಅಕ್ಷಯ ಕಾಲೊನಿಯ ನಾಲ್ಕನೇ ಹಂತದ ನಿವಾಸಿ. ಉದ್ಯಮಿ ರಾಜೇಶಕುಮಾರ್ ಸಿಂಗ್ ಮತ್ತು ಹಿಂದಿ ಉಪನ್ಯಾಸಕಿ ಕಿರಣ್ ಸಿಂಗ್ ಅವರ ಪುತ್ರಿ. ಮೂಲತಃ ಜಾರ್ಖಂಡ್‌ನ ಜೆಮ್‌ಶೆಡ್‌ಪುರದವರು. ಮೂರು ದಶಕಗಳಿಂದ ಹುಬ್ಬಳ್ಳಿಯಲ್ಲಿದ್ದಾರೆ. ಇಲ್ಲಿನ ರಾಜನಗರದ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರೌಢಶಿಕ್ಷಣ, ಗ್ಲೋಬಲ್ ಪಿಯು ವಿಜ್ಞಾನ ಕಾಲೇಜಿನಲ್ಲಿ ಪಿಯು ಮತ್ತು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ. ಯುಪಿಎಸ್‌ಸಿಯಲ್ಲಿ ವೈದ್ಯಕೀಯ ವಿಜ್ಞಾನ ಐಚ್ಛಿಕ ವಿಷಯ.

ಅಭಿಪ್ರಾಯ: ವೈದ್ಯೆ ಆಗುವುದು ನನ್ನ ಗುರಿಯಾಗಿತ್ತು. ಅದರಂತೆ ಎಂಬಿಬಿಎಸ್ ಮುಗಿಸಿ ಇಂಟರ್ನ್‌ಶಿಪ್ ಮಾಡುವಾಗ ತಂದೆಯ ಚಿಕ್ಕಪ್ಪ ಯುಪಿಎಸ್‌ಸಿ ಪರೀಕ್ಷೆ ಬಗ್ಗೆ ಹೇಳಿದ್ದರಿಂದ ಅದರಲ್ಲಿ ಆಸಕ್ತಿ ಮೂಡಿತು. ಮೊದಲ ಪ್ರಯತ್ನದಲ್ಲೇ ಯಶಸ್ಸು ಸಿಕ್ಕಿದ್ದಕ್ಕೆ ಖುಷಿಯಾಗಿದೆ. ಪರೀಕ್ಷೆಗಾಗಿ ದಿನಕ್ಕೆ 8 ರಿಂದ 10 ಗಂಟೆ ಓದುತ್ತಿದ್ದೆ. ಆನ್‌ಲೈನ್ ಕೋಚಿಂಗ್ ಬಿಟ್ಟರೆ ಬೇರೆಲ್ಲೂ ತರಬೇತಿ ಪಡೆದಿಲ್ಲ. ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಅಧಿಕಾರಿ ಆಗುವ ಆಸೆ ಇದೆ.

ಇಬ್ಬರು ವಿದ್ಯಾರ್ಥಿನಿಯರು ಸಮುದ್ರಪಾಲು

ಪ್ರಜಾವಾಣಿ ವಾರ್ತೆ

ಗೋಕರ್ಣ: ಇಲ್ಲಿನ ಕುಡ್ಲೆ ಬೀಚ್ ಮತ್ತು ಗೋಕರ್ಣದ ಮಧ್ಯೆ ಇರುವ ಜಟಾಯು ತೀರ್ಥದ ಬಳಿ ಗುರುವಾರ ಸಮುದ್ರದಲ್ಲಿ ಮುಳುಗಿ ತಮಿಳುನಾಡಿನ ತ್ರಿಚಿ ಎಸ್. ಆರ್. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರಾದ ಇಂದೂಜಾ (23) ಮತ್ತು ಕಿನ್ನಿಮೂಳಿ (23) ಮೃತಪಟ್ಟಿದ್ದಾರೆ. ಒಟ್ಟು 25 ವಿದ್ಯಾರ್ಥಿಗಳು ಗೋಕರ್ಣ ಪ್ರವಾಸಕ್ಕೆ ಬಂದಿದ್ದರು.

‘ಸಮುದ್ರದ ಬಂಡೆ ಮೇಲೆ ಕೂತಾಗ, ದೊಡ್ಡ ಅಲೆ ಬಡಿದ ರಭಸಕ್ಕೆ ಇಬ್ಬರೂ ಸಮುದ್ರಕ್ಕೆ ಬಿದ್ದರು. ಜೊತೆಗಿದ್ದವರು ಅವರನ್ನು ರಕ್ಷಿಸಿ, ಮೇಲಕ್ಕೆ ತಂದರು. ಮತ್ತೆ ರಭಸದ ಅಲೆ ಬಡಿದಾಗ, ಇಬ್ಬರೂ ಮತ್ತೆ ಬಿದ್ದರು. ಕೆಲ ಹೊತ್ತಿನ ಬಳಿಕ ಸಮುದ್ರದಲ್ಲಿ ತೇಲುತ್ತಿದ್ದ ಶವಗಳನ್ನು ಹೊರಗಡೆ ತೆಗೆಯಲಾಯಿತು’ ಎಂದು ಗೋಕರ್ಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜೋಯಾಲುಕ್ಕಾಸ್: ಸುವರ್ಣ ಸಮೃದ್ಧಿ ಅಭಿಯಾನ

ಬೆಂಗಳೂರು: ಆಭರಣ ಜಗತ್ತಿನ ಅಚ್ಚುಮೆಚ್ಚಿನ ಜೋಯಾಲುಕ್ಕಾಸ್ 2025ರ ಅಕ್ಷಯ ತೃತೀಯ ಹಬ್ಬದ ಸಂಭ್ರಮಕ್ಕೆ ವಿಶೇಷ ಕೊಡುಗೆಗಳ ‘ಸುವರ್ಣ ಸಮೃದ್ಧಿ ಅಭಿಯಾನ’ವನ್ನು ಘೋಷಿಸಿದೆ.

Joyalukkas World's favourite jeweller

ಏ.19 ರಿಂದ ಮೇ 1 ರವರೆಗೆ ಹಮ್ಮಿಕೊಂಡಿರುವ ಈ ಅಭಿಯಾನದ ಅವಧಿಯಲ್ಲಿ ಗ್ರಾಹಕರ ಪ್ರತಿ ಖರೀದಿಗೆ ಇನ್ನಷ್ಟು ಮೌಲ್ಯವನ್ನು ಸೇರ್ಪಡೆಗೊಳಿಸುವ ಅತ್ಯಾಕರ್ಷಕ ಕೊಡುಗೆ ಇದಾಗಿದೆ. ಈ ಸಂದರ್ಭದಲ್ಲಿ ಎಣೆಯಿಲ್ಲದ ಬೆಲೆಗಳಲ್ಲಿ ಅತ್ಯುತ್ತಮ ಆಭರಣಗಳನ್ನು ಖರೀದಿಸುವ ಆನಂದವನ್ನು ಅನುಭವಿಸುವ ಅವಕಾಶ ಜೋಯಾಲುಕ್ಕಾಸ್ ಸಂಸ್ಥೆ ಕಲ್ಪಿಸಿದೆ.

ಈ ಅಕ್ಷಯ ತೃತೀಯ ಹಬ್ಬದ ಕೊಡುಗೆ ಅವಧಿಯಲ್ಲಿ ಗ್ರಾಹಕರು 75 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ವಜ್ರ, ಅನ್‌ಕಟ್ ವಜ್ರ ಹಾಗೂ ಪ್ಲಾಟಿನಂ ಆಭರಣಗಳ ಖರೀದಿಯ ಮೇಲೆ ಉಚಿತ 500 ಮಿಲಿ ಗ್ರಾಮ್ (24ಕೆ) ಚಿನ್ನದ ಬಾರ್ ಪಡೆಯಲಿದ್ದಾರೆ. ಇದಕ್ಕಿಂತ ಹೆಚ್ಚಿನ ಮೌಲ್ಯದ ಐಷಾರಾಮಿ ಆಭರಣಗಳ ಖರೀದಿ ಅಥವಾ ಹೂಡಿಕೆ ಮಾಡಬಯಸುವ ಗ್ರಾಹಕರಿಗೆ (₹1.50 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಮೌಲ್ಯದ ಡೈಮಂಡ್ ಮತ್ತು ಅನ್‌ಕಟ್ ಡೈಮಂಡ್ ಹಾಗೂ ಪ್ಲಾಟಿನಂ ಆಭರಣ) 1 ಗ್ರಾಂ (24ಕೆ) ಚಿನ್ನದ ಬಾರ್ ಅಥವಾ ಲಕ್ಷ್ಮೀ ವಿಗ್ರಹ ಉಚಿತ ಕೊಡುಗೆ ಸಿಗಲಿದೆ.

ಏ.30 ರಂದು 200 ಮಿ.ಗ್ರಾಂ. ಉಚಿತ: ಏಪ್ರಿಲ್ 30 ರಂದು ಜೋಯಾಲುಕ್ಕಾಸ್ ಆಭರಣ ಮಳಿಗೆಗೆ ಭೇಟಿ ನೀಡುವ ಗ್ರಾಹಕರು ಸೀಮಿತ ಅವಧಿಯ ವಿಶೇಷ ಕೊಡುಗೆ ಲಾಭ ಪಡೆಯಲಿದ್ದಾರೆ. ಅಂದು ಖರೀದಿಸುವ ₹75 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಚಿನ್ನಾಭರಣದೊಂದಿಗೆ 200 ಮಿಲಿ ಗ್ರಾಂ (22ಕೆ) ಚಿನ್ನದ ನಾಣ್ಯ, ₹10 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಬೆಳ್ಳಿ ಆಭರಣಗಳ ಖರೀದಿ ಮೇಲೆ 5 ಗ್ರಾಂ ಬೆಳ್ಳಿ ನಾಣ್ಯ ಉಚಿತವಾಗಿ ದೊರೆಯಲಿದೆ.

ಅಕ್ಷಯ ತೃತೀಯ ವಿಶೇಷ

ಪ್ರಿ–ಬುಕ್ಕಿಂಗ್ ಕೊಡುಗೆ: ಜೋಯಾಲುಕ್ಕಾಸ್ ಶೇ 10ರಷ್ಟು ಪ್ರಿ–ಬುಕ್ಕಿಂಗ್ ಕೊಡುಗೆಯನ್ನು ಸಹ ನೀಡುತ್ತಲಿದೆ. ಇಂದಿನ ಚಿನ್ನದ ದರಕ್ಕೆ ಅನುಗುಣವಾಗಿ ಲಾಕ್ ಆಗಲಿದ್ದು, ಏ.30 ರವರೆಗೆ ಚಿನ್ನದ ದರ ಖಾತರಿ ರಕ್ಷಣೆ ಸಹ ಗ್ರಾಹಕರಿಗೆ ನೀಡಲಿದೆ. ಈ ಅವಧಿಯಲ್ಲಿ ಹಳೆ ಚಿನ್ನದ ವಿನಿಮಯದ ಮೇಲೆ ಶೂನ್ಯ ಕಡಿತದ ಪ್ರಯೋಜನವೂ ಪಡೆಯಬಹುದು.

> ಅಕ್ಷಯ ತೃತೀಯ ಕೊಡುಗೆಯನ್ನು ಉದ್ಘಾಟಿಸಿ ಮಾತನಾಡಿ, ‘ಸುವರ್ಣ ಸಮೃದ್ಧಿ ಅಭಿಯಾನದ ಮೂಲಕ ನಮ್ಮ ಗ್ರಾಹಕರೊಂದಿಗೆ ಅಕ್ಷಯ ತೃತೀಯವನ್ನು ಆಚರಿಸಲು ನಾವು ರೋಮಾಂಚನಗೊಂಡಿದ್ದೇವೆ.’ ಚಿನ್ನದ ಮೇಲೆ ಹೂಡಿಕೆ ಮಾಡಲು ಇದು ವಿಶೇಷ ಸಮಯ. ಗ್ರಾಹಕರಿಗೆ ಸಾಧ್ಯವಾದಷ್ಟು ಪ್ರತಿಫಲದಾಯಕವಾಗಿಸಲು ಈ ಸಮಯದಲ್ಲಿ ನಾವು ಬಯಸುತ್ತೇವೆ.’ ಅದು ಸ್ವಂತಕ್ಕಾಗಿ ಖರೀದಿಸುವ ಆಭರಣವಾಗಿರಲಿ ಅಥವಾ ಪ್ರೀತಿ ಪಾತ್ರರಿಗೆ ನೀಡುವ ಉಡುಗೊರೆಯಾಗಿರಲಿ ಅಥವಾ ಶಾಶ್ವತ ಹೂಡಿಕೆಗಾಗಲಿ ಅಕ್ಷಯ ತೃತೀಯ ಸಕಾಲ. ಆದ್ದರಿಂದ ಈ ಸುವರ್ಣ ಸಮೃದ್ಧಿ ಕೊಡುಗೆಗಳನ್ನು ಅನ್ವೇಷಿಸಲು ಗ್ರಾಹಕರು ತಮ್ಮ ಸಮೀಪದ ಜೋಯಾಲುಕ್ಕಾಸ್ ಮಳಿಗೆಗೆ ಭೇಟಿ ನೀಡಲು ಆಹ್ವಾನಿಸುತ್ತೇನೆ.
> **ಜೋಯ್ ಆಲುಕ್ಕಾಸ್,** ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

551ನೇ ರ‍್ಯಾಂಕ್ ಪಡೆದ ಬೀರದೇವ ಡೋಣೆ

ಕುರಿ ಮಂದೆಯಲ್ಲಿ ಸಾಧನೆಯ ‘ಕಾರಂಜಿ’

• ಸಂತೋಷ ಈ. ಚಿನಗುಡಿ

ಬೆಳಗಾವಿ: ಈ ಯುವಕ ಬೆಳಗಾವಿ ಹೊರವಲಯದಲ್ಲಿ ಕುರಿ ಕಾಯುತ್ತಿದ್ದ. ದೆಹಲಿಯಲ್ಲಿರುವ ಆತನ ಸ್ನೇಹಿತನಿಂದ ಮೊಬೈಲ್ ಫೋನ್‌ಗೆ ಕರೆ ಬಂತು. ‘ಮಗಾ, ನೀನು ಚಾನ್ಸ್ ಹೊಡೆದೆ ಕಣೋ’ ಎಂದಿತು ಧ್ವನಿ. ಖುಷಿಯಿಂದ ಜಿಗಿದಾಡಿದ ಯುವಕ ಮೊಬೈಲ್‌ನ್ನು ಗಾಳಿಯಲ್ಲಿ ತೂರಿದ. ತನ್ನ ಮುದ್ದಿನ ಕುರಿಮರಿಗಳನ್ನು ಎತ್ತಿಕೊಂಡು ಹೊಲದಲ್ಲಿ ಓಡಾಡಿದ...

ಯುಪಿಎಸ್‌ಸಿಯಲ್ಲಿ 551ನೇ ರ‍್ಯಾಂಕ್ ಪಡೆದ ಬೀರದೇವ ಡೋಣೆ ದೇಶವೇ ತಿರುಗಿ ನೋಡುವಂಥ ಸಾಧನೆ ಮಾಡಿದ್ದಾರೆ. ಸಾಧನೆಗೆ ಬಡತನ, ಮತ– ಅಂತಸ್ತು ಅಡ್ಡಿಯಾಗುವುದಿಲ್ಲ ಎಂದು ತೋರಿಸಿದ್ದಾರೆ. ಕುರಿ ಕಾಯುವ ಕಾಯಕದ ಜತೆಗೇ ಸ್ಫೂರ್ತಿಯ ಕಾರಂಜಿಯಾಗಿದ್ದಾರೆ.

15 ದಿನಗಳ ಹಿಂದೆ ತಂದೆ– ತಾಯಿಗೆ ನೆರವಾಗಲು ಕುರಿ ಕಾಯುತ್ತ ಬೆಳಗಾವಿಗೆ ಬಂದಿದ್ದರು ಬೀರದೇವ. ಐಪಿಎಸ್ ಆಗುವ ಕನಸಿನ ಬುತ್ತಿ ಅವರು ಇದ್ದಲ್ಲಿಗೇ ಹುಡುಕಿಕೊಂಡು ಬಂದಿದೆ.

ಬೀರದೇವ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಯಮಗೆ ಗ್ರಾಮದವರು. ತಂದೆ ಸಿದ್ದಪ್ಪ, ತಾಯಿ ಬಾಲಾಬಾಯಿ ಕುರಿಗಾಹಿಗಳು. ಪಾಲಕರು ಜಿಲ್ಲೆಯ ಹದ್ದಿಯಲ್ಲೇ ಕುರಿ ಮೇಯಿಸುತ್ತಾರೆ. ಬೀರದೇವ ಸೋದರಮಾವಂದಿರು ಬೆಳಗಾವಿಯಲ್ಲಿ ಕುರಿಹಿಂಡು ಹೊಂದಿದ್ದಾರೆ. ಸಮಯ ಸಿಕ್ಕಾಗ ಈ ಸಾಧಕ ಇಲ್ಲಿಗೇ ಬಂದು ಕುರಿ ಕಾಯುವುದು ರೂಢಿ.

ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ತೇರ್ಗಡೆಯಾದ ಸಂಗತಿ ಕೇಳಿ ಕುಟುಂಬದವರ ಸಂತಸಕ್ಕೆ ಪಾರವೇ ಇಲ್ಲ. ಆ ಆನಂದವನ್ನೂ ಅವರು ಕುರಿಗಳ ಮಧ್ಯದಲ್ಲೇ ಸಂಭ್ರಮಿಸುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ ಓದಿರುವ ಅವರ ತಂದೆ, ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದರು. ಅಣ್ಣ ವಾಸುದೇವ ಮಿಲಿಟರಿ ಸೇರಿದ ಬಳಿಕ ಬೀರದೇವ ಯುಪಿಎಸ್‌ಸಿಗೆ ಸಿದ್ಧತೆ ಶುರು ಮಾಡಿದರು. ಹಲವು ದಾನಿಗಳು, ಸಿಎಸ್‌ಆರ್ ಫಂಡ್ ನೀಡುವವರಿಂದಲೂ ಹಣದ ನೆರವು ಪಡೆದರು.



ಬೆಳಗಾವಿ ಹೊರವಲಯದಲ್ಲಿ ಬಿಡಾರ ಹೂಡಿದ ಬೀರದೇವ ಡೋಣೆ (ಎಡದಿಂದ ಮೂರನೇಯವರು) ಹಾಗೂ ಕುಟುಂಬದವರು – ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಾಲ್ಕನೇ ಪ್ರಯತ್ನದಲ್ಲಿ ಯಶಸ್ಸು ಗಳಿಸಿದ್ದಾರೆ. ಆದರೆ, 200 ರ‍್ಯಾಂಕ್ ಒಳಗೇ ಬಂದು ಐಎಎಸ್ ಅಧಿಕಾರಿ ಆಗಬೇಕು ಎಂಬುದು ಅವರ ಛಲ. ಅದಕ್ಕಾಗಿ ಅಧ್ಯಯನ ಬಿಟ್ಟಿಲ್ಲ.

‘ದಿನವೂ ಎಂಟು ತಾಸು ಓದುವುದು ರೂಢಿ. ಪ್ರತಿ ತಾಸಿಗೂ ಐದು ನಿಮಿಷ ಬಿಡುವು ಪಡೆಯುತ್ತೇನೆ. ಮಿದುಳು ಸ್ವಲ್ಪ ನಿರಾಳ ಆಗಲು ಇದು ಮುಖ್ಯ. ರಾತ್ರಿ 11ಕ್ಕೆ ಮಲಗಿ, ಬೆಳಿಗ್ಗೆ 7.30ಕ್ಕೆ ಏಳುತ್ತೇನೆ. ದೈನಂದಿನ ಕೆಲಸಗಳ ಜತೆಗೇ 8 ತಾಸು ಗಟ್ಟಿಯಾಗಿ ಓದಲು ಸಾಧ್ಯವಿದೆ. ಮೊಬೈಲ್ ಬಿಟ್ಟೆ, ಸಾಮಾಜಿಕ ಜಾಲತಾಣಗಳಿಂದ ದೂರವುಳಿದೆ. ಅವು ನಮ್ಮನ್ನು ವ್ಯಾಕುಲತೆಗೆ ತಳ್ಳುತ್ತವೆ. ಪ್ರತಿ ದಿನ ಒಂದು ತಾಸು ಗ್ರಂಥಾಲಯದಲ್ಲಿ ಪತ್ರಿಕೆಗಳನ್ನು ಕಡ್ಡಾಯ ಓದುತ್ತೇನೆ’ ಎಂದು ಬೀರದೇವ ತಮ್ಮ ದಿನಚರಿ ವಿವರಿಸಿದರು.

‘ಕನ್ನಡವೋ, ಮರಾಠಿಯೋ, ಇಂಗ್ಲಿಷ್ಯೋ... ಯಾವುದು ಸುಲಭವೋ ಅದೇ ಮಾಧ್ಯಮ ಆಯ್ಕೆ ಮಾಡಿಕೊಳ್ಳಬೇಕು. ಎಲ್ಲದಕ್ಕೂ ಮುಖ್ಯವಾಗಿ ಬೇಕಿರುವುದು ತನ್ಮಯತೆ. ಅದೇ ಯಶಸ್ಸಿನ ಮೊದಲ ಮೆಟ್ಟಿಲು’ ಎಂದರು ಅವರು.

‘ಚಂಚಲತೆಯಿಂದ ಹೊರ ಬರಬೇಕು’

‘ನನ್ನನ್ನು ನಾನೇ ಶೋಧಿಸಿಕೊಂಡು, ಮೂರು ಬಾರಿ ಏಕೆ ವಿಫಲನಾದೆ ಎಂದು ಖಾತ್ರಿ ಮಾಡಿಕೊಂಡೆ. ಚಂಚಲತೆ ಮೆಟ್ಟಿ ನಿಂತೆ. ಯಶಸ್ಸು ಸಿಕ್ಕಿತು. ಪರಿಶ್ರಮಕ್ಕೆ ಫಲ ಸಿಕ್ಕಿತು’ ಎಂದು ಬೀರದೇವ ಡೋಣೆ ತಿಳಿಸಿದರು. ‘ಪ್ರಾಥಮಿಕ, ಪ್ರೌಢಶಾಲೆ, ಪಿಯು ಶಿಕ್ಷಣ ಮರಾಠಿಯಲ್ಲಿ, ಸರ್ಕಾರಿ ಶಾಲೆಗಳಲ್ಲೇ ಮುಗಿಸಿದೆ. ಪುಣೆಯಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದೆ. ಯುಪಿಎಸ್‌ಸಿ ಟಾಪರ್‌ಗಳನ್ನು ನೋಡಿ ನನ್ನಲ್ಲಿ ಕನಸು ಮೊಳೆಯಿತು. ದೆಹಲಿಗೆ ಹೋಗಿ ಕೋಚಿಂಗ್ ಪಡೆದು ಬಂದೆ’ ಎಂದರು.

‘ಹಿರಿಯರಾದ ಸವಿತಾ ಕುಲಕರ್ಣಿ, ಸ್ನೇಹಿತರಾದ ನಿಶಾಂತ ಮತ್ತು ಕೋಮಲ್ ಅಧ್ಯಯನ ಸಾಮಗ್ರಿ ನೀಡಿ ನೆರವಾದರು. ಮತ್ತೊಮ್ಮೆ ಪುಣೆಯಲ್ಲಿ ಕೋಚಿಂಗ್ ಪಡೆದೆ. ಹಣ ಹೋದರೂ ಚಿಂತೆಯಿಲ್ಲ ‘ಅವಕಾಶಗಳು’ ಕಳೆದು ಹೋಗಬಾರದು ಎಂಬುದು ನನ್ನ ಅನಿಸಿಕೆ. ಎಷ್ಟೇ ಆತ್ಮಸ್ಥೈರ್ಯವಿದ್ದರೂ ಒಮ್ಮೆ ಕೋಚಿಂಗ್ ಪಡೆಯುವುದು ಅವಶ್ಯಕ’ ಎಂದು ಅವರು ಹೇಳಿದರು.



ಕಣಿವೆಯಲ್ಲಿ ಮರಣ ಮೃದಂಗ



> ನೀವು ನಮ್ಮ ವೇತನದಿಂದ ತೆರಿಗೆಯನ್ನು ಕಡಿತಗೊಳಿಸಿದ್ದೀರಿ. ನಾವು ಖರೀದಿಸುವ ಪ್ರತಿಯೊಂದು ವಸ್ತುವಿಗೂ ನಿಮಗೆ ತೆರಿಗೆ ಪಾವತಿಸುತ್ತೇವೆ. ಆದರೆ, ನನ್ನ ಪತಿಗೆ ಭದ್ರತೆಯ ಅಗತ್ಯವಿದ್ದಾಗ, ಅದನ್ನು ನೀಡಲು ನಿಮಗೆ ಸಾಧ್ಯವಾಗಲಿಲ್ಲ. ನಿಮಗೆ ಭದ್ರತೆ ಒದಗಿಸಲು ಆಗದಿದ್ದರೆ, ಆ ಪ್ರವಾಸಿ ತಾಣವನ್ನು ಮುಚ್ಚಿರಿ ಎಂದು ಶೀತಲ್ ಕಲಾಥಿಯಾ ಹೇಳಿದ್ದಾರೆ

‘ಸಾಮಾನ್ಯ ಜನರ ಜೀವಕ್ಕೆ ಬೆಲೆ ಇಲ್ಲವೇ?’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮೃತರಲ್ಲಿ ಒಬ್ಬರಾದ ಸೂರತ್‌ನ ಬ್ಯಾಂಕ್ ಉದ್ಯೋಗಿ ಶೈಲೇಶ್ ಕಲಾಥಿಯಾ ಅವರ ಪತ್ನಿ ಶೀತಲ್ ಕಲಾಥಿಯಾ ಅವರು ಪ್ರಸಿದ್ಧ ಪ್ರವಾಸಿ ತಾಣದಲ್ಲಿ ಯಾವುದೇ ಭದ್ರತೆ ಒದಗಿಸದ್ದಕ್ಕಾಗಿ ಸರ್ಕಾರವನ್ನು ಗುರುವಾರ ತರಾಟೆಗೆ ತೆಗೆದುಕೊಂಡರು.

‘ಉಗ್ರರ ಗುಂಡಿಗೆ ಬಲಿಯಾದ ಎಲ್ಲಾ ಅಮಾಯಕರಿಗೆ ನ್ಯಾಯ ದೊರೆಯಬೇಕು. ಅಲ್ಲಿ ಪ್ರವಾಸಿಗರಿಗೆ ಪೊಲೀಸರ ಅಥವಾ ಸೇನೆಯ ಭದ್ರತೆ ಇರಲಿಲ್ಲ. ಗಣ್ಯ ವ್ಯಕ್ತಿಗಳಿಗೆ ಭದ್ರತಾ ಸಿಬ್ಬಂದಿಯ ಬೆಂಗಾವಲು ಇರುತ್ತದೆ. ಕೆಲವೊಮ್ಮೆ ಭದ್ರತೆಗಾಗಿ ಅವರ ತಲೆಯ ಮೇಲೆ ಹೆಲಿಕಾಪ್ಟರ್‌ಗಳು ಕೂಡಾ ಹಾರಾಟ ನಡೆಸುತ್ತವೆ. ವಿಐಪಿಗಳ ಭದ್ರತೆಗೆ ಖರ್ಚು ಮಾಡಲು ಆ ಹಣವನ್ನು ನೀವು ಎಲ್ಲಿಂದ ಪಡೆಯುತ್ತೀರಿ?’ ಎಂದು ತಮ್ಮ ಪತಿಗೆ ಅಂತಿಮ ನಮನ ಸಲ್ಲಿಸಲು ಬಂದಿದ್ದ ಕೇಂದ್ರ ಸಚಿವ ಸಿ.ಆರ್. ಪಾಟೀಲ್ ವಿರುದ್ಧ ಆಕ್ರೋಶ ಹೊರಹಾಕಿದರು.

‘ಗಾಯಗೊಂಡವರಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅಗತ್ಯವಿತ್ತು. ಸೇನಾ ಶಿಬಿರದ ಬಳಿ ತೆರಳಿ ತುರ್ತು



ಸಹಾಯಕ್ಕಾಗಿ ಅಂಗಲಾಚಿದೆ. ಪ್ರಥಮ ಚಿಕಿತ್ಸೆಗೆ ಬೇಕಾಗಿದ್ದ ಕಿಟ್ ಕೂಡ ಅಲ್ಲಿ ಲಭ್ಯವಿರಲಿಲ್ಲ. ಭಯೋತ್ಪಾದಕರು ಮುಸ್ಲಿಮರು ಮತ್ತು ಹಿಂದೂಗಳನ್ನು ಪ್ರತ್ಯೇಕಿಸಿ ಹಿಂದೂ ಪುರುಷರನ್ನು ಕೊಂದರು. ಆ ಸಂದರ್ಭದಲ್ಲಿ ನಮ್ಮ ಸೇನೆ ಏನು ಮಾಡುತ್ತಿತ್ತು? ಕಾಶ್ಮೀರದಲ್ಲಿ ಲಕ್ಷಾಂತರ ಸೈನಿಕರನ್ನು ನಿಯೋಜಿಸಲಾಗಿದೆ. ಆದರೆ ಅಲ್ಲಿ ಯಾರೂ ಇರಲಿಲ್ಲ’ ಎಂದು ಸಿಡಿಮಿಡಿಗೊಂಡರು.

ಶೈಲೇಶ್ ಅವರ ಅಂತ್ಯಕ್ರಿಯೆ ಗುರುವಾರ ಸೂರತ್‌ನಲ್ಲಿ ನೆರವೇರಿತು. ಅಲ್ಲಿ ನೆರೆದಿದ್ದ ನೂರಾರು ಮಂದಿಯ ಎದುರೇ ಶೀತಲ್ ಅವರ ಆಕ್ರೋಶದ ಕಟ್ಟೆಯೊಡೆಯಿತು. ‘ವಿಐಪಿಗಳಿಗೆ ಭದ್ರತೆ ಸಿಗುತ್ತದೆ. ಆದರೆ ತೆರಿಗೆ ಪಾವತಿಸುವ ಸಾಮಾನ್ಯ ಜನರ ಜೀವಕ್ಕೆ ಬೆಲೆಯಿಲ್ಲವೇ’ ಎಂದು ಪ್ರಶ್ನಿಸಿದರು.

‘ಯಾವ ರೀತಿಯ ಸರ್ಕಾರ ನಮ್ಮನ್ನು ಆಳುತ್ತಿದೆ? ನೀವು ಕಾಶ್ಮೀರದ ಹೆಸರು ಕೆಡಿಸುತ್ತಿದ್ದೀರಿ. ಆದರೆ, ಸಮಸ್ಯೆ ಕಾಶ್ಮೀರದ್ದಲ್ಲ. ಅಲ್ಲಿ ಸೂಕ್ತ ಭದ್ರತೆ ಇಲ್ಲದ್ದೇ ಪ್ರಮುಖ ಸಮಸ್ಯೆಯಾಗಿತ್ತು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಯಾವುದೇ ಭದ್ರತಾ ಸಿಬ್ಬಂದಿ ಇರಲಿಲ್ಲ’ ಎಂದರು.

‘ಡಾಕ್ಟರ್ ಮತ್ತು ಎಂಜಿನಿಯರ್ ಆಗಬೇಕೆಂದು ಬಯಸಿರುವ ನನ್ನ ಮಕ್ಕಳ ಭವಿಷ್ಯವೇನು? ನಮ್ಮ ಕುಟುಂಬದ ಆಧಾರಸ್ತಂಭವನ್ನು ಕಳೆದುಕೊಂಡಿದ್ದೇನೆ. ಮಕ್ಕಳನ್ನು ಇನ್ನು ಯಾರು ನೋಡಿಕೊಳ್ಳುವರು?’ ಎಂದು ಕಣ್ಣೀರು ಹಾಕಿದರು.

ಭದ್ರತಾ ಸಿಬ್ಬಂದಿ ನಿಯೋಜಿಸಬೇಕಿತ್ತು: ‘ಪ್ರವಾಸಿ ತಾಣದಲ್ಲಿ ಅಷ್ಟೆಲ್ಲಾ ಜನ ಇದ್ದರೂ ಒಬ್ಬ ಸೈನಿಕನೂ ಅಲ್ಲಿರಲಿಲ್ಲ. ಅಲ್ಲಿಗೆ ತಲುಪಲು ಕಠಿಣವಾದ ಹಾದಿಯಲ್ಲಿ ಸಾಗಬೇಕು. ಆದರೆ, ದುರಂತ ತಪ್ಪಿಸಲು ಈ ಪ್ರವಾಸಿ ತಾಣದಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕಾಗಿತ್ತೆಂದು ಭಾವಿಸುತ್ತೇನೆ’ ಎಂದು ದಾಳಿಯಲ್ಲಿ ಮೃತಪಟ್ಟ ಶಿವಮೊಗ್ಗದ ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನಿಯರಿಗೆ ವೀಸಾ ನೀಡುವ ಪ್ರಕ್ರಿಯೆಗೆ ತಡೆ

ನವದೆಹಲಿ (ಪಿಟಿಐ): ಪಾಕಿಸ್ತಾನಿ ಪ್ರಜೆಗಳಿಗೆ ವೀಸಾ ನೀಡುವ ಪ್ರಕ್ರಿಯೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಭಾರತ ರದ್ದುಪಡಿಸಿದೆ. ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕೃತ್ಯಕ್ಕೆ ಪ್ರತಿಕ್ರಿಯಾತ್ಮಕ ಕ್ರಮವಾಗಿ ಈ ನಿಲುವು ತಳೆದಿದೆ.

ಭಾರತ ಸದ್ಯ ಪಾಕಿಸ್ತಾನಿ ಪ್ರಜೆಗಳಿಗೆ ನೀಡಿರುವ ವೀಸಾಗಳ ಅವಧಿಯು ಏಪ್ರಿಲ್ 27ರಿಂದ ಜಾರಿಗೆ ಬರುವಂತೆ ಮುಕ್ತಾಯವಾಗಲಿದೆ. ವೈದ್ಯಕೀಯ ವೀಸಾ ಏ. 29ರವರೆಗೆ ಮಾತ್ರ ಊರ್ಜಿತವಾಗಿರಲಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಪ್ರಕಟಿಸಿತು.

ವೀಸಾದ ಅವಧಿ ಮುಗಿಯುವುದರ ಒಳಗೆ ಸದ್ಯ ಭಾರತದಲ್ಲಿ ನೆಲೆಸಿರುವ ಎಲ್ಲ ಪಾಕಿಸ್ತಾನಿಯರು ದೇಶವನ್ನು ತೊರೆಯಬೇಕು ಎಂದು ಭಾರತ ತಾಕೀತು ಮಾಡಿದೆ.

ಇದೇ ವೇಳೆ ಭಾರತೀಯರು ನೆರೆಯ ಪಾಕಿಸ್ತಾನಕ್ಕೆ ಹೋಗುವುದನ್ನು ಕೈಬಿಡಬೇಕು. ಅಲ್ಲದೆ, ಈಗಾಗಲೇ ಪಾಕಿಸ್ತಾನಕ್ಕೆ ಹೋಗಿರುವವರು ಆದಷ್ಟು ತ್ವರಿತಗತಿಯಲ್ಲಿ ದೇಶಕ್ಕೆ ಮರಳಬೇಕು ಎಂದು ಸಲಹೆ ಮಾಡಿದೆ.

ಉಗ್ರರ ದಾಳಿ ಕೃತ್ಯಕ್ಕೆ ಪಾಕಿಸ್ತಾನದ ನೇರ ಸಹಕಾರವಿದೆ ಎಂದು ಪ್ರತಿಪಾದಿಸಿರುವ ಭಾರತ, ಪ್ರತಿಕ್ರಿಯೆಯಾಗಿ ಬುಧವಾರ ಐದು ಕಠಿಣ ಕ್ರಮಗಳನ್ನು ಪ್ರಕಟಿಸಿತ್ತು.

ಜವಾಬ್ದಾರಿಯಿಂದ ಮಾತನಾಡಿ: ಬಿವೈವಿ

ಬೆಂಗಳೂರು: ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಅವರು, ಭಯೋತ್ಪಾದಕರ ದಾಳಿಯ ವಿಚಾರದಲ್ಲಿ ಹೊಣೆಗಾರಿಕೆ ಅರಿತು ಮಾತನಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿ,‘ಕೇಂದ್ರದ ಗುಪ್ತಚರ ವೈಫಲ್ಯದ ಬಗ್ಗೆ ಮಾತನಾಡುತ್ತಾರೆ. ಈ ದೇಶವನ್ನು 60 ವರ್ಷ ಕಾಂಗ್ರೆಸ್ ಆಡಳಿತ ನಡೆಸಿತ್ತು. ಆಗಲೂ ಹಲವು ಬಾರಿ ಭಯೋತ್ಪಾದಕ ದಾಳಿಗಳು ನಡೆದಿರಲಿಲ್ಲವೇ? ಅವರ ಅವಧಿಯಲ್ಲಿ ಭಯೋತ್ಪಾದನೆ ನಿರ್ಮೂಲನೆ ಮಾಡಲು ಏಕೆ ಸಾಧ್ಯವಾಗಲಿಲ್ಲ?’ ಎಂದರು.

ದಿನದ ಬೆಳವಣಿಗೆ

- ಮುಗ್ಧ ನಾಗರಿಕರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ಖಂಡಿಸಿ ಕರ್ನಾಟಕದ ಸಚಿವ ಸಂಪುಟ ಸಭೆ ಖಂಡನಾ ನಿರ್ಣಯ ಕೈಗೊಂಡಿದೆ
- ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮೃತರಾದ 26 ಮಂದಿಯಲ್ಲಿ ಒಬ್ಬರು ಮಾತ್ರ ವಿದೇಶಿ ಪ್ರಜೆ. ಇವರು ನೇಪಾಳದ ಪ್ರಜೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ
- ಜಮ್ಮು ಮತ್ತು ಕಾಶ್ಮೀರಕ್ಕೆ ಹಾಗೂ ಭಾರತ–ಪಾಕಿಸ್ತಾನ ಗಡಿಯ 10 ಕಿ.ಮೀ ವ್ಯಾಪ್ತಿಯೊಳಗಿನ ಪ್ರದೇಶಗಳಿಗೆ ಭೇಟಿ ನೀಡದಂತೆ ಅಮೆರಿಕವು ತನ್ನ ನಾಗರಿಕರಿಗೆ ಸೂಚಿಸಿದೆ
- ಸೇನೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರಿಂದ ಶ್ರೀನಗರಕ್ಕೆ ಶುಕ್ರವಾರ ಭೇಟಿ
- ವಾಯುಪಡೆಯು ಸೆಂಟರ್ ಸೆಕ್ಟರ್‌ನಲ್ಲಿ ‘ಎಕ್ಸರ್‌ಸೈಜ್ ಆಕ್ರಮಣ’ ಹೆಸರಿನ ತಾಲೀಮು ಆರಂಭಿಸಿದ್ದು, ರಫೇಲ್ ಹಾಗೂ ಸುಖೋಯ್‌–30 ಯುದ್ಧವಿಮಾನಗಳು ಭಾಗಿ

> **ಆಕಸ್ಮಿಕವಾಗಿ ಗಡಿ ದಾಟಿದ್ದ ಬಿಎಸ್‌ಎಫ್ ಯೋಧ ಪಿ.ಕೆ. ಸಾಹು ಅವರನ್ನು ಪಾಕ್ ಸೇನೆ ಬಂಧಿಸಿದೆ**

- ಪಾಕಿಸ್ತಾನದ ಸಶಸ್ತ್ರ ಪಡೆಗಳು ಕೂಡ ಗಡಿಯಲ್ಲಿ ಎಚ್ಚರಿಕೆ ವಹಿಸಿವೆ. ಭಾರತದಿಂದ ಸಂಭಾವ್ಯ ದಾಳಿ ಕಾರಣದಿಂದ ಈ ಕ್ರಮ ಕೈಗೊಂಡಿವೆ.
- ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ವಿಶೇಷ ಪಡೆಯ ಯೋಧ ಝಂತು ಅಲಿ ಶೇಖ್ ಅವರು ಹುತಾತ್ಮರಾಗಿದ್ದಾರೆ
- ಪಾಕಿಸ್ತಾನವನ್ನು ಸಮರ್ಥಿಸಿಕೊಂಡಿದ್ದ ಎಐಯುಡಿಎಫ್ ಶಾಸಕ ಅಮಿನುಲ್ ಇಸ್ಲಾಂ ಅವರನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದಾರೆ

ಪೊಲೀಸ್ ಗೌರವದೊಂದಿಗೆ ಮೃತರ ಅಂತ್ಯಕ್ರಿಯೆ

ಪಹಲ್ಗಾಮ್‌ನಲ್ಲಿ ಉಗ್ರರ ಗುಂಡಿಗೆ ಬಲಿಯಾದ ಕನ್ನಡಿಗರಾದ ಬೆಂಗಳೂರಿನ ಭರತ್ ಭೂಷಣ್ ಮತ್ತು ಶಿವಮೊಗ್ಗದ ಮಂಜುನಾಥ ರಾವ್ ಅವರ ಅಂತ್ಯಕ್ರಿಯೆ ಗುರುವಾರ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. ಕುಟುಂಬಸ್ಥರು ಮತ್ತು ಬಂಧುಬಾಂಧವರು ಮೃತರಿಗೆ ಭಾವಪೂರ್ಣ ಅಶ್ರುತರ್ಪಣ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ಗುಂಡಿಗೆ ಬಲಿಯಾದ ನಗರದ ಭರತ್ ಭೂಷಣ್ ಅವರ ಅಂತ್ಯಕ್ರಿಯೆಯು ಹೆಬ್ಬಾಳದಲ್ಲಿರುವ ಚಿತಾಗಾರದಲ್ಲಿ ನಡೆಯಿತು.

ಮೃತ ಭರತ್ ಭೂಷಣ್, ಮಂಜುನಾಥ ರಾವ್ ಅವರ ಶರೀರಗಳು ಹಾಗೂ ಕುಟುಂಬದವರು ಇದ್ದ ವಿಮಾನವು ಮುಂಜಾನೆ 3.50ರ ವೇಳೆಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿತು. ಬೆಳಿಗ್ಗೆ 6.30ರ ವೇಳೆಗೆ ಭರತ್ ಅವರ ಶರೀರವನ್ನು ಜಾಲಹಳ್ಳಿ ಸಮೀಪದ ಸುಂದರನಗರ ನಿವಾಸಕ್ಕೆ ಆಂಬುಲೆನ್ಸ್‌ನಲ್ಲಿ ತರಲಾಯಿತು.

ಮನೆಯ ಎದುರು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕುಟುಂಬದವರು, ಸ್ನೇಹಿತರು ಮತ್ತು ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು.

ಬೆಳಿಗ್ಗೆ 7.30ರ ಸುಮಾರಿಗೆ ಅಲ್ಲಿಗೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೃತರಿಗೆ ಪುಷ್ಪನಮನ ಸಲ್ಲಿಸಿದರು. ಮೃತರ ಕುಟುಂಬದ ಸದಸ್ಯರೊಂದಿಗೆ ಕೆಲಕಾಲ ಮಾತನಾಡಿ, ಸಾಂತ್ವನ ಹೇಳಿದರು. ಜತೆಗೆ ಪೊಲೀಸ್ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕುಟುಂಬದವರಿಗೆ ಸಾಂತ್ವನ ಹೇಳಿ, ಅಂತಿಮ ದರ್ಶನದ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಭರತ್ ಅವರ ಶರೀರವನ್ನು ಮಧ್ಯಾಹ್ನ ವಿಶೇಷ ವಾಹನದಲ್ಲಿ ಹೆಬ್ಬಾಳದ ವಿದ್ಯುತ್ ಚಿತಾಗಾರಕ್ಕೆ ತರಲಾಯಿತು. ಅಲ್ಲಿ ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ, ಗೌರವ ಸಲ್ಲಿಸಿದರು. ನಂತರ ವಿಧಿ–ವಿಧಾನಗಳನ್ನು ಪೂರೈಸಿ, ಸಂಜೆ 4ರ ವೇಳೆಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಭರತ್ ಭೂಷಣ್ ಅವರ ಕುಟುಂಬದವರಿಗೆ ಸಿದ್ದರಾಮಯ್ಯ ಅವರು ಸಾಂತ್ವನ ಹೇಳಿದರು

‘ಓಡೋಡಿ ಜೀವ ಉಳಿಸಿಕೊಂಡೆವು’

ಬೈಸರನ್ ಕಣಿವೆಯ ಕಲ್ಲುಬೆಂಚಿನ ಮೇಲೆ ಕುಳಿತಿದ್ದಾಗ ಉಗ್ರರು ನಮ್ಮೆದುರು ಬಂದರು. ನಾನು ಮತ್ತು ಭರತ್ ನಮ್ಮ ಮಗನನ್ನು ಬಚ್ಚಿಟ್ಟುಕೊಂಡೆವು. ಅವರು ‘ವೋ ಬಚ್ಚಾ ಹೇ, ಉಸ್ಕೊ ನಹೀ ಮಾರೇಂಗೆ’ ಎಂದು ಮಾತನಾಡಿಕೊಂಡರು. ಭರತ್ ತಲೆಗೆ ಗುರಿಯಿಟ್ಟು ಗುಂಡು ಹಾರಿಸಿ ಹೋದರು. ನಮ್ಮವರು ಕುಸಿದುಬಿದ್ದರು. ನನ್ನ ಮಗುವನ್ನು ಎಲ್ಲಿ ಕೊಂದುಬಿಡುತ್ತಾರೋ ಎಂಬ ಭಯದಲ್ಲಿ ಅವನನ್ನು ಎದೆಗವಚಿಕೊಂಡು ಅಲ್ಲಿಂದ ಓಡಿದೆ. ಕಣಿವೆ ಇಳಿದು ಓಡಿ ಬರುವಾಗಲೂ ಹಿಂದೆ ಗುಂಡಿನ ಶಬ್ದ ಕೇಳುತ್ತಲೇ ಇತ್ತು.

ಡಾ.ಸುಜಾತ, ಮೃತ ಭರತ್ ಭೂಷಣ್ ಅವರ ಪತ್ನಿ

‘ಅಮಾಯಕರ ಹತ್ಯೆ ಹೇಯಕೃತ್ಯ’

‘ಉಗ್ರರನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ನಮ್ಮ ಸರ್ಕಾರ ದೇಶದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಗ್ರಹಿಸಿ, ಉಗ್ರರನ್ನು ಸದೆಬಡಿಯುವ ನಿಟ್ಟಿನಲ್ಲಿ ಕೇಂದ್ರಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ. ಅಮಾಯಕ ಜನರನ್ನು ತಮ್ಮ ಕುಟುಂಬದವರ ಎದುರು ಕೊಲ್ಲುವುದು ಹೇಯಕೃತ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಕಾಶ್ಮೀರದಲ್ಲಿ ಈಚಿನ ವರ್ಷಗಳಲ್ಲಿ ಪುಲ್ವಾಮಾ, ಬಾಲಾಕೋಟ್ ದಾಳಿಗಳು ನಡೆದಿದ್ದವು. ಅಂತಹ ದಾಳಿ ಮರುಕಳಿಸಿದೆ. ಇದಕ್ಕೆ ಕೇಂದ್ರದ ಗುಪ್ತಚರ ಇಲಾಖೆಯ ವೈಫಲ್ಯವೂ ಕಾರಣ ಇರಬಹುದು. ಈ ದಾಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೆಲವು ಕ್ರಮಗಳನ್ನು ಈಗಾಗಲೇ ಕೈಗೊಂಡಿದೆ. ಉಗ್ರರನ್ನು ಮಟ್ಟ ಹಾಕುವ ಇನ್ನೂ ಹೆಚ್ಚಿನ ಕ್ರಮಗಳಿಗೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲವಿರಲಿದೆ’ ಎಂದರು.



ಶಿವಮೊಗ್ಗದಲ್ಲಿ ಗುರುವಾರ ನಡೆದ ಮಂಜುನಾಥರಾವ್ ಅವರ ಅಂತಿಮ ಯಾತ್ರೆಯ ಮೆರವಣಿಗೆ ನೋಟ

(ಶಿವಮೊಗ್ಗ ವರದಿ): ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರಿಂದ ಹತ್ಯೆಗೊಳಗಾಗಿರುವ ಶಿವಮೊಗ್ಗದ ಮಂಜುನಾಥ ರಾವ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 3.30ಕ್ಕೆ ಇಲ್ಲಿನ ತುಂಗಾ ನದಿ ದಂಡೆಯಲ್ಲಿರುವ ರೋಟರಿ ಚಿತಾಗಾರದಲ್ಲಿ ನೆರವೇರಿತು.

ಸುಡುಬಿಸಿಲು ಲೆಕ್ಕಿಸದೇ ಮೂರು ಗಂಟೆಗೂ ಹೆಚ್ಚು ಕಾಲ ಮಂಜುನಾಥ ರಾವ್ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡು ಮಲೆನಾಡಿನ ಜನರು ವಿದಾಯದ ಗೌರವ ಸಲ್ಲಿಸಿದರು. ಚಿತಾಗಾರದಲ್ಲಿ ಇರಿಸಿದ ಅವರ ಪಾರ್ಥಿವ ಶರೀರದ ಹಣೆಗೆ ಮುತ್ತಿಕ್ಕಿ ಪತ್ನಿ ಪಲ್ಲವಿ ಭಾವಪೂರ್ಣ ನಮನ ಸಲ್ಲಿಸಿದರೆ, ಪುತ್ರ ಅಭಿಜಯ ರಾವ್ ತುಳಸಿ ನೀರು ಬಾಯಿಗೆ ಹಾಕಿ ಬ್ರಾಹ್ಮಣ ಸಂಪ್ರದಾಯದಂತೆ ಅಂತಿಮ ವಿಧಿ–ವಿಧಾನ ಪೂರೈಸಿದರು.

ಪೊಲೀಸ್ ಗೌರವ ಸಲ್ಲಿಕೆ: ಅಂತ್ಯಕ್ರಿಯೆಗೂ ಮುನ್ನ ಚಿತಾಗಾರದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ಜಿಲ್ಲಾಡಳಿತದಿಂದ ಗೌರವ ಸಲ್ಲಿಸಲಾಯಿತು. ಪೊಲೀಸರು ಮೂರು ಸುತ್ತು ಕುಶಾಲ ತೋಪು ಸಿಡಿಸಿ, ರಾಷ್ಟ್ರಗೀತೆ ನುಡಿಸಿ ಗೌರವ ವಂದನೆ ಸಲ್ಲಿಸಿದರು. ಈ ವೇಳೆ, ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಹಾಗೂ ಪುತ್ರ ಅಭಿಜಯಗೆ ಸಾಂತ್ವನ ಹೇಳಿದ ಮಧು ಬಂಗಾರಪ್ಪ, ಸರ್ಕಾರದಿಂದ ಕುಟುಂಬಕ್ಕೆ ಅಗತ್ಯ ನೆರವಿನ ಭರವಸೆ ನೀಡಿದರು.

ಮೆರವಣಿಗೆ ಹಾಗೂ ಅಂತ್ಯಕ್ರಿಯೆ ವೇಳೆ ಸಂಸದ ಬಿ.ವೈ. ರಾಘವೇಂದ್ರ, ಶಾಸಕರಾದ ಆರಗ ಜ್ಞಾನೇಂದ್ರ, ಶಾರದಾ ಪೂರ್ಯಾನಾಯ್ಕ, ಎಸ್.ಎನ್. ಚನ್ನಬಸಪ್ಪ, ಶೃಂಗೇರಿಯ ಟಿ.ಡಿ.ರಾಜೇಗೌಡ, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಬಲ್ಕೀಶ್ ಬಾನು, ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ, ಎಂ.ಪಿ. ರೇಣುಕಾಚಾರ್ಯ, ಪೂರ್ವ ವಲಯ ಐಜಿಪಿ ಬಿ.ಆರ್. ರವಿಕಾಂತೇಗೌಡ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಹಾಜರಿದ್ದರು.

ಪಟಾಕಿ ಸದ್ದು ಅಂದುಕೊಂಡೆವು: ಪಲ್ಲವಿ




‘ಪಹಲ್ಗಾಮ್‌ನಿಂದ ಮಧ್ಯಾಹ್ನ 12.30ಕ್ಕೆ ಕುದುರೆಗಳಲ್ಲಿ ಬೈಸರನ್ ಕಣಿವೆ ತಲುಪಿದ್ದೆವು. ಅಲ್ಲಿಗೆ ತೆರಳಿ ಐದು ನಿಮಿಷದಲ್ಲಿಯೇ ಪಟಾಕಿ ಹೊಡೆದಂತೆ ಸದ್ದಾಯಿತು. ಆರಂಭದಲ್ಲಿ ಅದು ಸೇನೆಯ ತರಬೇತಿ ಇರಬೇಕು ಎಂದೇ ಭಾವಿಸಿದ್ದೆ. 2ನೇ ಹಾಗೂ 3ನೇ ಬಾರಿಗೆ ಅದು ಗುಂಡಿನ ಸಪ್ಪಳ ಎಂಬುದು ಸ್ಪಷ್ಟವಾಯಿತು’ ಎಂದು ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಮಂಗಳವಾರ ನಡೆದ ದುರ್ಘಟನೆ ನೆನಪಿಸಿಕೊಂಡರು.

‘ಮಗನಿಗೆ ತಿನ್ನಲು ಸ್ನ್ಯಾಕ್ಸ್ ತರಲು ಹೋಗಿದ್ದ ಪತಿ ಟೆಂಟ್ ಹತ್ತಿರ ಹೋಗುತ್ತಿದ್ದಂತೆಯೇ ಅವರ ತಲೆಗೆ ಗುಂಡು ಬಿತ್ತು. ಅವರು ಒಂದು ನಿಮಿಷವೂ ಬದುಕಿರಲಿಲ್ಲ. ಉಸಿರು ನಿಂತು ಹೋಗಿತ್ತು’ ಎಂದು ಶಿವಮೊಗ್ಗದ ತಮ್ಮ ನಿವಾಸದಲ್ಲಿ ಪಲ್ಲವಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

‘ನನ್ನ ಗಂಡನ ಸಾಯಿಸಿದ್ದೀರಿ, ನಮ್ಮನ್ನು ಕೊಂದುಬಿಡಿ ಎಂದು ಪುತ್ರ ಹಾಗೂ ನಾನು ಕಿರುಚಿದೆವು. ಮುಂದೆ ಹೋಗುತ್ತಿದ್ದ ಉಗ್ರ ಹಿಂದಕ್ಕೆ ತಿರುಗಿ, ಮೋದಿ ಕೊ ಬತಾವೊ (ಇದನ್ನು ಮೋದಿಗೆ ಹೇಳು) ಅನ್ನುತ್ತಾ ಸಾಗಿದ. ಅವರು ಅಲ್ಲಿದ್ದ ಹೆಣ್ಣು ಮಕ್ಕಳು ಮತ್ತು ಚಿಕ್ಕಮಕ್ಕಳಿಗೆ ಏನನ್ನೂ ಮಾಡಲಿಲ್ಲ. ಬರೀ ಗಂಡಸರನ್ನು ಕೊಂದರು. ಅದು ಕಠಿಣವಾದ ಹಾದಿ. ತಕ್ಷಣ ಯಾರೂ ಬರಲು ಸಾಧ್ಯವಿಲ್ಲ. ಹೀಗಾಗಿ ಒಂದು ಗಂಟೆಯ ನಂತರ ರಕ್ಷಣಾ ಪಡೆಯವರು ಅಲ್ಲಿಗೆ ಬಂದರು’ ಎಂದು ವಿವರಿಸಿದರು.

ಪ್ರತೀಕಾರ ಕ್ರಮ ಆರಂಭ: ಜೋಶಿ



ಶಿವಮೊಗ್ಗ: ‘ಕಾಶ್ಮೀರದಲ್ಲಿ ನಡೆದಿರುವ ಉಗ್ರರ ದಾಳಿಯ ನಂತರ ಪಾಕಿಸ್ತಾನದ ವಿರುದ್ಧ ಕೇಂದ್ರ ಸರ್ಕಾರ ರಾಜತಾಂತ್ರಿಕ ಪ್ರತೀಕಾರ ಕ್ರಮಗಳನ್ನು ಕೈಗೊಂಡಿದ್ದು, ಜಾಗತಿಕವಾಗಿ ಆ ರಾಷ್ಟ್ರವನ್ನು ಏಕಾಂಗಿಯಾಗಿಸುವಲ್ಲಿ ಮೊದಲ ಹೆಜ್ಜೆ ಇಟ್ಟಿದೆ’ ಎಂದು ಕೇಂದ್ರದ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಮಂಜುನಾಥ ರಾವ್ ಅವರ ಪಾರ್ಥಿವ ಶರೀರದ ದರ್ಶನದ ನಂತರ ನುಡಿನಮನ ಸಲ್ಲಿಸಿದ ಅವರು, ಕಾಶ್ಮೀರದಲ್ಲಿ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ಸೇರಿದಂತೆ ಕೇಂದ್ರ ಕೈಗೊಂಡಿರುವ ಸುಧಾರಣಾ ಕ್ರಮಗಳನ್ನು ಸಹಿಸದೇ ಅದಕ್ಕೆ ಕೊಳ್ಳಿ ಇಡಲು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಪ್ರತೀಕಾರ ಕ್ರಮ ಆರಂಭಿಸಿದ್ದೇವೆ. ಭಯೋತ್ಪಾದಕರು ಹಾಗೂ ಅದನ್ನು ಬೆಂಬಲಿಸುವವರಿಗೆ ತಕ್ಕ ಶಾಸ್ತಿ ಮಾಡದೇ ಭಾರತ ಸರ್ಕಾರ ವಿರಮಿಸುವುದಿಲ್ಲ’ ಎಂದರು.

ಸಚಿವ ರಾಜನಾಥ ಸಿಂಗ್ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ: ಉಗ್ರರ ಶಿಬಿರ ನಾಶಕ್ಕೆ ಒತ್ತಾಯ

ಗುಪ್ತಚರ ವೈಫಲ್ಯ: ವಿಪಕ್ಷಗಳ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಭಯೋತ್ಪಾದಕ ಶಿಬಿರಗಳನ್ನು ನಾಶ ಮಾಡಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ಪಕ್ಷಗಳ ಮುಖಂಡರು ಕೇಂದ್ರ ಸರ್ಕಾರವನ್ನು ಒಕ್ಕೊರಲಿನಿಂದ ಆಗ್ರಹಿಸಿದರು. 26 ಪ್ರವಾಸಿಗರ ಸಾವಿಗೆ ಕೇಂದ್ರ ಗೃಹ ಸಚಿವಾಲಯದ ಭದ್ರತಾ ಹಾಗೂ ಗುಪ್ತಚರ ವೈಫಲ್ಯವೇ ಪ್ರಮುಖ ಕಾರಣ ಎಂದು ಬೊಟ್ಟು ಮಾಡಿದರು.

ರಕ್ಷಣಾ ಸಚಿವ ರಾಜನಾಥ ಸಿಂಗ್ ಅಧ್ಯಕ್ಷತೆಯಲ್ಲಿ ಸಂಸತ್ ಭವನದಲ್ಲಿ ಗುರುವಾರ ಸಂಜೆ ನಡೆದ ಸರ್ವಪಕ್ಷ ಸಭೆಯಲ್ಲಿ ಮಾತನಾಡಿದ ಎಲ್ಲ ಪಕ್ಷಗಳ ನಾಯಕರು, ಭಯೋತ್ಪಾದನಾ ಚಟುವಟಿಕೆಗಳ ನಿಗ್ರಹಕ್ಕೆ ಸರ್ಕಾರದ ಜತೆಗೆ ನಿಲ್ಲುವುದಾಗಿ ವಾಗ್ದಾನ ಮಾಡಿದರು. ಭಯೋತ್ಪಾದಕ ದಾಳಿಯ ಕುರಿತು ವಿವಿಧ ರಾಜಕೀಯ ಪಕ್ಷಗಳ ನಾಯಕರಿಗೆ ಸರ್ಕಾರ ಮಾಹಿತಿ ನೀಡಿತು ಮತ್ತು ಅವರ ಅಭಿಪ್ರಾಯಗಳನ್ನು ಕೇಳಿತು.

ಭಯೋತ್ಪಾದನಾ ದಾಳಿಯ ನಂತರ ಪಾಕಿಸ್ತಾನವನ್ನು ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ಪ್ರಕಟಿಸಿದ ಒಂದು ದಿನದ ನಂತರ ಸರ್ವಪಕ್ಷ ಸಭೆ ನಡೆದಿದೆ.



ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ನವದೆಹಲಿಯಲ್ಲಿ ಗುರುವಾರ ಆಯೋಜಿಸಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಜೆ.ಪಿ.ನಡ್ಡಾ, ಅಮಿತ್ ಶಾ, ರಾಜನಾಥ್ ಸಿಂಗ್, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ವಿಪಕ್ಷ ರಾಹುಲ್ ಗಾಂಧಿ ಮತ್ತಿತರರು ಪಾಲ್ಗೊಂಡಿದ್ದರು — ಪಿಟಿಐ ಚಿತ್ರ

> **ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಎಲ್ಲ ಪಕ್ಷಗಳು ಸರ್ಕಾರದ ಜತೆಗೆ ಇವೆ. ಲೋಪದ ಕುರಿತು ಗೃಹ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಭವಿಷ್ಯದಲ್ಲಿ ಇಂತಹ ಲೋಪ ಆಗದಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ**
> **ಕಿರಣ್ ರಿಜಿಜು,** ಸಂಸದೀಯ ವ್ಯವಹಾರಗಳ ಸಚಿವ

> **ಉಗ್ರರ ನಿಗ್ರಹಕ್ಕೆ ಯಾವುದೇ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದ್ದೇವೆ**
> **ರಾಹುಲ್ ಗಾಂಧಿ,** ಲೋಕಸಭೆಯ ವಿಪಕ್ಷ ನಾಯಕ

> **ಶಾಂತಿ ಸ್ಥಾಪನೆಗೆ ಕೇಂದ್ರ ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕೆ ವಿಪಕ್ಷಗಳು ಸಹಕಾರ ನೀಡಲಿವೆ**
> **ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಸಭೆಗೆ ಜೆಡಿಯು ಗೈರು

ಸರ್ವಪಕ್ಷ ಸಭೆಗೆ ಬಿಜೆಪಿ ಮಿತ್ರಪಕ್ಷ ಜೆಡಿಯು ಹಾಜರಾಗಲಿಲ್ಲ. ಬಿಹಾರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಪಕ್ಷದ ಎಲ್ಲ ಉನ್ನತ ನಾಯಕರು ಭಾಗವಹಿಸುತ್ತಿರುವುದರಿಂದ ಸರ್ವಪಕ್ಷ ಸಭೆಯಲ್ಲಿ ಬರುತ್ತಿಲ್ಲ ಎಂದು ಜೆಡಿಯು ಸ್ಪಷ್ಟಪಡಿಸಿತು.

ಐದಕ್ಕಿಂತ ಕಡಿಮೆ ಸಂಸದರನ್ನು ಹೊಂದಿರುವ ಪಕ್ಷಗಳನ್ನು ಸರ್ವಪಕ್ಷ ಸಭೆಗೆ ಆಹ್ವಾನಿಸುವುದಿಲ್ಲ ಎಂದು ಸರ್ಕಾರ ನಿಲುವು ತಳೆಯಿತು. ಇದಕ್ಕೆ ಓವೈಸಿ ಆಕ್ಷೇಪ ವ್ಯಕ್ತಪಡಿಸಿದರು. ಬಳಿಕ ಅವರಿಗೆ ಸರ್ಕಾರ ಆಹ್ವಾನ ನೀಡಿತು. ಮೋದಿ ಅವರು ಸಭೆಗೆ ಹಾಜರಾಗದಿರುವುದಕ್ಕೆ ವಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು. ಸಂಸತ್‌ನ ನಾಯಕರನ್ನು ಮಾತ್ರ ಸಭೆಗೆ ಆಹ್ವಾನಿಸಿದ್ದು ಏಕೆ ಎಂದು ಟಿಎಂಸಿ ಪ್ರಶ್ನಿಸಿತು. ಇಬ್ಬರು ಲೋಕಸಭಾ ಸಂಸದರನ್ನು ಹೊಂದಿರುವ ಸಿಪಿಐ (ಎಂಎಲ್) ಸಹ ಸಭೆಗೆ ಆಹ್ವಾನಿಸದಿದ್ದಕ್ಕೆ ಪ್ರತಿಭಟಿಸಿತು.

ಭಾರತ–ಪಾಕ್ ಸೈನಿಕರ ಕವಾಯತು ರದ್ದು

ನವದೆಹಲಿ (ಪಿಟಿಐ): ‘ಪಹಲ್ಗಾಮ್ ದಾಳಿಯ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ಕೈಗೊಂಡ ಕ್ರಮಗಳಿಗೆ ಅನುಸಾರವಾಗಿ ಭಾರತ–ಪಾಕ್ ಗಡಿಯಲ್ಲಿ ಎರಡು ದೇಶಗಳ ಸೈನಿಕರು ದಿನದ ಅಂತ್ಯದಲ್ಲಿ ನಡೆಸುತ್ತಿದ್ದ ಕವಾಯತು ಕಾರ್ಯಕ್ರಮವನ್ನು ನಿಲ್ಲಿಸಲಾಗುತ್ತಿದೆ’ ಎಂದು ಬಿಎಸ್‌ಎಫ್ ಗುರುವಾರ ಹೇಳಿದೆ.

ಪಂಜಾಬ್‌ನ ಭಾರತ–ಪಾಕ್‌ನ ಅಟ್ಟಾರಿ, ಹುಸೈನಿವಾಲಾ ಹಾಗೂ ಸದಗಿ ಗಡಿ ಪ್ರದೇಶದಲ್ಲಿ ಪ್ರತಿದಿನವೂ ಭಾರತದ ಬಿಎಸ್‌ಎಫ್ ಹಾಗೂ ಪಾಕಿಸ್ತಾನದ ರೇಂಜರ್ಸ್‌ನವರು ಕವಾಯತು ನಡೆಸುತ್ತಿದ್ದರು. ಧ್ವಜ ಇಳಿಸುವ ಕಾರ್ಯಕ್ರಮವೂ ಪ್ರತಿನಿತ್ಯ ನಡೆಯುತ್ತಿತ್ತು. ಈ ಕಾರ್ಯಕ್ರಮವನ್ನು ನೋಡಲು ದೇಶ ವಿದೇಶಗಳ ನೂರಾರು ಪ್ರವಾಸಿಗರು ಸೇರುತ್ತಿದ್ದರು.

‘ಬಹಳ ಯೋಚಿಸಿ ತೆಗೆದುಕೊಂಡ ನಿರ್ಧಾರ ಇದಾಗಿದೆ. ಭಾರತ–ಪಾಕಿಸ್ತಾನದ ಗಾರ್ಡ್ ಕಮಾಂಡರ್‌ಗಳ ಮಾಡುತ್ತಿದ್ದ ಹಸ್ತಲಾಘವ ಸಂಪ್ರದಾಯವನ್ನೂ ನಿಲ್ಲಿಸಲಾಗುತ್ತಿದೆ. ಈ ಗಡಿಗಳಲ್ಲಿ ಭಾರತದ ಸೈನಿಕರು ನಡೆಯುತ್ತಿರುವ ಇತರೆ ಕಾರ್ಯಕ್ರಮಗಳು ಮುಂದುವರಿಯಲಿವೆ’ ಎಂದು ಬಿಎಸ್‌ಎಫ್ ಹೇಳಿದೆ.

‘ಧ್ವಜ ಇಳಿಸುವ ಕಾರ್ಯಕ್ರಮ ಮುಂದುವರಿಯಲಿದೆ. ಇದಕ್ಕೆ ಸಾರ್ವಜನಿಕರು ಸಾಕ್ಷಿಯಾಗಬಹುದು’ ಎಂದಿದೆ.



ಬಿಎಸ್‌ಎಫ್ ಮತ್ತು ಪಾಕಿಸ್ತಾನದ ರೇಂಜರ್ಸ್ ನಡೆಸುವ ಕವಾಯತು ಕಾರ್ಯಕ್ರಮದ ದೃಶ್ಯ – ಪಿಟಿಐ ಸಂಗ್ರಹ ಚಿತ್ರ

‘ಬಿಜೆಪಿಯಿಂದ ಧ್ರುವೀಕರಣ ರಾಜಕೀಯ’

ನವದೆಹಲಿ: ‘ಹೇಡಿತನದಿಂದ ಕೂಡಿರುವ ಪಹಲ್ಗಾಮ್ ದಾಳಿಯ ಸೂತ್ರಧಾರಿಯೇ ಪಾಕಿಸ್ತಾನ. ಇದು ನಮ್ಮ ಗಣತಂತ್ರ ಮೌಲ್ಯಗಳ ಮೇಲಿನ ನೇರ ದಾಳಿ’ ಎಂದು ಕಾಂಗ್ರೆಸ್ ದೂರಿದೆ. ‘ದೇಶದಲ್ಲಿ ಒಗ್ಗಟ್ಟು ಅಗತ್ಯವಿರುವ ಇಂತಹ ಸನ್ನಿವೇಶದಲ್ಲಿ ಬಿಜೆಪಿ ಈ ದುರಂತವನ್ನು ಧ್ರುವೀಕರಣ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ’ ಎಂದು ಕಿಡಿಕಾರಿದೆ.

ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಭಯೋತ್ಪಾದಕರ ದಾಳಿಯನ್ನು ಖಂಡಿಸಿ ನಿರ್ಣಯ ತೆಗೆದುಕೊಂಡಿದೆ.



ಗುರುವಾರ ಇಲ್ಲಿ ನಡೆದ ವಿಶೇಷ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಕ್ಷದ ನಾಯಕಿ ಸೋನಿಯಾ ಗಾಂಧಿ ಹಾಗೂ ಹಿರಿಯ ನಾಯಕರು ಭಾಗಿಯಾಗಿದ್ದರು.

‘ಉಗ್ರರ ದಾಳಿಯಿಂದ ಮೃತಪಟ್ಟ 26 ಪ್ರವಾಸಿಗರಿಗೆ ಗೌರವ ಸಲ್ಲಿಸಲು ಮತ್ತು ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ಪ್ರತಿಭಟಿಸಲು ಏಪ್ರಿಲ್ 25 ರಂದು ಪಕ್ಷವು ದೇಶದಾದ್ಯಂತ ಮೊಂಬತ್ತಿ ಹಿಡಿದು ಮೆರವಣಿಗೆಗಳನ್ನು ನಡೆಸಲಿದೆ’ ಎಂದು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು.

‘ಪಹಲ್ಗಾಮ್‌ನಲ್ಲಿ ಮೂರು ಹಂತದ ಭದ್ರತಾ ವ್ಯವಸ್ಥೆ ಇದ್ದರೂ ಇಂತಹ ದಾಳಿಗೆ ಗುಪ್ತಚರ ವೈಫಲ್ಯ ಮತ್ತು ಭದ್ರತಾ ಲೋಪವೇ ಪ್ರಮುಖ ಕಾರಣ. ಈ ಬಗ್ಗೆ ಸಮಗ್ರ ವಿಶ್ಲೇಷಣೆ ನಡೆಸಬೇಕು’ ಎಂದು ಅವರು ಒತ್ತಾಯಿಸಿದರು.

ಅಮರನಾಥ ಯಾತ್ರೆ ಶೀಘ್ರದಲ್ಲೇ ಆರಂಭವಾಗಲಿದ್ದು, ಯಾತ್ರಿಕರ ಸುರಕ್ಷತೆಯನ್ನು ರಾಷ್ಟ್ರೀಯ ಆದ್ಯತೆಯಾಗಿ ಪರಿಗಣಿಸಬೇಕು ಎಂದು ಸಭೆಯು ನಿರ್ಣಯ ಅಂಗೀಕರಿಸಿದೆ.

ಉಗ್ರರ ದಂಡನೆ: ಮೋದಿ ಶಪಥ

ಒಂದನೇ ಪುಟದಿಂದ...

‘ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದವರು ಹಾಗೂ ಈ ದಾಳಿಗೆ ಸಂಚು ರೂಪಿಸಿದವರನ್ನು ಶಿಕ್ಷಿಸದೇ ಬಿಡುವುದಿಲ್ಲ’ ಎಂದು ಪಾಕಿಸ್ತಾನದ ಹೆಸರು ಹೇಳದೇ ಮೋದಿ ವಾಗ್ದಾಳಿ ನಡೆಸಿದರು.

‘ಇಂತಹ ಸಂಕಷ್ಟದ ಸಮಯದಲ್ಲಿ ನಮ್ಮೊಂದಿಗೆ ನಿಂತಿರುವ ವಿವಿಧ ದೇಶಗಳು ಹಾಗೂ ಅವುಗಳ ನಾಯಕರಿಗೆ ಧನ್ಯವಾದ ಅರ್ಪಿಸುವೆ’ ಎಂದೂ ಹೇಳಿದರು.

ಉಗ್ರರ ಗುಂಡಿಗೆ ಬಲಿಯಾದವರ ಗೌರವಾರ್ಥ, ಕಾರ್ಯಕ್ರಮಕ್ಕೂ ಮುನ್ನ ವೇದಿಕೆ ಮೇಲಿದ್ದವರು ಹಾಗೂ ಸಭಿಕರು ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

> **ಪಾಕಿಸ್ತಾನದ ಸಾರ್ವಭೌಮತ್ವ, ಅದರ ಜನರ ಭದ್ರತೆಗೆ ಯಾವುದೇ ಬೆದರಿಕೆ ಎದುರಾದರೆ, ಅದಕ್ಕೆ ಪ್ರತೀಕಾರ ತೀರಿಸಲು ಸಿದ್ಧರಿದ್ದೇವೆ. ಪಹಲ್ಗಾಮ್‌ನಂತಹ ಘಟನೆಗಳನ್ನು ಮುಂದಿಟ್ಟುಕೊಂಡು ಭಾರತವು ಸಂಕುಚಿತ ರಾಜಕೀಯ ಕಾರ್ಯಸೂಚಿಯನ್ನು ಮುಂದುವರಿಸುವುದನ್ನು ನಿಲ್ಲಿಸಬೇಕು**
> ಪಾಕಿಸ್ತಾನ

ಪಾಕ್ ಪ್ರತೀಕಾರದ ಕ್ರಮ

ಒಂದನೇ ಪುಟದಿಂದ...

1960ರಲ್ಲಿ ಮಾಡಿಕೊಂಡ ಸಿಂಧೂ ಜಲ ಒಪ್ಪಂದವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತಿನಲ್ಲಿ ಇರಿಸುವುದು ಸೇರಿದಂತೆ ಪಾಕ್ ಜತೆಗಿನ ಸಂಬಂಧವನ್ನು ಕಡಿತಗೊಳಿಸುವ ನಿರ್ಧಾರವನ್ನು ಭಾರತವು ಬುಧವಾರ ಘೋಷಿಸಿತ್ತು.

‘ಸಿಂಧೂ ಜಲ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ಲಭಿಸಬೇಕಾದ ನೀರಿನ ಹರಿವನ್ನು ನಿಲ್ಲಿಸುವ ಅಥವಾ ತಿರುಗಿಸುವ ಪ್ರಯತ್ನವನ್ನು ಯುದ್ಧಕ್ಕೆ ಸಮನಾದ ಕೃತ್ಯವೆಂದು ಪರಿಗಣಿಸಲಾಗುವುದು. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ಏಕಪಕ್ಷೀಯ ನಿರ್ಧಾರವನ್ನು ತಿರಸ್ಕರಿಸುತ್ತೇವೆ. ಯಾವುದೇ ಬೆಲೆ ತೆತ್ತಾದರೂ ತನ್ನ ನೀರಿನ ಹಕ್ಕುಗಳನ್ನು ರಕ್ಷಿಸಲು ಪಾಕಿಸ್ತಾನ ಬದ್ಧವಾಗಿದೆ’ ಎಂದು ಸಭೆಯ ಬಳಿಕ ಹೊರಡಿಸಿದ ಹೇಳಿಕೆ ತಿಳಿಸಿದೆ.

ಭಾರತ ಸರ್ಕಾರದ ಒಡೆತನದ ಅಥವಾ ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ಸೇರಿದ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶದಲ್ಲಿ ಹಾರಾಟ ನಡೆಸುವುದಕ್ಕೆ ನಿರ್ಬಂಧ ಹೇರಲಾಗಿದೆ.

ವೀಸಾ ರದ್ದು; ಸಿಖ್ಖರಿಗೆ ವಿನಾಯಿತಿ

- ಭಾರತದ ಪ್ರಜೆಗಳಿಗೆ ಸಾರ್ಕ್ ವೀಸಾ ವಿನಾಯಿತಿ ಯೋಜನೆಯ ಅಡಿಯಲ್ಲಿ (ಎಸ್‌ವಿಇಎಸ್) ನೀಡಿರುವ ವೀಸಾ ರದ್ದು
- ಎಸ್‌ವಿಇಎಸ್ ಅಡಿಯಲ್ಲಿ ಪಾಕ್‌ನಲ್ಲಿರುವ ಭಾರತೀಯ ಪ್ರಜೆಗಳು 48 ಗಂಟೆಗಳ ಒಳಗಾಗಿ ದೇಶ ತೊರೆಯಲು ಸೂಚನೆ. ಆದರೆ, ಸಿಖ್ ಯಾತ್ರಿಕರಿಗೆ ವಿನಾಯಿತಿ
- ಪಾಕಿಸ್ತಾನದಲ್ಲಿರುವ ಭಾರತದ ದೂತಾವಾಸ ಕಚೇರಿಗಳಲ್ಲಿನ ಮಿಲಿಟರಿ ರಾಜತಾಂತ್ರಿಕರಿಗೆ ಏ.30ರ ಒಳಗಾಗಿ ದೇಶ ಬಿಡಲು ಸೂಚನೆ
- ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನ್ ಕಚೇರಿಯ ರಾಜತಾಂತ್ರಿಕರು ಮತ್ತು ಸಿಬ್ಬಂದಿಯ ಸಂಖ್ಯೆ 30ಕ್ಕೆ ಕಡಿತಗೊಳಿಸಲು ನಿರ್ಧಾರ
- ಪಾಕಿಸ್ತಾನದ ಮೂಲಕ ಯಾವುದೇ ಮೂರನೇ ದೇಶಕ್ಕೆ ಮತ್ತು ಅಲ್ಲಿಂದ ಭಾರತಕ್ಕೆ ಮಾಡುವ ಎಲ್ಲಾ ವ್ಯಾಪಾರಗಳು ತಕ್ಷಣದಿಂದಲೇ ಸ್ಥಗಿತ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕಲಿತದ್ದು ಮುಗಿಯಿತು ಎಂಬ ಅಹಂಭಾವ ಬಿಟ್ಟು ಸದಾ ಕಲಿಯುತ್ತಿರಬೇಕು.

-ಅ.ನ.ಕೃ.

ಸಾಂಕ್ರಾಮಿಕಗಳ ವಿರುದ್ಧದ ಹೋರಾಟ ಮಹತ್ವದ ಹೆಜ್ಜೆ ಇರಿಸಿದ ಮನುಕುಲ

ಸಾಂಕ್ರಾಮಿಕ ರೋಗ ನಿರ್ವಹಣೆಯ ಸಂಬಂಧದ ಕರಡು ಒಪ್ಪಂದಕ್ಕೆ ಹಲವು ದೇಶಗಳು ಸಹಮತವನ್ನು ಸೂಚಿಸಿರುವುದು ಸಾಂಕ್ರಾಮಿಕಗಳ ವಿರುದ್ಧ ಮನುಕುಲ ನಡೆಸಿರುವ ಹೋರಾಟದಲ್ಲಿ ಒಂದು ಐತಿಹಾಸಿಕ ನಡೆ. ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಾರ್ಗದರ್ಶನದಲ್ಲಿ ಈ ಸಹಮತ ಮೂಡಿದೆ. ಸುಮಾರು ನಾಲ್ಕು ವರ್ಷಗಳ ಮಾತುಕತೆಯ ನಂತರ ಈ ಕರಡು ಒಪ್ಪಂದಕ್ಕೆ ಜಿನೀವಾದಲ್ಲಿ ಕಳೆದ ವಾರ ಅಂತಿಮ ರೂಪ ಸಿಕ್ಕಿದೆ. ಈ ಕರಡನ್ನು ವಿಶ್ವ ಆರೋಗ್ಯ ಸಮಾವೇಶವು ಅಂಗೀಕರಿಸಲು ಸಜ್ಜಾಗಿದೆ. ಸಾಂಕ್ರಾಮಿಕಗಳನ್ನು ತಡೆಯಲು, ಅವುಗಳನ್ನು ನಿಭಾಯಿಸುವ ಸಲುವಾಗಿ ಸಿದ್ಧತೆಗಳನ್ನು ನಡೆಸಲು ಮತ್ತು ಅವು ಧುತ್ತೆಂದು ಎದುರಾದಾಗ ಪರಿಸ್ಥಿತಿ ಎದುರಿಸಲು ಹಲವು ಕ್ರಮಗಳನ್ನು ಈ ಒಪ್ಪಂದವು ಒಳಗೊಂಡಿದೆ. ಈ ಕರಡು ಒಪ್ಪಂದಕ್ಕೆ ಸಹಮತ ಮೂಡಿರುವುದು ಜಾಗತಿಕ ಆರೋಗ್ಯದ ಇತಿಹಾಸದಲ್ಲಿ ಒಂದು ನಿರ್ಣಾಯಕ ಕಾಲಘಟ್ಟ ಎಂದು ಬಣ್ಣಿಸಲಾಗಿದೆ. ಡಬ್ಲ್ಯುಎಚ್‌ಒ ಸದಸ್ಯ ರಾಷ್ಟ್ರಗಳೆಲ್ಲ ಈ ಒಪ್ಪಂದಕ್ಕೆ ಸಹಿ ಮಾಡುವ ನಿರೀಕ್ಷೆ ಇದೆ. ಆದರೆ ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನವೇ ಡಬ್ಲ್ಯುಎಚ್‌ಒದಿಂದ ಹೊರನಡೆದಿರುವ ಅಮೆರಿಕವು ಒಪ್ಪಂದಕ್ಕೆ ಸಹಿ ಹಾಕಲಿಕ್ಕಿಲ್ಲ. ಅಮೆರಿಕವು ಡಬ್ಲ್ಯುಎಚ್‌ಒದಿಂದ ಹೊರನಡೆದಿರುವ ಪರಿಣಾಮವಾಗಿ ಒಪ್ಪಂದದ ಬಲ ಕುಗ್ಗಲಿದೆ. ಆದರೆ, ಕೋವಿಡ್–19 ಸಾಂಕ್ರಾಮಿಕ ಸೃಷ್ಟಿಸಿದ ಯಾತನೆಯನ್ನು ಕಂಡಿರುವ ವಿಶ್ವದ ಇತರ ದೇಶಗಳು ಇದಕ್ಕೆ ಹೆಚ್ಚಿನ ಮಹತ್ವ ನೀಡಿವೆ.



ಕೋವಿಡ್ ಸಂದರ್ಭದಲ್ಲಿ ಸೃಷ್ಟಿಯಾದಂತಹ ಪರಿಸ್ಥಿತಿಯನ್ನು ತಡೆಯುವಲ್ಲಿ ಈ ಒಪ್ಪಂದವು ಜಗತ್ತಿಗೆ ನೆರವಾಗುತ್ತದೆ ಎಂಬ ಆಶಾಭಾವ ಇದೆ

ಸಾಂಕ್ರಾಮಿಕ ಎದುರಾದಾಗ ಅದಕ್ಕೆ ತಕ್ಕ ಸ್ಪಂದನ ಇರಬೇಕು, ಅದಕ್ಕೆ ಒಂದು ಒಪ್ಪಂದದ ಅಗತ್ಯ ಇದೆ ಎಂಬುದು ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಅರಿವಾಯಿತು. ಒಪ್ಪಂದಕ್ಕಾಗಿ ಆಗಿನಿಂದಲೇ ಕೆಲವು ಕ್ರಮಗಳನ್ನು ಕೈಗೊಳ್ಳಲಾಯಿತು. ವಿವಿಧ ದೇಶಗಳ ಸರ್ಕಾರಗಳ ಜೊತೆ ಮಾತುಕತೆ ನಡೆಸಲು ಸಮಿತಿಯೊಂದನ್ನು 2021ರ ಡಿಸೆಂಬರ್‌ನಲ್ಲಿ ರಚಿಸಲಾಯಿತು. ಕರಡು ಒಪ್ಪಂದದ ಹಲವು ಅಂಶಗಳ ಬಗ್ಗೆ ಗಂಭೀರ ಸ್ವರೂಪದ ಭಿನ್ನಾಭಿಪ್ರಾಯ- ಗಳು ಇದ್ದವು. ಅದರಲ್ಲೂ ಮುಖ್ಯವಾಗಿ, ವೈಜ್ಞಾನಿಕ ಮಾಹಿತಿ ಹಂಚಿಕೊಳ್ಳುವುದು, ಸಾಂಕ್ರಾಮಿಕವನ್ನು ತಡೆಯುವ ವೈದ್ಯಕೀಯ ಔಷಧಗಳ ಸಮಾನ ಹಂಚಿಕೆಯ ವಿಚಾರವಾಗಿ ಭಿನ್ನಾಭಿಪ್ರಾಯಗಳು ಇದ್ದವು. ವೈಜ್ಞಾನಿಕ ದತ್ತಾಂಶವು ತಕ್ಷಣಕ್ಕೆ ಲಭ್ಯವಾಗುವಂತೆ ಇರಬೇಕು ಎಂದು ಮುಂದುವರಿದ ದೇಶಗಳು ಬಯಸಿದರೆ, ಅಭಿವೃದ್ಧಿಶೀಲ ದೇಶಗಳು ವೈಜ್ಞಾನಿಕ ಮಾಹಿತಿ ಹಂಚಿಕೆ ಮತ್ತು ಲಸಿಕೆ ಹಾಗೂ ಔಷಧಗಳ ಪೂರೈಕೆಯ ನಡುವೆ ಸಂಬಂಧ ಇರಬೇಕು ಎಂದು ಬಯಸಿದವು. ಏಕೆಂದರೆ, ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಕಡಿಮೆ ಹಾಗೂ ಮಧ್ಯಮ ಪ್ರಮಾಣದ ವರಮಾನದ ದೇಶಗಳು ಲಸಿಕೆ ಮತ್ತು ಔಷಧಗಳ ಪೂರೈಕೆಯ ವಿಚಾರದಲ್ಲಿ ತಾರತಮ್ಯ ಎದುರಿಸಿದ್ದವು. ಈ ಅನುಭವದ ಕಾರಣದಿಂದಾಗಿ ಈ ದೇಶಗಳು ಇಂಥದ್ದೊಂದು ಬೇಡಿಕೆ ಇರಿಸಿದವು. ಆದರೆ ಮಾತುಕತೆಯ ಸಂದರ್ಭದಲ್ಲಿ ಎರಡೂ ಗುಂಪಿನ ದೇಶಗಳು ಒಂದಿಷ್ಟು ಹೊಂದಾಣಿಕೆಗಳನ್ನು ಮಾಡಿಕೊಂಡಿವೆ. ಎರಡೂ ಕಡೆಯ ದೇಶಗಳ ಅಗತ್ಯ ಮತ್ತು ಕಳವಳಗಳಿಗೆ ಒಪ್ಪಂದವು ಸ್ಪಂದಿಸುವ ಕೆಲಸ ಮಾಡಿದೆ.

ಆರೋಗ್ಯಸೇವಾ ಕಾರ್ಯಕರ್ತರಿಗೆ ಹೆಚ್ಚಿನ ಸುರಕ್ಷತೆ ಒದಗಿಸಲು ಒಪ್ಪಂದದಲ್ಲಿ ಅವಕಾಶ ಇದೆ. ಔಷಧ ತಯಾರಿಕಾ ಕಂಪನಿಗಳಿಗೆ ವೈಜ್ಞಾನಿಕ ಮಾಹಿತಿ ಪಡೆದುಕೊಳ್ಳುವುದಕ್ಕೆ ಒಪ್ಪಂದವು ವ್ಯವಸ್ಥೆಯೊಂದನ್ನು ರೂಪಿಸುತ್ತದೆ, ಇದಕ್ಕೆ ಪ್ರತಿಯಾಗಿ ಕಂಪನಿಗಳು ಹೆಚ್ಚು ಸಮಾನ ನೆಲೆಯಲ್ಲಿ ಔಷಧಗಳನ್ನು, ಲಸಿಕೆಗಳನ್ನು ಮತ್ತು ರೋಗಪತ್ತೆ ವಿಧಾನಗಳನ್ನು ಹಂಚಿಕೊಳ್ಳಬೇಕು. ಆದರೆ ಈ ವ್ಯವಸ್ಥೆಯು ಹೇಗೆ ಕೆಲಸ ಮಾಡಲಿದೆ ಎಂಬುದನ್ನು ಇನ್ನಷ್ಟೇ ತೀರ್ಮಾನಿಸಬೇಕಿದೆ. ಮಾಹಿತಿಯನ್ನು ಹಂಚಿಕೊಳ್ಳುವ ಕೆಲಸವು ತ್ವರಿತವಾಗಿ ಆಗಬೇಕು, ಸಕಾಲದಲ್ಲಿ ಆಗಬೇಕು ಎಂದು ಅದು ಹೇಳುತ್ತದೆ. ಸಾಂಕ್ರಾಮಿಕದ ಸಂದರ್ಭದಲ್ಲಿ ಔಷಧ ತಯಾರಿಕಾ ಕಂಪನಿಗಳು ಲಸಿಕೆ, ಔಷಧ ಮತ್ತು ರೋಗಪತ್ತೆ ಪರಿಕರಗಳ ಪೈಕಿ ಶೇಕಡ 20ರಷ್ಟನ್ನು ಡಬ್ಲ್ಯುಎಚ್‌ಒಗೆ ಲಭ್ಯವಾಗುವಂತೆ ಮಾಡಬೇಕು ಎಂದು ಕರಡು ಒಪ್ಪಂದವು ಹೇಳುತ್ತದೆ. ಆರೋಗ್ಯವನ್ನು ಕಾಪಾಡುವುದರ ಬಗ್ಗೆ ಈ ಒಪ್ಪಂದವು ಸಮಗ್ರವಾದ ನೋಟವೊಂದನ್ನು ಹೊಂದಿದೆ, ರೋಗಕಾರಕಗಳು ಪ್ರಾಣಿಗಳಿಂದ ಮನುಷ್ಯರಿಗೆ ಹರಡುವುದರ ಅಪಾಯವನ್ನು ತಗ್ಗಿಸಲು ದೇಶಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ. ರಾಷ್ಟ್ರಗಳ ಮಟ್ಟದಲ್ಲಿ ಆರೋಗ್ಯ ಸೇವಾ ವ್ಯವಸ್ಥೆ ಬಲಪಡಿಸಬೇಕು ಎಂದು ಕೂಡ ಒಪ್ಪಂದವು ಹೇಳಿದೆ. ಜಾಗತಿಕ ಮಟ್ಟದಲ್ಲಿ ಸಮನ್ವಯದ ಹಣಕಾಸು ವ್ಯವಸ್ಥೆ, ಪೂರೈಕೆ ವ್ಯವಸ್ಥೆ ಮತ್ತು ಸಾಗಣೆ ವ್ಯವಸ್ಥೆ ಸಾಧ್ಯವಾಗಬೇಕು ಎಂದು ಹೇಳುತ್ತದೆ. ಕೋವಿಡ್‌ನ ಸಂದರ್ಭದಲ್ಲಿ ಸೃಷ್ಟಿಯಾದಂತಹ ಪರಿಸ್ಥಿತಿಯನ್ನು ತಡೆಯುವಲ್ಲಿ ಈ ಒಪ್ಪಂದವು ಜಗತ್ತಿಗೆ ನೆರವಾಗುತ್ತದೆ ಎಂಬ ಆಶಾಭಾವ ಇದೆ.

ದಿನದ ಟ್ವೀಟ್

ಸಾಧನೆಗೆ ಎಲ್ಲಿದೆ ಸಂಕೋಲೆ?




ಬೀರಪ್ಪ ಕುರಿ ಮೇಯಿಸುತ್ತಿದ್ದಾಗಲೇ ಯುಪಿಎಸ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ. ಸಾಧನೆಗೆ ಜಾತಿಯ ಸಂಕೋಲೆ ಇಲ್ಲ, ಪರಿಶ್ರಮದ ಮುಂದೆ ತಲೆಬಾಗುವುದು ಈ ಜಗ ಎಂದು ಸಾರಿದ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಕಾಗಲ್ ತಾಲ್ಲೂಕಿನ ಎಮಗೆ ಗ್ರಾಮದ ಸಾಧಕ ಬೀರಪ್ಪ ಡೋಣಿ, 551ನೇ ರ್‍ಯಾಂಕ್ ಪಡೆದಿದ್ದು, ಐಪಿಎಸ್ ಆಫೀಸರ್ ಆಗುವ ತವಕದಲ್ಲಿದ್ದಾರೆ. ಪರಿಶ್ರಮ, ಶ್ರದ್ಧೆ ಹಾಗೂ ಪ್ರಯತ್ನ ಈ ಕುರಿಗಾಹಿಯ ಕನಸು ನನಸಾಗುವಂತೆ ಮಾಡಿದೆ.

ಧನುಷ್

ಕಿಡಿನುಡಿ

ಪ್ರವಾಸಿಗರಿಗೆ ನೆರವಾಗಲು ಜನಸಾಮಾನ್ಯರೇ ಮುಂದೆ ಬರುತ್ತಿದ್ದ ಸಂದರ್ಭದಲ್ಲಿ, ಟಿಕೆಟ್ ದರವನ್ನು ಏರಿಸಿದ್ದು ಏಕೆ ಎಂಬ ಬಗ್ಗೆ ವಿವರಣೆ ನೀಡುವಂತೆ ವಿಮಾನಯಾನ ಸಂಸ್ಥೆಗಳನ್ನು ಕೇಳಬೇಕು.

#PahalgamTerroristAttack



ದೇವಿಂದರ್ ಶರ್ಮಾ, ಲೇಖಕ, ಸಂಶೋಧಕ

25 ವರ್ಷಗಳ ಹಿಂದೆ

ಮಂಗಳವಾರ, 25-4-2000

• ಭಾವುಕ ಅಭಿಮಾನಿಗಳಿಂದ ಅಣ್ಣಾವ್ರಿಗೆ ಶುಭಾಶಯ

ಬೆಂಗಳೂರು, ಏ. 24– ವರನಟ ಡಾ.ರಾಜ್‌ಕುಮಾರ್ ಅವರಿಗೆ ಇಂದು 72ರ ಹರೆಯ. ಚೈತ್ರ ಮುಂಜಾವಿನ ಬಿಸಿಲಿನ ಧಗೆ ಏರುವ ಮುನ್ನ ಇಲ್ಲಿನ ಸದಾಶಿವ ನಗರದ ತುಂಬೆಲ್ಲ ಜನರ ಸಡಗರ. ರಾಜ್ ಮನೆಯ ಮುಂದೆ ನೆಚ್ಚಿನ ‘ಅಣ್ಣಾವ್ರಿಗೆ’ ಶುಭಾಶಯ ಹೇಳುವ ಅವಕಾಶಕ್ಕಾಗಿ ಬೆಳಗಿನ ಜಾವದಿಂದಲೇ ಕಾತರಿಸುತ್ತಿದ್ದ ಅಭಿಮಾನಿಗಳು.

ತಮ್ಮ ನೆಚ್ಚಿನ ರಾಜಣ್ಣ ಮತ್ತೆ ಚಿತ್ರಗಳಲ್ಲಿ ಅಭಿನಯಿಸಲು ಆರಂಭಿಸಿದ ಹಿನ್ನೆಲೆಯಲ್ಲಿ ಅಭಿಮಾನಿಗಳ ಸಂತಸಕ್ಕೆ ಇನ್ನಷ್ಟು ಮೆರುಗು ಬಂದಿತ್ತು. ಕಳೆದ ವರ್ಷ ರಾಜ್ ಅವರ 71ನೇ ವರ್ಷದ ಹುಟ್ಟಿದಹಬ್ಬಕ್ಕೆ ಮುಂಚೆಯೇ ರಾಜ್ ಸಂಸ್ಥೆ ‘ಶಬ್ದವೇಧಿ’ಯ ಪ್ರಕಟಣೆ ಮಾಡಿದ್ದರಿಂದ ಆಗಲೂ ಅಭಿಮಾನಿಗಳು ಹೀಗೆಯೇ ಆನಂದಪಟ್ಟಿದ್ದರು.

• ‘3 ವರ್ಷ ಹೊಸ ವೈದ್ಯಕೀಯ ಕಾಲೇಜು ಬೇಡ’

ಬೆಂಗಳೂರು, ಏ. 24– ಮುಂದಿನ ಮೂರು ವರ್ಷಗಳ ಕಾಲ ಯಾವುದೇ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಅನುಮತಿ ನೀಡಬಾರದು ಎಂದು ಎಚ್. ಸುದರ್ಶನ್ ನೇತೃತ್ವದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯ ಪಡೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನಿಯಮಾವಳಿಯಂತೆ 3 ಸಾವಿರ ಮಂದಿಗೆ ಒಬ್ಬ ವೈದ್ಯರು ಇರಬೇಕು. ಆದರೆ, ರಾಜ್ಯದ ಜನಸಂಖ್ಯೆಯಲ್ಲಿ 1,150 ಮಂದಿಗೆ ಒಬ್ಬ ವೈದ್ಯರಿದ್ದಾರೆ. ಹೀಗಾಗಿ, ವೈದ್ಯರ ಸಂಖ್ಯೆ ಹೆಚ್ಚಾಗಿರುವುದಲ್ಲದೆ ತರಬೇತಿ ಗುಣಮಟ್ಟ ಇಳಿಮುಖವಾಗಿದೆ ಎಂದು ಸುದರ್ಶನ್ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 25-4-1975

• ಅಗ್ನಿದೇವನಿಗೆ ಹಳೆಯ ನೋಟಿನ ನೈವೇದ್ಯ

ಬೆಂಗಳೂರು, ಏ. 24 – ಪ್ರತಿದಿನ ನಗರದ ರಿಸರ್ವ್ ಬ್ಯಾಂಕ್‌ನಲ್ಲಿ 40 ಲಕ್ಷ ರೂಪಾಯಿ ಮೌಲ್ಯದ 4 ಲಕ್ಷ ಹಳೆಯ ಕರೆನ್ಸಿ ನೋಟುಗಳನ್ನು ಅಗ್ನಿಗೆ ಅರ್ಪಿಸುತ್ತಾರೆ.

ಈ ನೋಟುಗಳನ್ನು ಸುಡುವುದಕ್ಕೆಂದು ವಿಶೇಷ ‘ಒಲೆ’ಯನ್ನೇ ನಿರ್ಮಿಸಿದ್ದಾರೆ. ಬ್ಯಾಂಕ್ ಪಕ್ಕದಲ್ಲಿ ಎತ್ತರವಾಗಿ ನಿಂತಿರುವ ಎರಡು ಚಿಮಣಿಗಳು ನೋಟಿನ ಹೊಗೆ ಉಗುಳು- ವುದಕ್ಕಾಗಿಯೇ ಇವೆ. ಕೊಳಕಾದ ಬಳಸಲು ಆಗದ ನೋಟುಗಳನ್ನು ಗುರುತಿಸಿ ವಿಂಗಡಿ- ಸುವುದಕ್ಕೆಂದೇ ರಿಸರ್ವ್ ಬ್ಯಾಂಕ್‌ನಲ್ಲಿ ನಾಲ್ಕು ವಿಭಾಗಗಳಲ್ಲಿ 150 ಮಂದಿ ನೌಕರರಿದ್ದಾರೆ. ಸಾರ್ವಜನಿಕರು ತಂದುಕೊಟ್ಟ, ಇತರ ಬ್ಯಾಂಕುಗಳಿಂದ ಬಂದ ನೋಟುಗಳನ್ನು ಸುಡಬಹುದೇ ಮರು ಚಲಾವಣೆಗೆ ಕಳುಹಿಸಬಹುದೇ ಎಂದು ಇವರು ನಿರ್ಧರಿಸುತ್ತಾರೆ.

• ಅಂಡರ್‌ವೇರ್ ಚಳವಳಿ

ಮೈಸೂರು, ಏ. 24 – ಮೈಸೂರು ವಿಶ್ವವಿದ್ಯಾಲಯದ ಮುದ್ರಣಾಲಯಕ್ಕೆ ಆಡಳಿತ ವರ್ಗದವರು ಫ್ಯಾನ್‌ಗಳು ಮತ್ತು ಎಕ್ಸಾಸ್ಟ್ ಫ್ಯಾನ್‌ಗಳನ್ನು ಅಳವಡಿಸದಿರುವುದರ ವಿರುದ್ಧ ಪ್ರತಿಭಟಿಸಲು ಮೇ 2ರಿಂದ 4ರವರೆಗೆ ಮುದ್ರಣಾಲಯದಲ್ಲಿ ಒಳಉಡುಪು (ಅಂಡರ್‌ವೇರ್) ಮಾತ್ರ ಧರಿಸಿ ಕೆಲಸ ಮಾಡಲು ಮುದ್ರಣಾಲಯದ ಕೆಲಸಗಾರರು ನಿರ್ಧರಿಸಿದ್ದಾರೆ.

ಕಾರ್ಯಸ್ಥಳದಲ್ಲಿ ಮಹಿಳೆಯರಿಗೆ ಸುರಕ್ಷತೆ ಖಾತರಿಪಡಿಸುವುದರಿಂದ ಆಗುವ ಪ್ರಯೋಜನ ಹಲವು

ಮಹಿಳೆಯರ ಸುರಕ್ಷತೆ: ಸಿಗಬೇಕಿದೆ ಆದ್ಯತೆ



ವಿಶ್ಲೇಷಣೆ

ಎಂ.ಎ. ಸಲೀಂ

ಮಹಿಳೆಯರು ಬದುಕಿನ ಪ್ರತಿ ಹಂತದಲ್ಲಿಯೂ ವ್ಯವಸ್ಥಿತವಾದ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಭೌತಿಕವಾದ ಯಾವ ಗಡಿಗಳ ಹಂಗೂ ಇಲ್ಲದ ಈ ಜಾಗತಿಕ ಪಿಡುಗಿಗೆ ಎಲ್ಲ ವಯೋಮಾನದವರು, ಸಾಮಾಜಿಕ-ಆರ್ಥಿಕ ಹಿನ್ನೆಲೆಯವರು, ಧರ್ಮಗಳವರು, ಶೈಕ್ಷಣಿಕ ಹಿನ್ನೆಲೆಯವರು ತುತ್ತಾಗುತ್ತಿದ್ದಾರೆ. ಮಹಿಳೆಯರು ಅನುಭವಿಸುವ ಕಿರುಕುಳಗಳ ಪೈಕಿ ಪ್ರಮುಖವಾದುದು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ. ಇದರ ಕಾರಣದಿಂದಾಗಿ ಹಲವು ಮಹಿಳೆಯರು ಉದ್ಯೋಗ ಅರಸಲು ಕೂಡ ಮುಂದಾಗುವುದಿಲ್ಲ.

ಭಾರತದಲ್ಲಿ ದುಡಿಯುವ ಜನರಲ್ಲಿ ಮಹಿಳೆಯರ ಪಾಲು (ಎಲ್‌ಎಫ್‌ಪಿಆರ್) ಕಡಿಮೆ ಇರುವುದಕ್ಕೆ ಇದೂ ಒಂದು ಕಾರಣವಾಗಿರಬಹುದು. 2022-23ರಲ್ಲಿ ಇದು ಭಾರತದಲ್ಲಿ ಶೇಕಡ 37ರಷ್ಟು ಮಾತ್ರವೇ ಇತ್ತು.

ಕೆಲಸದ ಸ್ಥಳಗಳಲ್ಲಿನ ಕಿರುಕುಳವು ಹಲವು ರೂಪಗಳಲ್ಲಿ ಇರಬಹುದು. ಮಾತಿನ ಮೂಲಕ, ಲೈಂಗಿಕವಾಗಿ ಅಥವಾ ಸಂಜ್ಞೆಗಳ ಮೂಲಕ ಅದು ನಡೆಯಬಹುದು. ಲೈಂಗಿಕ ಕಿರುಕುಳ ಮಾತ್ರವೇ ಅಲ್ಲದೆ, ನಿಂದಿಸುವಿಕೆ, ಕೆಲಸದ ಅವಧಿಯನ್ನು ಇದ್ದಕ್ಕಿದ್ದಂತೆ ಯಾವುದೇ ಸಮಾಲೋಚನೆ ಇಲ್ಲದೆ ಹೆಚ್ಚಿಸುವುದು, ಮಾನಸಿಕವಾಗಿ ದೌರ್ಜನ್ಯಕ್ಕೆ ಗುರಿಪಡಿಸುವುದು ಕೂಡ ನಡೆಯಬಹುದು. ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು ಅಸಭ್ಯವಾದ ಸಂದೇಶ ಅಥವಾ ಅಸಭ್ಯ ಚಿತ್ರಗಳನ್ನು ಕಳುಹಿಸುವುದು ಕೂಡ ನಡೆಯುತ್ತದೆ. ಇಂತಹ ಕಿರುಕುಳಗಳು ಮಹಿಳಾ ಉದ್ಯೋಗಿಗಳನ್ನು ಖಿನ್ನತೆಗೆ ನೂಕುತ್ತವೆ, ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅತಿಯಾದ ಅವಮಾನಕ್ಕೆ ಗುರಿಯಾದ ಕೆಲವರು ಆತ್ಮಹತ್ಯೆಗೂ ಮುಂದಾಗಬಹುದು.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯು ಕಣ್ಣಿಗೆ ರಾಚುವಂತೆ ಇರುತ್ತದೆ. ಇದು ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಹೌದು. ಈ ಕೃತ್ಯಗಳು ಸಮಾನತೆ, ಜೀವಿಸುವ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಸ್ಪಷ್ಟವಾಗಿ ಹೇಳಬಹುದು. ವಿಶಾಖಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಲಿಂಗ ಸಮಾನತೆಯು ಘನತೆಯಿಂದ ಕೆಲಸ ಮಾಡುವುದು, ಲೈಂಗಿಕ ಕಿರುಕುಳದಿಂದ ರಕ್ಷಣೆ ಪಡೆಯುವುದನ್ನು ಒಳಗೊಂಡಿದೆ. ಇದು ಎಲ್ಲೆಡೆ ಗುರುತಿಸಲಾಗಿರುವ ಮೂಲಭೂತವಾದ ಮಾನವ ಹಕ್ಕು’ ಎಂದು ಹೇಳಿದೆ. ಅದೇ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಮಾರ್ಗಸೂಚಿಗಳು ‘ವಿಶಾಖಾ ಮಾರ್ಗಸೂಚಿಗಳು’ ಎಂದೇ ಜನಪ್ರಿಯವಾಗಿವೆ. ಮಹಿಳಾ ಉದ್ಯೋಗಿಗಳ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ಎಲ್ಲ ಉದ್ಯೋಗದಾತರು ಈ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯ. ಈ ಮಾರ್ಗಸೂಚಿಗಳೇ ಮುಂದೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ– 2013 ರೂಪುಗೊಳ್ಳಲು ಅಡಿಪಾಯವಾಗಿ ಒದಗಿಬಂದವು. ಈ ಕಾಯ್ದೆಯ ಪ್ರಕಾರ, ಕೆಲಸದ ಸ್ಥಳವು ಮಹಿಳೆಯರ ಪಾಲಿಗೆ ಸುರಕ್ಷಿತ ಆಗಿರುವುದನ್ನು ಉದ್ಯೋಗದಾತರು ಖಾತರಿಪಡಿಸಬೇಕು. ಲೈಂಗಿಕ ಕಿರುಕುಳದ ದೂರುಗಳ ಬಗ್ಗೆ ಪರಿಶೀಲನೆ ನಡೆಸಲು ಆಂತರಿಕ ದೂರು ನಿವಾರಣಾ ಸಮಿತಿ ರಚಿಸಬೇಕು. ಲೈಂಗಿಕ ಕಿರುಕುಳದ ಪ್ರಕರಣಗಳನ್ನು ತಡೆಯಲು ಕೆಲಸದ ಸ್ಥಳದಲ್ಲಿ ಲಭ್ಯವಿರುವ ವ್ಯವಸ್ಥೆಯ ಬಗ್ಗೆ ಕೆಲಸಗಾರರಿಗೆ ಮಾಹಿತಿ ಮತ್ತು ಅರಿವು ನೀಡಲು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಭಾರತೀಯ ನ್ಯಾಯ ಸಂಹಿತೆ ಅಥವಾ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ಮಹಿಳಾ ಉದ್ಯೋಗಿಯು ದೂರು ನೀಡಲು ಮುಂದಾದರೆ ಅದಕ್ಕೆ ಅಗತ್ಯ ನೆರವು ಒದಗಿಸಬೇಕು.

ಕಿರುಕುಳ ನೀಡಿದ ವ್ಯಕ್ತಿಯು ನೌಕರ ಅಲ್ಲದಿದ್ದರೆ, ಆತ ಯಾವ ಕೆಲಸದ ಸ್ಥಳದಲ್ಲಿ ಕಿರುಕುಳ ನೀಡಿದ್ದನೋ ಅಲ್ಲಿ ಆತನ ವಿರುದ್ಧ ಕ್ರಮ ಜರುಗಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಲೈಂಗಿಕ ಕಿರುಕುಳ ನೀಡುವುದನ್ನು ತನ್ನ ಸೇವಾ ನಿಯಮಗಳ ಪ್ರಕಾರ ದುರ್ನಡತೆ ಎಂದು ಪರಿಗಣಿಸಬೇಕು, ಇಂತಹವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿದೆ.

ಹಲವು ಸಂದರ್ಭಗಳಲ್ಲಿ ಮಹಿಳೆಯರು ತಮಗಾದ ಕಿರುಕುಳವನ್ನು ದೂರಿನ ರೂಪದಲ್ಲಿ ಹೇಳಲು ಮುಂದೆ ಬರುವುದೇ ಇಲ್ಲ. ನೌಕರಿ ನೀಡಿದವರು ಅಥವಾ ಸಹೋದ್ಯೋಗಿಗಳು ತಮ್ಮನ್ನು ಗುರಿಯಾಗಿಸಿಕೊಂಡು ಪ್ರತೀಕಾರಕ್ಕೆ ಮುಂದಾಗಬಹುದು ಎಂಬ ಭೀತಿಯಿಂದಾಗಿ ಮಹಿಳೆಯರಲ್ಲಿ ಹಲವರು ದೂರು ನೀಡಲು ಮುಂದಾಗುವುದಿಲ್ಲ. ನಾಚಿಕೆ, ಅವಮಾನದಂತಹ ಕೆಲವು ಮಾನಸಿಕ ಅಂಶಗಳು ಕೂಡ ದೂರು ನೀಡುವುದಕ್ಕೆ ಅಡ್ಡಿಯಾಗಿ ನಿಲ್ಲುತ್ತವೆ.

ಮಹಿಳಾ ನೌಕರರಲ್ಲಿ ಸುರಕ್ಷತೆಯ ಭಾವನೆಯನ್ನು ಮೂಡಿಸಲು ಉದ್ಯೋಗದಾತರು ಹಾಗೂ ಎಲ್ಲ ಉದ್ಯೋಗಿಗಳಲ್ಲಿ ಅರಿವು ಮೂಡಿಸುವ ಅಗತ್ಯ ಇದೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷತೆಯನ್ನು ಖಾತರಿಪಡಿಸುವುದರಿಂದ ಆಗುವ ಆರ್ಥಿಕ ಪ್ರಯೋಜನಗಳು ಕೂಡ ಹಲವು ಇವೆ. ಮಹಿಳಾ ಉದ್ಯೋಗಿಗಳ ಕೆಲಸದ ಗುಣಮಟ್ಟವು ಇದರಿಂದಾಗಿ ಹೆಚ್ಚುತ್ತದೆ, ಅವರು ಕೆಲಸ ತೊರೆಯುವ ಪ್ರಮಾಣ ಹಾಗೂ ರಜೆ ಪಡೆದುಕೊಳ್ಳುವ ಪ್ರಮಾಣವು ಕಡಿಮೆ ಆಗುತ್ತದೆ, ಮಹಿಳಾ ಉದ್ಯೋಗಿಗಳು ಸೇರಿದಂತೆ ಎಲ್ಲ ವರ್ಗಗಳ ಉದ್ಯೋಗಿಗಳಲ್ಲಿ ಆತ್ಮವಿಶ್ವಾಸವು ಹೆಚ್ಚಾಗುತ್ತದೆ. ಈ ಉದ್ದೇಶಗಳು ಈಡೇರಬೇಕು ಎಂದಾದರೆ ಈ ಕೆಳಗಿನ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು.



ಕೆಲಸಕ್ಕೆ ಸೇರಿಸಿಕೊಳ್ಳುವ ಸಂದರ್ಭದಲ್ಲಿಯೇ ಎಲ್ಲ ಮಹಿಳಾ ಉದ್ಯೋಗಿಗಳಿಗೆ ತಮ್ಮ ಹಕ್ಕುಗಳ ಬಗ್ಗೆ, ದೊರೆಯುವ ಸೌಲಭ್ಯಗಳ ಬಗ್ಗೆ ಹಾಗೂ ಲೈಂಗಿಕ ಕಿರುಕುಳದ ವಿರುದ್ಧ ತಾವು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸಬೇಕು. ಕೆಲಸದ ಸ್ಥಳದಲ್ಲಿ ನೌಕರರು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು, ಅದರಲ್ಲೂ ಮುಖ್ಯವಾಗಿ ಮಹಿಳೆಯರೊಂದಿಗೆ ನಡತೆ ಹೇಗಿರಬೇಕು ಎಂಬುದನ್ನು ಸ್ಪಷ್ಟವಾಗಿ ವಿವರಿಸುವ ನೀತಿ ಸಂಹಿತೆಯೊಂದನ್ನು ರೂಪಿಸಬೇಕು. ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳಾ ಉದ್ಯೋಗಿ ದೂರು ನೀಡಿದಲ್ಲಿ, ಅದನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತದೆ, ದೂರನ್ನು ಗೋಪ್ಯವಾಗಿ ಇರಿಸಲಾಗುತ್ತದೆ ಹಾಗೂ ಪ್ರತೀಕಾರದ ಕ್ರಮ ಕೈಗೊಳ್ಳುವುದಿಲ್ಲ ಎಂಬ ಭರವಸೆ ಒದಗಿಸಬೇಕು.

ಲೈಂಗಿಕ ಕಿರುಕುಳದ ಪ್ರಕರಣಗಳಲ್ಲಿ, ಲಿಂಗ ತಾರತಮ್ಯದ ಪ್ರಕರಣಗಳಲ್ಲಿ ಕಂಪನಿಯು ಯಾವ ನೀತಿಯನ್ನು ಅನುಸರಿಸುತ್ತದೆ, ದೂರು ನೀಡುವ ಪ್ರಕ್ರಿಯೆ ಹೇಗಿರುತ್ತದೆ ಎಂಬ ಬಗ್ಗೆ ಮಾಹಿತಿ ಒದಗಿಸಬೇಕು. ಲೈಂಗಿಕ ಕಿರುಕುಳ ಅಥವಾ ಲಿಂಗ ತಾರತಮ್ಯದ ಕುರಿತು ದೂರು ಬಂದಾಗ ಅದನ್ನು ನಿರ್ವಹಿಸುವುದು ಹೇಗೆ ಎಂಬ ಬಗ್ಗೆ ಮೇಲ್ವಿಚಾರಕರಿಗೆ ಮತ್ತು ಇತರ ಸಿಬ್ಬಂದಿಗೆ ತರಬೇತಿ ನೀಡಬೇಕು. ಹಿಂಸೆ ಹಾಗೂ ದೌರ್ಜನ್ಯದಿಂದ ಪಾರಾಗಲು ಮಹಿಳಾ ಉದ್ಯೋಗಿಗೆ ಆತ್ಮರಕ್ಷಣೆಯ ಕಲೆಗಳನ್ನು ಕಲಿಸಬಹುದು. ಮಹಿಳೆಯರಿಗೆ ಅವರು ಕೆಲಸ ಮಾಡುವ ಸ್ಥಳಕ್ಕೆ ಹತ್ತಿರದಲ್ಲಿ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ ಇರಬೇಕು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಕಂಪನಿಯ ಕಡೆಯಿಂದ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು.

ಮಹಿಳಾ ಉದ್ಯೋಗಿಗಳ ಸುರಕ್ಷತೆಯನ್ನು ಹೆಚ್ಚಿಸಲು ಕೆಲವು ಕಂಪನಿಗಳು ಉತ್ತಮ ವ್ಯವಸ್ಥೆ ರೂಪಿಸಿವೆ. ಯೂನಿಸೆಫ್ ಜೊತೆಗೂಡಿ ಕರ್ನಾಟಕದ ಪೊಲೀಸರು ರೂಪಿಸಿರುವ ‘ಲಿಂಗತ್ವ ಸೂಕ್ಷ್ಮತೆ ಹಾಗೂ ಜನಸ್ನೇಹಿ ಪೊಲೀಸ್’ ಯೋಜನೆಯು ನೆರವಿನ ಅಗತ್ಯದಲ್ಲಿ ಇರುವ ಮಹಿಳೆಯರಿಗೆ ಸ್ಪಂದಿಸುವ, ಅವರ ವಿಚಾರದಲ್ಲಿ ಸೂಕ್ಷ್ಮವಾಗಿ ವರ್ತಿಸುವ ಪೊಲೀಸ್ ಪಡೆಯನ್ನು ಕಟ್ಟುವ ಉದ್ದೇಶ ಹೊಂದಿದೆ. ಅದೇ ರೀತಿಯಲ್ಲಿ, ಔದ್ಯಮಿಕ ಸಂಘಟನೆಗಳಾದ ‘ಎಫ್‌ಐಸಿಸಿಐ’ ಮತ್ತು ‘ನಾಸ್ಕಾಂ’ ಉದ್ಯೋಗದಾತರಿಗೆ ಮಾರ್ಗದರ್ಶಿ ಕೈಪಿಡಿ ರೂಪಿಸಿವೆ. ಕಾನೂನು ಜಾರಿ ಸಂಸ್ಥೆಗಳು ಹಾಗೂ ಸಂಘಟನೆಗಳು ಮಾತ್ರವಲ್ಲದೆ, ಈ ವಿಷಯದಲ್ಲಿ ಸರ್ಕಾರೇತರ ಸಂಘಟನೆಗಳು ಕೂಡ ಮಹತ್ವದ ಪಾತ್ರವನ್ನು ವಹಿಸಲು ಅವಕಾಶ ಇದೆ. ಕೆಲಸದ ಸ್ಥಳಗಳಲ್ಲಿ ಲಿಂಗ ಸಮಾನತೆಯನ್ನು ತರಲು ಕಾನೂನಿಗೆ ಅನುಗುಣವಾಗಿ ಕೆಲವು ಸುರಕ್ಷತಾ ಕ್ರಮಗಳನ್ನು ರೂಪಿಸಲು ಎನ್‌ಜಿಒಗಳು ಕಂಪನಿಗಳಿಗೆ ತರಬೇತಿ ಒದಗಿಸಬಹುದು.

ಆರ್ಥಿಕ ಬೆಳವಣಿಗೆ ಹಾಗೂ ಜಾಗತಿಕ ನಾಯಕತ್ವವನ್ನು ಭಾರತವು ಬಯಸುತ್ತಿರುವ ಈ ಹೊತ್ತಿನಲ್ಲಿ, ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯನ್ನು ಆದ್ಯತೆಯ ವಿಷಯವನ್ನಾಗಿ ಎತ್ತಿಕೊಳ್ಳುವುದು ನೈತಿಕ ಅನಿವಾರ್ಯ ಮಾತ್ರವೇ ಅಲ್ಲ; ಅದು ಮಹತ್ವಪೂರ್ಣವಾದ ಒಂದು ಅಗತ್ಯ ಕ್ರಮವೂ ಹೌದು. ಮಹಿಳೆಯರಿಗೆ ಕೆಲಸದ ಸ್ಥಳವು ಸುರಕ್ಷಿತ ಅನ್ನಿಸಿದರೆ ಉತ್ಪಾದಕತೆ ಹೆಚ್ಚಾಗುತ್ತದೆ, ಹೊಸತನಕ್ಕೆ ಇಂಬು ಸಿಗುತ್ತದೆ, ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ. ಇದರಿಂದ ಇಡೀ ದೇಶಕ್ಕೆ ಒಳಿತಾಗುತ್ತದೆ.

ಲೇಖಕ: ಪೊಲೀಸ್ ಮಹಾನಿರ್ದೇಶಕ, ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು ಹಾಗೂ ವಿಶೇಷ ಘಟಕಗಳು, ಬೆಂಗಳೂರು

ಚುರುಮುರಿ



ಜಾತಿ ಫಜೀತಿ

• ಮಣ್ಣೆ ರಾಜು

ಸಚಿವರು ಜಾತಿ ಜನಗಣತಿಯ ವರದಿ ಅಧ್ಯಯನ- ದಲ್ಲಿ ಮುಳುಗಿದ್ದರು.

‘ಆ ವಯಸ್ಸಿನಲ್ಲಿ ಹೀಗೆ ಗಂಭೀರವಾಗಿ ಅಧ್ಯಯನ ಮಾಡಿದ್ದರೆ ಐಎಎಸ್ಸೊ ಐಪಿಎಸ್ಸೊ ಪಾಸಾಗ್ತಿದ್ರಿ’ ಎನ್ನುತ್ತಾ ಪತ್ನಿ ಕಾಫಿ ತಂದುಕೊಟ್ಟರು.

‘ಅಧ್ಯಯನ ಮಾಡಲು ಸಿಎಂ ವರದಿಯ ಪ್ರತಿ ಕೊಟ್ಟಿದ್ದಾರೆ. 8-10 ಸಂಪುಟಗಳಿವೆ. ವರದಿಯಲ್ಲಿನ ಲೆಕ್ಕಾಚಾರಗಳನ್ನು ಅರ್ಥ ಮಾಡಿಕೊಳ್ಳೋದು ಸರಳ ಅಲ್ಲ’ ಕಾಫಿ ಹೀರಿದರು.

‘ಜಾತಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಗಣತಿಯ ವರದಿ ಗಣಿತದಷ್ಟೇ ಕಬ್ಬಿಣದ ಕಡಲೆ ಏನ್ರೀ?’

‘ಬರೀ ಗಣಿತ ಅಲ್ಲ, ಸಮಾಜ, ವಿಜ್ಞಾನ, ಕನ್ನಡ, ಇಂಗ್ಲಿಷ್, ಸೋಷಿಯಲ್ ಸೈನ್ಸ್, ಪೊಲಿಟಿಕಲ್ ಸೈನ್ಸ್, ಹಿಸ್ಟರಿ, ಎಕನಾಮಿಕ್ಸ್ ಎಲ್ಲಾ ಮಿಕ್ಸ್ ಆಗಿವೆ. ಕಥೆ, ಕವನ ಓದುವಷ್ಟು ಸುಲಭವಲ್ಲ ಜಾತಿ ಜನಗಣತಿ ವರದಿ ಓದಿ ಅರ್ಥ ಮಾಡಿಕೊಳ್ಳೋದು’.

‘ಆಳವಾಗಿ ಅಧ್ಯಯನ ಮಾಡಿ, ವರದಿಯನ್ನು ಸಮರ್ಥಿಸಿಕೊಳ್ಳಬೇಕು ಅಂತ ಸಿಎಂ ಹೇಳಿದ್ದಾರಲ್ರೀ. ಅಧ್ಯಯನ ಕಷ್ಟವಾದರೆ ತಜ್ಞರ ಬಳಿ ಟ್ಯೂಷನ್‌ಗೆ ಹೋಗ್ರಿ. ಮಂತ್ರಿಗಳಿಗೆ ಸರ್ಕಾರ ಜಾತಿ ಜನಗಣತಿಯ ಪರೀಕ್ಷೆ ನಡೆಸಿಬಿಟ್ಟರೆ, ನೀವು ಫೇಲಾದರೆ ಅವಮಾನ ಆಗುತ್ತೆ’.

‘ವರದಿಯಲ್ಲಿರುವ ಅಷ್ಟೂ ಜಾತಿಗಳು, ಜನಸಂಖ್ಯೆ, ಅವರ ಸ್ಥಾನಮಾನ, ನೀಡಬೇಕಾದ ಮೀಸಲಾತಿ ಲೆಕ್ಕಾಚಾರಗಳು ತಲೆ ಕೆಡಿಸುತ್ತವೆ’.

‘ಜಾತಿ ಜನಗಣತಿ ವರದಿ ಗರ್ಜನೆ ಮಾಡುತ್ತಿದೆ. ವರದಿಯೊಳಗೆ ಹುಲಿ ಇದೆಯೋ ಜಿಂಕೆ ಇದೆಯೋ ಅಧ್ಯಯನ ಮಾಡಿ ರಾಜ್ಯದ ಜನರಿಗೆ ನೀವು ತಿಳಿಸಬೇಕು. ವರದಿ ಬಗ್ಗೆ ನಿಮ್ಮ ಅಭಿಪ್ರಾಯವೇನು ಅಂತ ಪತ್ರಕರ್ತರು ಕೇಳಿದರೆ ಏನು ಹೇಳ್ತೀರಿ?’

‘ಹೇಳ್ತೀನಿ, ಜಾತಿ ಜನಗಣತಿ ವರದಿ ಬಗ್ಗೆ ನಮ್ಮ ಸಮುದಾಯದ ಸ್ವಾಮೀಜಿಗಳು, ಮುಖಂಡರು ಏನು ಹೇಳ್ತಾರೋ ಅದೇ ನನ್ನ ಅಭಿಪ್ರಾಯ ಅಂತ ಹೇಳ್ತೀನೆ’ ಎಂದರು ಮಂತ್ರಿ.

ಸಂಗತ

ಗುರು ಬೆಳಗಲಿ ಜ್ಞಾನದ ಬೆಳಕಲಿ

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬಿತ್ತಬೇಕಿದ್ದ ಶಿಕ್ಷಕ ಸಮುದಾಯ ತನ್ನ ಈ ಹೊಣೆಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆಯೇ?

• ಸರ್ಫ್ರಾಜ್ ಚಂದ್ರಗುತ್ತಿ

ವಿದ್ಯಾರ್ಥಿ ಸಮುದಾಯದಲ್ಲಿನ ಮೂಢನಂಬಿಕೆಯ ಕುರಿತಾಗಿ ಮಲ್ಲಿಕಾರ್ಜುನ ಹೆಗ್ಗಳಗಿ ಪ್ರಸ್ತಾಪಿಸಿದ್ದಾರೆ (ಸಂಗತ, ಏ. 18). ವಿದ್ಯಾರ್ಥಿಗಳಲ್ಲಿ ವೈಚಾರಿಕತೆಯನ್ನು ಬಿತ್ತಲು ಶಿಕ್ಷಕರು ಮುಂದಾಗಬೇಕೆನ್ನುವ ಅವರ ಕಾಳಜಿ ಸರಿಯಾಗಿದೆ. ನಿಜ, ಇದೊಂದು ಸಕಾಲಿಕವಾದ ಚರ್ಚೆಯ ವಿಷಯ. ಇಂದು ವಿದ್ಯಾರ್ಥಿಗಳು ಹೆಚ್ಚು ಸಮಯ ಶಾಲಾ ಕಾಲೇಜಿನಲ್ಲಿ ಅಥವಾ ಅಧ್ಯಾಪಕರ ಜತೆ ಇರುತ್ತಾರೆ. ಉಳಿದಂತೆ ಮನೆ ಹಾಗೂ ಸಮಾಜದ ನಡುವೆ. ಸಮಾಜ ಇಲ್ಲವೇ ಪೋಷಕರ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಬಹುತೇಕ ವಿದ್ಯಾರ್ಥಿಗಳಲ್ಲಿ ಇಲ್ಲ. ಕೊನೆಯಪಕ್ಷ ತಮ್ಮ ಮಕ್ಕಳು ಅಧ್ಯಾಪಕರ ಮಾತನ್ನು ಕೇಳುತ್ತಾರೆ ಎಂಬ ನಂಬಿಕೆ ಸಮಾಜದಲ್ಲಿದೆ. ಇದು ನಿಜ ಕೂಡ.

‘ಮಕ್ಕಳು ನೀವು ಹೇಳಿದ್ದನ್ನು ಕೇಳುವುದಿಲ್ಲ, ನೀವು ಮಾಡುವುದನ್ನು ನೋಡಿ ಕಲಿಯುತ್ತಾರೆ’ ಎನ್ನುತ್ತಾನೆ ಖಲೀಲ್ ಗಿಬ್ರಾನ್. ಆದರೆ ಶಿಕ್ಷಕರೇ ಮೂಢನಂಬಿಕೆಗಳ ಬೆನ್ನುಹತ್ತಿದ್ದರೆ ಯಾರನ್ನು ದೂರುವುದು? ಹೆಸರಿಗೆ ನಾವು ವಿಜ್ಞಾನ ಯುಗದಲ್ಲಿದ್ದೇವೆ. ಪ್ರತಿಕ್ಷಣವೂ ವಿಜ್ಞಾನದ ಸವಲತ್ತುಗಳನ್ನೇ ಬಳಸಿಕೊಳ್ಳುತ್ತಿದ್ದೇವೆ. ಆದರೆ ಆಂತರಿಕವಾಗಿ ನಾವು ಅಜ್ಞಾನದ ಬೆನ್ನು ಹತ್ತಿದ್ದೇವೆ. ವಿದ್ಯಾರ್ಥಿಗಳು ಹಾಗೂ ತನ್ನ ಸುತ್ತಲಿನ ಸಮಾಜಕ್ಕೆ ವೈಜ್ಞಾನಿಕ ಮನೋಭಾವ ಬಿತ್ತಲು ನೆರವಾಗಬೇಕಿದ್ದ ಶಿಕ್ಷಕ ಸಮುದಾಯ ತನ್ನ ಈ ಹೊಣೆಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆಯೇ?

ಇಲ್ಲೊಂದು ಉದಾಹರಣೆ ಇದೆ. ಕಾಲೇಜಿನ ಉಪನ್ಯಾಸಕರೆಲ್ಲ ಸೇರಿ ಪ್ರವಾಸ ಹೋಗಿ ಬಂದರು. ಇಬ್ಬರು ಶಿಕ್ಷಕರು ಮಾತ್ರ ಹೋಗಿರಲಿಲ್ಲ. ಇದಕ್ಕೆ ಕಾರಣ, ಅಂದು ಅಮಾವಾಸ್ಯೆ ಆಗಿತ್ತು ಎಂಬುದು. ಇನ್ನೊಂದು ಉದಾಹರಣೆ. ಅಂದು ಮಧ್ಯಾಹ್ನ ಭಾಗಶಃ ಸೂರ್ಯಗ್ರಹಣ. ರಾಜ್ಯದ ಕೆಲವು ಶಾಲೆಗಳಲ್ಲಿ ಗ್ರಹಣ ಶುರುವಾದಾಗ ಸಾಮೂಹಿಕ ಭೋಜನ ಮಾಡಿ, ಪ್ರಕೃತಿಯ ಸಹಜ ವಿದ್ಯಮಾನವಾದ ಗ್ರಹಣ ಹಿಡಿದಾಗ ಊಟ ಮಾಡುವುದರಿಂದ ಏನೂ ಆಗುವುದಿಲ್ಲ ಎಂಬ ಸಂದೇಶವನ್ನು ಸಮಾಜಕ್ಕೆ ನೀಡಲಾಯಿತು. ಆದರೆ ನಗರವೊಂದರ ಪ್ರಸಿದ್ಧ ಕಾಲೇಜಿನಲ್ಲಿ ಆ ದಿನ ವಿಜ್ಞಾನದ ವಿದ್ಯಾರ್ಥಿಗಳೂ ಇರಲಿಲ್ಲ, ವಿಜ್ಞಾನ ಕಲಿಸುವ ಮೇಷ್ಟ್ರುಗಳು ಮೊದಲೇ ಇರಲಿಲ್ಲ. ಹಾಗಾದರೆ ವಿಜ್ಞಾನಕ್ಕೂ ವೈಜ್ಞಾನಿಕ ಮನೋಭಾವಕ್ಕೂ ಸಂಬಂಧವೇ ಇಲ್ಲವೆ? ಪ್ರಜ್ವಲಿತೋ ಜ್ಞಾನಮಯಂ ಗುರು ಎಂದಿದ್ದಾರೆ ವೇದವ್ಯಾಸರು. ಗುರುವಾದವನು ಜ್ಞಾನದ ಬೆಳಕಲ್ಲಿ ಬೆಳಗಬೇಕು. ಈ ಕಾಲದ ಗುರು ಬರೀ ವಿಷಯ ಜ್ಞಾನವಲ್ಲದೆ ವೈಚಾರಿಕ ವಿದ್ವತ್ತಿನಿಂದ ಸಮೃದ್ಧನಾಗಿರಬೇಕು. ಅವೈಜ್ಞಾನಿಕವಾದುದನ್ನು ಪ್ರಶ್ನಿಸಿ ಅದನ್ನು ತಿರಸ್ಕರಿಸುವ ಮನೋಭಾವವನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಡಬೇಕು.

ಸರ್ಕಾರದ ಆದೇಶದಂತೆ ಶಾಲಾ ಕಾಲೇಜುಗಳಲ್ಲಿ ಪ್ರತಿದಿನ ಸಂವಿಧಾನದ ಪ್ರಸ್ತಾವನೆಯನ್ನು ಓದಿಸಲಾಗುತ್ತಿದೆ. ವೈಚಾರಿಕತೆ, ಸಮಾನತೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಿ ಎಂದು ಇಷ್ಟೊಂದು ಗಟ್ಟಿ ದನಿಯಲ್ಲಿ ಘೋಷಿಸುವ ಇನ್ನೊಂದು ಸಂವಿಧಾನ ಬೇರೆಡೆ ಇರಲಿಕ್ಕಿಲ್ಲ. ಆದರೂ ಪರಿಸ್ಥಿತಿ ಬದಲಾಗುತ್ತಿಲ್ಲ ಏಕೆ? ವಿಜ್ಞಾನ ಅಥವಾ ವಿಜ್ಞಾನಿಗಳ ಸಮೂಹವು ಶಿಕ್ಷಣ ವ್ಯವಸ್ಥೆಯನ್ನು ವರ್ತಮಾನದ ಬೆಳಕಿನಲ್ಲಿ ಮುನ್ನಡೆಸಲು ಮಾರ್ಗದರ್ಶನ ಮಾಡಬೇಕು. ಅದಾಗಬೇಕಾದರೆ ಶಿಕ್ಷಕರು ಮೊದಲು ಪೂರ್ವಗ್ರಹಗಳಿಂದ ಹೊರಬರಬೇಕು.



ಜ್ಞಾನ ಎಂಬುದು ಬರೀ ಹೊರಗಿನಿಂದ ತುಂಬಿಕೊಳ್ಳುವ ವಸ್ತುಪ್ರಪಂಚ ಎಂಬ ನಂಬಿಕೆ ನಮ್ಮಲ್ಲಿದೆ. ಆದರೆ ಒಳಗಿನ ಪೂರ್ವಗ್ರಹಗಳನ್ನು ವಿಸರ್ಜಿಸದೆ ನಿಜವಾದ ಅರಿವಿನ ಲೋಕ ತೆರೆದುಕೊಳ್ಳುವುದಿಲ್ಲ ಎಂಬುದನ್ನು ಬುದ್ಧಗುರು ಬಹಳ ಹಿಂದೆಯೇ ಹೇಳಿದ್ದಾನೆ. ಪತ್ನಿ ಯಶೋಧರೆ ಸನ್ಯಾಸತ್ವವನ್ನು ಸ್ವೀಕರಿಸಿದ ತರುವಾಯ ಬುದ್ಧನಿಗೆ ಕೇಳಿದ ಪ್ರಶ್ನೆ, ‘ಜ್ಞಾನಾನ್ವೇಷಣೆ ಎಂದರೇನು? ಹೊರಗಿರುವುದನ್ನು ಒಳಗೆ ತುಂಬಿಕೊಳ್ಳುವುದೋ?’ ಇದಕ್ಕೆ ಬುದ್ಧನ ಉತ್ತರ ತುಂಬಾ ವಿಭಿನ್ನವಾದುದು. ‘ಜ್ಞಾನಾನ್ವೇಷಣೆ ಎಂಬುದು ಹೊರಗಿನ ವಸ್ತುವಿಚಾರಗಳನ್ನು ಒಳಗೆ ತುಂಬಿಕೊಳ್ಳುವುದಲ್ಲ, ಬದಲಿಗೆ ಈಗಾಗಲೇ ತುಂಬಿಕೊಂಡಿರುವುದನ್ನು ಹೊರಗೆ ಹಾಕುವುದು’ ಎನ್ನುತ್ತಾನೆ. ಸ್ಥಾವರ ನಂಬಿಕೆಗಳಲ್ಲಿ ಬಂದಿಯಾಗಿರುವ ಭಾರತೀಯ ಸಮಾಜ ಸೃಷ್ಟಿಸಿದ ಈ ನೆಲದ ಶಿಕ್ಷಕ, ತಾನು ಮೊದಲು ವಿಜ್ಞಾನದ ಬೆಳಕಲ್ಲಿ ಬದಲಾಗಬೇಕು. ತರುವಾಯವೇ ಆ ಬೆಳಕಲ್ಲಿ ವಿದ್ಯಾರ್ಥಿಗಳನ್ನು ಮುನ್ನಡೆಸಲು ಸಾಧ್ಯ.

ಕುವೆಂಪು ಅವರು ಶಿವಮೊಗ್ಗದ ತಮ್ಮ ಸಂಬಂಧಿಯೊಬ್ಬರ ಮನೆಯಲ್ಲಿದ್ದಾಗ ಅವರನ್ನು ಕಾಣಲು ಒಬ್ಬ ಕೃಷಿ ವಿಜ್ಞಾನಿ ಬಂದರು. ಅವರ ನಡುವೆ ದೀರ್ಘ ಮಾತುಕತೆ ನಡೆದು ಊಟದ ಹೊತ್ತಾಯಿತು. ವಿಜ್ಞಾನಿ ಮನೆಗೆ ಹೊರಟು ನಿಂತಾಗ ‘ಈಗ ಊಟದ ಸಮಯವಾಗಿದೆ, ನಮ್ಮೊಂದಿಗೆ ಊಟ ಮಾಡಿಯೇ ಹೊರಡಿ’ ಎಂದರು ಕುವೆಂಪು. ಅದಕ್ಕೆ ಅವರು ಒಪ್ಪದೇ ಹೊರಟು ನಿಂತಾಗ ಕುವೆಂಪು ಅವಸರಕ್ಕೆ ಕಾರಣ ಕೇಳಿದರು. ಆ ಕೃಷಿ ವಿಜ್ಞಾನಿ ‘ಈಗ ಸ್ವಲ್ಪ ಹೊತ್ತಿನಲ್ಲಿ ಗ್ರಹಣ ಶುರುವಾಗುತ್ತದೆ. ನಾನು ಬೇಗ ಮನೆ ಸೇರಿಕೊಳ್ಳಬೇಕು’ ಎಂದದ್ದೇ ತಡ ಕುವೆಂಪು ಕೆರಳಿ ‘ನೀವು ವಿಜ್ಞಾನಿಗಳಲ್ಲ, ಅಜ್ಞಾನವನ್ನು ಹೊತ್ತ ಕತ್ತೆಗಳು’ ಎಂದದ್ದನ್ನು ಸಾಹಿತಿ ಪ್ರಭುಶಂಕರ ಪುಸ್ತಕವೊಂದರಲ್ಲಿ ದಾಖಲಿಸಿದ್ದಾರೆ. ಈ ಪ್ರಕರಣ ವಿಜ್ಞಾನಿಗಳಿಗೆ ಮಾತ್ರವಲ್ಲ ವೈಜ್ಞಾನಿಕ ಮನೋಧರ್ಮವನ್ನು ಬಿತ್ತಲು ಹೊರಡುವ ಎಲ್ಲರಿಗೂ ಮಾರ್ಗದರ್ಶಿಯಾಗಬೇಕು.

ಭಯದ ಮನಃಸ್ಥಿತಿಯೇ ಮೂಢನಂಬಿಕೆಗಳಿಗೆ ಮುಖ್ಯ ಕಾರಣ ಎನ್ನುತ್ತದೆ ಮನಃಶಾಸ್ತ್ರ. ಇಂತಹ ಭಯವನ್ನು ಹೋಗಲಾಡಿಸಿ ಆತ್ಮವಿಶ್ವಾಸವನ್ನು ಬೆಳೆಸುವ ಶಿಕ್ಷಣ ಇಂದಿನ ಅವಶ್ಯಕತೆ.

ವಾಚಕರ ವಾಣಿ

ಸೌಹಾರ್ದ ಭಾರತಕ್ಕೆ ಸಾಕ್ಷಿ

ಕಾಶ್ಮೀರದ ಪಹಲ್ಗಾಮ್ ಸಮೀಪದ ಬೈಸರನ್ ಕಣಿವೆಯಲ್ಲಿ ನಡೆದ ಭಯೋತ್ಪಾದಕರ ದಾಳಿಯಲ್ಲಿ ಮೃತರಾದ ಶಿವಮೊಗ್ಗದ ಮಂಜುನಾಥ ರಾವ್ ಅವರ ಪತ್ನಿ ‘ನನ್ನ ಪತಿ ಹತರಾದ ನಂತರ, ದಾಳಿ ಸ್ಥಳದಿಂದ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದವರು ಸ್ಥಳೀಯ ಮುಸಲ್ಮಾನರು. ಅವರನ್ನು ನಾನು ನನ್ನ ಅಣ್ಣಂದಿರು ಎಂದೇ ಕರೆಯುತ್ತೇನೆ’ ಎಂದು ಹೇಳಿದ್ದಾರೆ. ಸೌಹಾರ್ದ ಭಾರತಕ್ಕೆ ಇದು ಸಾಕ್ಷಿಯಾಗಿದೆ.

ಕೆಲವರು ನಡೆಸಿದ ಕುಕೃತ್ಯಗಳಿಂದ ಒಂದು ಸಮುದಾಯವನ್ನು ಸಂಶಯದ ದೃಷ್ಟಿಯಿಂದ ನೋಡುವಂತೆ ಆಗಿರುವುದು ದುರದೃಷ್ಟಕರ. ಇದನ್ನು ತೊಡೆದುಹಾಕುವ ಪ್ರಯತ್ನಗಳು ಎಲ್ಲ ನೆಲೆಗಳಿಂದಲೂ ನಡೆಯಬೇಕು. ಉಗ್ರರನ್ನು ಸದೆಬಡಿಯುವ ಕೆಲಸಕ್ಕೆ ಮತ-ಧರ್ಮಗಳ ಭೇದವೆಣಿಸದೆ ಎಲ್ಲರೂ ಕೈಜೋಡಿಸಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಂದು– ಇಂದು

ಹಿಂದೆ...
ಕನ್ನಡ ಸಾಹಿತ್ಯ
ಸಮ್ಮೇಳನಗಳಲ್ಲಿ
ಕೋಟಿ ಮೌಲ್ಯದ
ನುಡಿಗಳಿರುತ್ತಿದ್ದವು.
ಇಂದು...
ಕೋಟಿ ರೂಪಾಯಿಗಳ
ಖರ್ಚು ಇರುತ್ತದೆ!

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಕಸಾಪ ಆದ್ಯತೆ ಬದಲಾಗಲಿ

ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಾ ತಿದ್ದುಪಡಿ, ಬಳ್ಳಾರಿ ಸಾಹಿತ್ಯ ಸಮ್ಮೇಳನದ ಖರ್ಚಿಗೆ ನಲವತ್ತು ಕೋಟಿ ರೂಪಾಯಿಯ ಬೇಡಿಕೆಯನ್ನು ಗಮನಿಸಿದರೆ, ಸಾಹಿತ್ಯ ಪರಿಷತ್ತು ಅಧಿಕಾರ ಹಾಗೂ ಹಣದ ಸುತ್ತಲೇ ಗಿರಕಿ ಹೊಡೆಯುತ್ತಿದೆ ಎನಿಸುತ್ತದೆ. ಇದರ ಬದಲು ಕನ್ನಡದ ಅಭಿವೃದ್ಧಿ, ಸಮಸ್ಯೆಗಳ ಪರಿಹಾರದಂತಹ ಸಂಗತಿಗಳು ಪರಿಷತ್ತಿನ ಆದ್ಯತೆ ಆಗಬೇಕಿತ್ತು. ಈಗ ಕನ್ನಡ ಸಾಹಿತ್ಯ ಸಮ್ಮೇಳನಗಳು ಜಾತ್ರೆಯ ಸ್ವರೂಪವನ್ನು ಪಡೆದಿವೆ. ಇದರ ಬದಲು ಎರಡು ವರ್ಷಕ್ಕೊಮ್ಮೆ ಸಮ್ಮೇಳನ ಆಯೋಜಿಸಿ, ಯಾವ ಜಿಲ್ಲೆ ಸಮ್ಮೇಳನದ ಆತಿಥ್ಯ ವಹಿಸುತ್ತದೆಯೋ ಆ ಜಿಲ್ಲೆಯಲ್ಲಿ ಆಯೋಜಕರು ಜೋಳಿಗೆ ಹಿಡಿದು ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸಿ, ಆ ಹಣದಲ್ಲೇ ಅಚ್ಚುಕಟ್ಟಾಗಿ ಸಮ್ಮೇಳನ ನಡೆಸಬೇಕು. ಉಳಿದ ಹಣವನ್ನು ಕನ್ನಡದ ಕೆಲಸಕ್ಕಾಗಿ ಪರಿಷತ್ತಿಗೆ ಕೊಡುವ ಪರಿಪಾಟ ಪ್ರಾರಂಭಿಸಬೇಕು. ಇದರಿಂದ ಹಳ್ಳಿ, ಪಟ್ಟಣಗಳ ಎಲ್ಲ ಸ್ತರಗಳಲ್ಲಿ ಕನ್ನಡದ ಬಗ್ಗೆ ಜಾಗೃತಿ, ಅಭಿಮಾನ, ಕರ್ತವ್ಯದ ಅರಿವು ಮೂಡಿ ಭಾಷೆಯ ಬಲವರ್ಧನೆ ಆಗಬಹುದು.

ರವಿ ಯಲಿಗಾರ, ಮುನವಳ್ಳಿ

ರೈತ ಸಂಘದ ಇತಿಹಾಸದತ್ತ ತಿರುಗಿ ನೋಡಿ

‘ರೈತರು ಚುನಾವಣೆಗೆ ಸ್ಪರ್ಧಿಸಬೇಕು’ ಎಂದು ರೈತ ಸಂಘಗಳ ಏಕೀಕರಣ ಸಮಿತಿಯ ರಾಜ್ಯ ಸಂಚಾಲಕ ಪಚ್ಚೆ ನಂಜುಂಡಸ್ವಾಮಿ ಕರೆ ನೀಡಿದ್ದಾರೆ (ಪ್ರ.ವಾ., ಏ. 24). ಆದರೆ ರೈತರು ಚುನಾವಣಾ ಅಖಾಡಕ್ಕೆ ಇಳಿಯಬೇಕಾದರೆ ರೈತ ಸಂಘದ ಇತಿಹಾಸವನ್ನೊಮ್ಮೆ ತಿರುಗಿ ನೋಡಬೇಕು.

ಒಂದು ಕಾಲದಲ್ಲಿ ನಮ್ಮ ರಾಜ್ಯದಲ್ಲಿ ರೈತ ಸಂಘ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹಸಿರು ಶಾಲುಗಳನ್ನು ನೋಡಿದೊಡನೆ ಅಧಿಕಾರಿಗಳು, ರಾಜಕಾರಣಿಗಳು ಬೆಚ್ಚಿ ಬೀಳುತ್ತಿದ್ದರು. ರೈತ ಸಂಘದವರು ಹೋರಾಟಕ್ಕೆ ಕರೆ ಕೊಟ್ಟರೆ ಅಪಾರ ಸ್ಪಂದನ ದೊರೆಯುತ್ತಿತ್ತು. ಅಂತಹ ಒಂದು ಉತ್ತಮ ಸ್ಥಿತಿಯಲ್ಲಿದ್ದ ರೈತ ಸಂಘ ಯಾವಾಗ ಚುನಾವಣಾ ರಾಜಕೀಯಕ್ಕೆ ಇಳಿಯಲು ಶುರುಮಾಡಿತೋ ಅಲ್ಲಿಂದಲೇ ಅದರ ಪತನದ ಹಾದಿ ತೆರೆದುಕೊಳ್ಳತೊಡಗಿತು. ಹೇಗಾದರೂ ಮಾಡಿ ರೈತ ಸಂಘವನ್ನು ಒಡೆದು ಅದನ್ನು ದುರ್ಬಲಗೊಳಿಸಬೇಕೆನ್ನುವ ಅಧಿಕಾರಸ್ಥರ ಆಸೆ ಕೈಗೂಡುವ ಹಾದಿ ಸುಗಮವಾಯಿತು.

ರೈತ ಸಂಘ ಮತ್ತೆ ಗತಕಾಲದ ವೈಭವವನ್ನು ಪಡೆಯಬೇಕಾದರೆ ಅದರ ನೇತೃತ್ವ ವಹಿಸುವವರು ಸ್ವಹಿತಾಸಕ್ತಿಗಳನ್ನು ಬದಿಗೊತ್ತಿ, ರಾಜ್ಯದ ಎಲ್ಲಾ ಭಾಗಗಳ ರೈತರ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕವಾದ ಹಾಗೂ ವಸ್ತುನಿಷ್ಠವಾದ ಹೋರಾಟವನ್ನು ಕೈಗೊಳ್ಳಬೇಕು. ಆಗಮಾತ್ರ ರೈತರ ಸಮಸ್ಯೆಗಳು ಸ್ವಲ್ಪಮಟ್ಟಿಗಾದರೂ ಪರಿಹಾರ ಕಾಣಬಹುದು. ಅಧಿಕಾರ ಸಿಕ್ಕೊಡನೆ ರೈತ ನಾಯಕರು ಹೇಗೆ ವರ್ತಿಸುತ್ತಾರೆ ಎಂಬುದಕ್ಕೆ ಈಗಾಗಲೇ ಕೆಲವು ನಿದರ್ಶನಗಳು ನಮ್ಮ ಕಣ್ಣ ಮುಂದಿವೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ರಸ್ತೆಗಳಲ್ಲಿ ಮಿತಿಮೀರುತ್ತಿದೆ ಶಬ್ದಮಾಲಿನ್ಯ

ತಲೆ ಚಿಟ್ಟು ಹಿಡಿಸುವ ವಾಹನಗಳ ಹಾರ್ನ್ ಹಾವಳಿ ನಿವಾರಿಸಲು ಚಿಪ್ ಜೋಡಿಸುವ ಪರಿಹಾರವನ್ನು ನಾಗೇಶ ಹೆಗಡೆ ಸೂಚಿಸಿದ್ದಾರೆ (ವಾ.ವಾ., ಏ. 24). ಆದರೆ ವಾಹನಗಳ ಹಾರ್ನ್ ಹಾವಳಿ ಮತ್ತು ಮೈಕ್ ಹಾವಳಿ ನಿಯಂತ್ರಿಸಲು ಸಾರಿಗೆ ಇಲಾಖೆ ಅಧಿಕಾರಿಗಳು ಬಿಗಿಯಾದ ಕ್ರಮ ಕೈಗೊಳ್ಳಬೇಕಿದೆ. ಈಗ ಸಣ್ಣಪುಟ್ಟ ವ್ಯಾಪಾರಿಗಳು ಸಹ ವಾಹನಗಳಿಗೆ ಮೈಕ್ ಹಾಕಿಕೊಂಡು ರಸ್ತೆಗೆ ಇಳಿಯುತ್ತಾರೆ. ಇದರಿಂದ ರಸ್ತೆಗಳಲ್ಲಿನ ಶಬ್ದಮಾಲಿನ್ಯ ತುಂಬ ಕಿರಿಕಿರಿ ಉಂಟುಮಾಡುತ್ತದೆ. ಕೆಲವು ರೈತರು ಕೂಡ ತಮ್ಮ ಟ್ರ್ಯಾಕ್ಟರ್‌ಗಳಿಗೆ ಮೈಕ್ ಅಳವಡಿಸಿಕೊಂಡಿದ್ದಾರೆ. ಜೋರು ಧ್ವನಿಯಲ್ಲಿ ಹಾಡುಗಳನ್ನು ಹಾಕಿಕೊಂಡು ಅವರು ರಸ್ತೆಯಲ್ಲಿ ಸಾಗುತ್ತಾರೆ. ಹೀಗಾಗಿ, ವಾಹನಗಳ ಶಬ್ದಮಾಲಿನ್ಯದ ಹಾವಳಿ ಹೇಳತೀರದಾಗಿದೆ. ಆದ್ದರಿಂದ ಸಾರಿಗೆ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಗಂಭೀರವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪಾನ್‌ಮಸಾಲಾ ಪ್ರಿಯರಿಗೆ ಸ್ವಚ್ಛತೆಯ ಅರಿವಿರಲಿ

ಪಾನ್‌ಮಸಾಲಾ ತಿಂದು ಸಾರ್ವಜನಿಕ ಸ್ಥಳಗಳಲ್ಲಿ ಉಗಿಯುವುದು ದೇಶದಾದ್ಯಂತ ಸಾಮಾನ್ಯವಾಗಿ ಕಂಡುಬರುವ ಒಂದು ಪಿಡುಗಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಉಗಿದವರಿಗೆ ಸರ್ಕಾರ ದಂಡ ವಿಧಿಸಿದರೂ ಪ್ರಯೋಜನಆಗುತ್ತಿಲ್ಲ. ಆಸ್ಪತ್ರೆ, ಬಸ್ ನಿಲ್ದಾಣ, ರೈಲು ನಿಲ್ದಾಣ, ಸಾರ್ವಜನಿಕ ಶೌಚಾಲಯ, ಪಾದಚಾರಿ ಮಾರ್ಗಗಳಂಥ ಸ್ಥಳಗಳು ಈ ಪಿಡುಗಿನಿಂದಾಗಿ ಹಾಳಾಗಿ ಹೋಗುತ್ತಿವೆ. ಹಾಗಾಗಿ, ಈ ಎಲ್ಲ ಸ್ಥಳಗಳು ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪಾನ್‌ಮಸಾಲಾ ತಿಂದು ಎಲ್ಲೆಂದರಲ್ಲಿ ಉಗಿಯುವವರು ಕಂಡಲ್ಲಿ ಅರಿವು ಮೂಡಿಸಲು ಪ್ರಯತ್ನಿಸೋಣ. ಸಾರ್ವಜನಿಕ ಸ್ಥಳಗಳ ಸ್ವಚ್ಛತೆಗೆ ಕೈ ಜೋಡಿಸೋಣ. ಯಾರು ಸ್ವಚ್ಛತೆಗೆ ಮಹತ್ವ ಕೊಡುವರೋ ಅವರ ಜೀವನ ಮತ್ತು ಆದರ್ಶಗಳು ಯಾವಾಗಲೂ ಎಲ್ಲರಿಗೂ ಸ್ಫೂರ್ತಿಯಾಗಿ ಇರುತ್ತವೆ.

ಮನೋಹರ್, ಉಪ್ಪಳ, ಸಿಂಧನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪಾಕ್‌ಗೆ ಹೊಡೆತ ನೀಡುವುದೇ?

ಸಿಂಧೂ ಜಲ ಒಪ್ಪಂದ ಮೊದಲ ಬಾರಿಗೆ ಅಮಾನತು

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತ್ಯುತ್ತರವಾಗಿ ಪಾಕಿಸ್ತಾನದ ವಿರುದ್ಧ ಭಾರತವು ಹಲವು ಕ್ರಮಗಳನ್ನು ಕೈಗೊಂಡಿದೆ. ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದೆ, ರಾಜತಾಂತ್ರಿಕ ಸಂಬಂಧವನ್ನು ಕಡಿತಗೊಳಿಸಿದೆ, ಅಟ್ಟಾರಿ–ವಾಘಾ ಗಡಿ ಮುಚ್ಚಿದೆ ಹಾಗೂ ಪಾಕಿಸ್ತಾನದ ಪ್ರಜೆಗಳಿಗೆ ಭಾರತದ ವೀಸಾ ನೀಡದಿರುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. ಭಾರತದಲ್ಲಿ ಈ ಹಿಂದೆ ಭಯೋತ್ಪಾದಕರ ದಾಳಿ ನಡೆದಾಗಲೂ ಭಾರತ ಇಂಥದ್ದೇ ಹಲವು ಕ್ರಮಗಳನ್ನು ಕೈಗೊಂಡಿತ್ತು. ಈಗ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರಗಳಿಂದ ಪಾಕಿಸ್ತಾನದ ಮೇಲೆ ವಾಸ್ತವವಾಗಿ ಎಷ್ಟರ ಮಟ್ಟಿಗೆ ಪರಿಣಾಮ ಉಂಟಾಗಲಿದೆ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ

ಪ್ರಜಾವಾಣಿ ವಾರ್ತೆ

1947ರಲ್ಲಿ ಭಾರತದಿಂದ ಪಾಕಿಸ್ತಾನ ಬೇರ್ಪಟ್ಟ ನಂತರ ಎರಡೂ ದೇಶಗಳ ನಡುವೆ ನಾಲ್ಕು ಯುದ್ಧಗಳು ನಡೆದಿವೆ. ಲೆಕ್ಕವಿಲ್ಲದಷ್ಟು ಬಾರಿ ಸಂಘರ್ಷ, ಆರೋಪ ಪ್ರತ್ಯಾರೋಪಗಳು, ವಾಗ್ವಾದಗಳು ವರದಿಯಾಗಿವೆ. ಭಾರತದಲ್ಲಿ ಅನೇಕ ಭಯೋತ್ಪಾದನಾ ಕೃತ್ಯಗಳು ಘಟಿಸಿವೆ. ಭಾರತವು ಪಾಕಿಸ್ತಾನದ ವಿರುದ್ಧ ಹಲವು ಬಾರಿ ವಿವಿಧ ರೀತಿಯ ಪ್ರತೀಕಾರದ ಕ್ರಮಗಳನ್ನು ಕೈಗೊಂಡಿದೆ. 2016ರಲ್ಲಿ ಉರಿ ದಾಳಿಗೆ ಪ್ರತ್ಯುತ್ತರವಾಗಿ ಭಾರತವು ಪಾಕಿಸ್ತಾನದಲ್ಲಿನ ಉಗ್ರ ನೆಲೆಗಳ ಮೇಲೆ 'ಸರ್ಜಿಕಲ್ ಸ್ಟ್ರೈಕ್' ನಡೆಸಿತ್ತು. 2019ರಲ್ಲಿ ಪುಲ್ವಾಮಾ ದಾಳಿಗೆ ಪ್ರತ್ಯುತ್ತರವಾಗಿ ಪಾಕಿಸ್ತಾನದ ಬಾಲಾಕೋಟ್‌ನ ಉಗ್ರ ನೆಲೆಗಳ ಮೇಲೆ ವಾಯುದಾಳಿ ನಡೆಸಿತ್ತು. ಹಲವು ಬಾರಿ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಂಡಿದೆ. ವೀಸಾ ನಿಯಮಗಳನ್ನು ಬಿಗಿಗೊಳಿಸಿದೆ. ಆದರೆ, ಸಿಂಧೂ ಜಲ ಒಪ್ಪಂದವನ್ನು ಅಮಾನತು ಮಾಡಿರುವುದು ಇದೇ ಮೊದಲು.

ಸಿಂಧೂ ನದಿ ವ್ಯವಸ್ಥೆಯು ಸಿಂಧೂ ನದಿ ಮತ್ತು ಅದರ ಐದು ಉಪನದಿಗಳನ್ನು (ಸಟ್ಲೇಜ್, ರಾವಿ, ಬ್ಯಾಸ್, ಝೀಲಮ್, ಚಿನಾಬ್) ಒಳಗೊಂಡಿದೆ. ಹಿಮಾಲಯದಲ್ಲಿ ಹುಟ್ಟುವ ಇವು ಭಾರತದಲ್ಲಿ ಹರಿಯುತ್ತಾ ಪಾಕಿಸ್ತಾನ ಪ್ರವೇಶಿಸಿ ನಂತರ ಅಂತಿಮವಾಗಿ ಅರಬ್ಬಿ ಸಮುದ್ರ ಸೇರುತ್ತವೆ. ಸಿಂಧೂ ನದಿ ವ್ಯವಸ್ಥೆ ಎರಡೂ ರಾಷ್ಟ್ರಗಳಿಗೂ ಮಹತ್ವದ್ದು. ಕೃಷಿ, ನೀರಾವರಿ ಉದ್ದೇಶಕ್ಕೆ ಎರಡೂ ರಾಷ್ಟ್ರಗಳು ಬಳಸಿಕೊಳ್ಳುತ್ತಿವೆ.

ನೀರಿನ ಹಂಚಿಕೆಯ ಸಂಬಂಧ ಸುದೀರ್ಘ ಒಂಬತ್ತು ವರ್ಷಗಳ ಮಾತುಕತೆಯ ನಂತರ, ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ 1960ರ ಸೆ.19ರಂದು ಕರಾಚಿಯಲ್ಲಿ ಸಿಂಧೂ ಜಲ ಒಪ್ಪಂದಕ್ಕೆ ಭಾರತ ಮತ್ತು ಪಾಕಿಸ್ತಾನ ಸಹಿ ಹಾಕಿದ್ದವು. ಪೂರ್ವ ನದಿಗಳ ಪಾಲು ಸಂಪೂರ್ಣವಾಗಿ ಭಾರತದ್ದಾದರೆ, ಪಶ್ಚಿಮ ನದಿಗಳ ನೀರು ಪಾಕಿಸ್ತಾನಕ್ಕೆ ಸೇರುತ್ತದೆ ಎನ್ನುವುದು ಒಪ್ಪಂದದ ತಿರುಳು. ಪಶ್ಚಿಮದ ನದಿಗಳ ನೀರಿನಲ್ಲಿ ಭಾರತವು ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಉದ್ದೇಶಗಳಿಗೆ ಬಳಸಲು ಅವಕಾಶವಿದೆ. ಅಲ್ಲದೆ 34 ಲಕ್ಷ ಎಕರೆ ಅಡಿಗಳಷ್ಟು ಪ್ರಮಾಣದ ನೀರನ್ನು ಸಂಗ್ರಹಿಸಲೂ ಒಪ್ಪಂದ ಅವಕಾಶ ನೀಡುತ್ತದೆ.

ನಿಯಂತ್ರಿತ ಹರಿವಿಗೆ ತಡೆ: ಪಶ್ಚಿಮದ ನದಿಗಳಿಂದ ಪಾಕಿಸ್ತಾನಕ್ಕೆ ಸ್ವಾಭಾವಿಕವಾಗಿ ಹರಿದುಹೋಗುವ ನೀರಿಗೆ ಅಡ್ಡಿಯೇನೂ ಇಲ್ಲ. ಆದರೆ, ನಿಯಂತ್ರಿತ ಹರಿವಿನ ಮೂಲಕ ಸಾಗುವ ನೀರನ್ನು (ಚಿನಾಬ್‌ಗೆ ಕಟ್ಟಲಾಗಿರುವ ಬಗ್ಲಿಹಾರ್‌ನಂಥ ಹಲವು ಅಣೆಕಟ್ಟುಗಳು ಮತ್ತು ವಿದ್ಯುತ್ ಯೋಜನೆಗಳ ನೀರು) ಸ್ಥಗಿತಗೊಳಿಸಲು ಭಾರತಕ್ಕೆ ಸಾಧ್ಯವಿದೆ. ಈ ನೀರು ಪಾಕಿಸ್ತಾನದ ನೀರಾವರಿ ಮತ್ತು ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ.

ಪಾಕಿಸ್ತಾನಕ್ಕೆ ಹೊಡೆತ ನೀಡಬಹುದಾದ ಮತ್ತೊಂದು ಸಂಗತಿ ಎಂದರೆ, ಪಶ್ಚಿಮ ನದಿಗಳಿಗೆ ಸಂಬಂಧಿಸಿ ಪಕಲ್ ದುಲ್ ಮತ್ತು ಸವಾಲ್‌ಕೋಟ್‌ನಂಥ ಅಣೆಕಟ್ಟುಗಳ ನಿರ್ಮಾಣ ಮತ್ತಿತರ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದು. ಇದರಿಂದ ಹೆಚ್ಚು ನೀರು ಸಂಗ್ರಹ ಮಾಡಲು ಅವಕಾಶವಾಗಲಿದ್ದು, ಭವಿಷ್ಯದಲ್ಲಿ ನದಿ ನೀರಿನ ವಿಚಾರದಲ್ಲಿ ಭಾರತಕ್ಕೆ ಹೆಚ್ಚು ಹಿಡಿತ ಸಿಗಲಿದೆ.

ಪರಿಶೀಲನೆಗೆ ಅನುಮತಿಯಿಲ್ಲ: ಪುಲ್ವಾಮಾ ದಾಳಿಯ ನಂತರ 2019ರಲ್ಲಿ ಭಾರತವು ಎಂಟು ಜಲವಿದ್ಯುತ್ ಯೋಜನೆಗಳಿಗೆ ಅನುಮೋದನೆ ನೀಡಿತ್ತು. ಸಿಂಧೂ ಜಲಾನಯನ ಪ್ರದೇಶದಲ್ಲಿ ಭಾರತ ಕೈಗೆತ್ತಿಕೊಳ್ಳುವ ಯೋಜನೆಗಳ ಪರಿಶೀಲನೆಗೆ ಬರಲು ಪಾಕಿಸ್ತಾನದ ಅಧಿಕಾರಿಗಳಿಗೆ ಅವಕಾಶ ನೀಡುವುದೂ ಒಪ್ಪಂದದ ಒಂದು ಭಾಗ. ಇನ್ನು ಮುಂದೆ, ಒಪ್ಪಂದಕ್ಕೆ ಭಾರತ ಬದ್ಧವಾಗಿರುವುದಿಲ್ಲವಾದ್ದರಿಂದ ಭಾರತದ ಅಣೆಕಟ್ಟು, ಜಲಾಶಯಗಳ ನಿರ್ಮಾಣಕ್ಕೆ ಮುಂಚೆಯೇ ಅವುಗಳ ವಿನ್ಯಾಸವನ್ನು ಪಾಕಿಸ್ತಾನಕ್ಕೆ ತೋರಿಸಿ ಅನುಮತಿ ಪಡೆಯುವ ಅಗತ್ಯವಿಲ್ಲ.


ಕಿಶನ್‌ಗಂಗಾ ಸೇರಿದಂತೆ ಪಶ್ಚಿಮ ನದಿಗಳಿಗೆ ಕಟ್ಟಲಾಗಿರುವ ಜಲಾಶಯಗಳ ಹೂಳೆತ್ತುವ ಕಾರ್ಯವನ್ನು ಆಗಸ್ಟ್‌ನಲ್ಲಿ (ಮಳೆಗಾಲ) ಮಾತ್ರವೇ ಮಾಡಬೇಕು ಎನ್ನುವುದು ಒಪ್ಪಂದದ ಮತ್ತೊಂದು ಅಂಶ. ಆದರೆ, ಒಪ್ಪಂದ ಅಮಾನತುಗೊಂಡಿರುವುದರಿಂದ ಯಾವ ಋತುವಿನಲ್ಲಾದರೂ ಹೂಳು ತೆಗೆದು, ಜಲಾಶಯಗಳನ್ನು ತುಂಬಿಸಿಕೊಳ್ಳಬಹುದಾಗಿದೆ.

ದತ್ತಾಂಶ ಹಂಚಿಕೆಗೂ ತಡೆ: ನೀರಿನ ಹರಿವಿಗೆ ಸಂಬಂಧಿಸಿದ ದತ್ತಾಂಶವನ್ನು ಹಂಚಿಕೊಳ್ಳಬೇಕು ಎನ್ನುವುದು ಒಪ್ಪಂದದಲ್ಲಿನ ಮತ್ತೊಂದು ಷರತ್ತು. ಅದರ ಪ್ರಕಾರ, ಕಾಲುವೆ, ಜಲಾಶಯ, ಅಣೆಕಟ್ಟುಗಳ ನೀರಿನ ಒಳಹರಿವು ಮತ್ತು ಹೊರಹರಿವು, ಬಳಕೆಯ ಪ್ರಮಾಣ, ಪ್ರವಾಹದ ಸ್ಥಿತಿಗತಿ ಬಗ್ಗೆ ಭಾರತವು ಪಾಕಿಸ್ತಾನದೊಂದಿಗೆ ಮಾಹಿತಿ ಹಂಚಿಕೊಳ್ಳಬೇಕು. ಮಳೆಗಾಲದಲ್ಲಿ ಅಪಾರ ಪ್ರಮಾಣದ ನೀರು ನದಿಗಳಲ್ಲಿ ಹರಿಯುವುದರಿಂದ ಈ ಮಾಹಿತಿ ಪಾಕಿಸ್ತಾನಕ್ಕೆ ಬಹಳ ಮುಖ್ಯವಾದುದಾಗಿದೆ. ಒಪ್ಪಂದ ಅಮಾನತಿನಲ್ಲಿರುವುದರಿಂದ, ಭಾರತವು ಇನ್ನು ಮುಂದೆ ಮಾಹಿತಿ ಹಂಚಿಕೊಳ್ಳದೇ ಇರಬಹುದಾಗಿದೆ.

1960 ಸೆ.19 ಸಿಂಧೂ ಜಲ ಒಪ್ಪಂದಕ್ಕೆ ಭಾರತ, ಪಾಕಿಸ್ತಾನ ಸಹಿ ಹಾಕಿದ ದಿನಾಂಕ

ಭಾರತದ ಪಾಲಿನ ನದಿಗಳು ಪೂರ್ವದಲ್ಲಿರುವ ರಾವಿ, ಬ್ಯಾಸ್ ಮತ್ತು ಸಟ್ಲೇಜ್

ಪಾಕಿಸ್ತಾನ ಪಾಲಿನ ನದಿಗಳು ಪಶ್ಚಿಮದಲ್ಲಿರುವ ಸಿಂಧೂ, ಝೀಲಮ್ ಮತ್ತು ಚಿನಾಬ್



13.5 ಕೋಟಿ ಎಕರೆ ಅಡಿ — ಪಾಕಿಸ್ತಾನಕ್ಕೆ ಹಂಚಿಕೆ ಮಾಡಲಾಗಿರುವ ನೀರಿನ ಪ್ರಮಾಣ (ಪಶ್ಚಿಮದ ಮೂರು ನದಿಗಳಲ್ಲಿ ವಾರ್ಷಿಕವಾಗಿ ಇಷ್ಟು ನೀರು ಹರಿಯುತ್ತದೆ)

3.3 ಕೋಟಿ ಎಕರೆ ಅಡಿ — ಭಾರತಕ್ಕೆ ಹಂಚಿಕೆ ಮಾಡಲಾಗಿರುವ ನೀರಿನ ಪ್ರಮಾಣ (ಪೂರ್ವದ ಮೂರು ನದಿಗಳಲ್ಲಿ ವಾರ್ಷಿಕವಾಗಿ ಸರಾಸರಿ ಇಷ್ಟು ನೀರು ಹರಿಯುತ್ತದೆ)

* ಒಂದು ಎಕರೆ ಅಡಿ ನೀರು ಅಂದರೆ, ಒಂದು ಎಕರೆ ಪ್ರದೇಶದಲ್ಲಿ ಒಂದು ಅಡಿಯಷ್ಟು ನಿಲ್ಲುವ ನೀರಿನ ಪ್ರಮಾಣ (1,233.48 ಘನ ಅಡಿ)

ದೀರ್ಘಾವಧಿಯಲ್ಲಿ ಪರಿಣಾಮ

ಈಗಾಗಲೇ ಆರ್ಥಿಕ ಹಿನ್ನಡೆ ಅನುಭವಿಸುತ್ತಿರುವ ಪಾಕಿಸ್ತಾನಕ್ಕೆ ಭಾರತದ ನಿರ್ಧಾರದಿಂದ ತಕ್ಷಣಕ್ಕೆ ಹೊಡೆತ ಬೀಳದಿದ್ದರೂ ದೀರ್ಘಾವಧಿಯಲ್ಲಿ ಅದರ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಆದರೆ, ನದಿಗಳ ನೀರಿನ ಆಧಾರದಲ್ಲಿ ಭಾರತ ಕೈಗೆತ್ತಿಕೊಂಡಿರುವ ಹಲವು ಅಣೆಕಟ್ಟು ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲದೇ ಇರುವುದರಿಂದ ತನ್ನ ಪಾಲಿನ ಸಂಪೂರ್ಣ ನೀರನ್ನು ಬಳಸಿಕೊಳ್ಳುವುದಕ್ಕೆ, ಹೆಚ್ಚು ನೀರು ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ, ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ವೇಗ ನೀಡಿ, ಬೇಗ ಪೂರ್ಣಗೊಳಿಸಿ ಹೆಚ್ಚಿನ ಪ್ರಮಾಣದ ನೀರನ್ನು ಹಿಡಿದಿಡಲು ಸಾಧ್ಯವಾದರೆ ಅದು ಪಾಕಿಸ್ತಾನದ ಮೇಲೆ ಪರಿಣಾಮ ಬೀರಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.


ಏಕಪಕ್ಷೀಯ ಅಮಾನತು ಸಾಧ್ಯವೇ?

ಸಿಂಧೂ ಜಲ ಒಪ್ಪಂದದ ಪ್ರಕಾರ, ಅದರಲ್ಲಿರುವ ಯಾವುದೇ ಅಂಶವನ್ನು ಬದಲಾಯಿಸಬೇಕಾದರೂ ಎರಡೂ ದೇಶಗಳಲ್ಲದೆ ವಿಶ್ವಬ್ಯಾಂಕ್ ಅನುಮತಿಯೂ ಬೇಕು. ಒಪ್ಪಂದದಲ್ಲಿ ಕೆಲವು ನಿಯಮಗಳನ್ನು ಬದಲಾಯಿಸುವ ಅಗತ್ಯದ ಬಗ್ಗೆ ಭಾರತ ಕಳೆದ ವರ್ಷ ಪಾಕಿಸ್ತಾನಕ್ಕೆ ನೋಟಿಸ್ ಕೂಡ ನೀಡಿತ್ತು. ಹೀಗಿರುವಾಗ ಭಾರತವು ಈಗ ಏಕಪಕ್ಷೀಯವಾಗಿ ಅದನ್ನು ಅಮಾನತಿನಲ್ಲಿಡುವ ತೀರ್ಮಾನ ಕೈಗೊಳ್ಳಬಹುದೇ ಎಂಬ ಪ್ರಶ್ನೆ ಉದ್ಭವವಾಗಿದೆ. ಭಾರತದ ನಿರ್ಧಾರವು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಎಂದು ಪಾಕಿಸ್ತಾನ ಆರೋಪಿಸಿದ್ದು, ಅಲ್ಲಿನ ತಜ್ಞರು, ಮಾಜಿ ರಾಜತಾಂತ್ರಿಕ ಅಧಿಕಾರಿಗಳು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಟ್ಟಾರಿ ಗಡಿಯ ಮೂಲಕ ವಹಿವಾಟು (ಕೋಟಿಗಳಲ್ಲಿ)

2019-20	2020-21	2021-22	2022-23	2023-24
₹2,772	₹2,640	₹3,002	₹2,258	₹3,887

ಗಡಿಯಲ್ಲಿ ಸಾಗಿದ ಸರಕು ವಾಹನ, ಜನರು



ಗಡಿ ಬಂದ್: ವ್ಯಾಪಾರದ ಮೇಲೆ ಪರಿಣಾಮ

ಪಾಕಿಸ್ತಾನಕ್ಕೆ ರಸ್ತೆ ಮೂಲಕ ಸಂಪರ್ಕ ಕಲ್ಪಿಸುವ, ಅಟ್ಟಾರಿ – ವಾಘಾ ಗಡಿಯನ್ನು ತಕ್ಷಣದಿಂದ ಮುಚ್ಚುವ ಘೋಷಣೆಯನ್ನೂ ಭಾರತ ಮಾಡಿದೆ. ಪಂಜಾಬ್ ರಾಜಧಾನಿ ಅಮೃತಸರದಿಂದ 28 ಕಿ.ಮೀ ದೂರದಲ್ಲಿರುವ ಅಟ್ಟಾರಿ ಗಡಿಯು ಭಾರತ ಮತ್ತು ಪಾಕಿಸ್ತಾನದ ನಡುವೆ ಕಾನೂನುಬದ್ಧ ಸಂಚಾರಕ್ಕೆ ಇರುವ ಏಕೈಕ ರಸ್ತೆ ಮಾರ್ಗ. ಪಾಕಿಸ್ತಾನ ಮಾತ್ರವಲ್ಲದೆ ಅಫ್ಗಾನಿಸ್ತಾನದೊಂದಿಗಿನ ಸರಕುಗಳ ವ್ಯಾಪಾರಕ್ಕೂ ಇದೇ ಗಡಿಯನ್ನು ಬಳಸಲಾಗುತ್ತದೆ. ಪ್ರತಿ ವರ್ಷ ಸಾವಿರಾರು ಮಂದಿ ಈ ಗಡಿಯ ಮೂಲಕ ಉಭಯ ದೇಶಗಳ ನಡುವೆ ಪ್ರಯಾಣವನ್ನೂ ಮಾಡುತ್ತಾರೆ. ಈ ಗಡಿಯನ್ನು ಮುಚ್ಚಿರುವುದು ಉಭಯ ದೇಶಗಳ ನಡುವಿನ ವ್ಯಾಪಾರಕ್ಕೆ ಮಾತ್ರವಲ್ಲದೆ, ಭಾರತದೊಂದಿಗೆ ಅಫ್ಗಾನಿಸ್ತಾನ ಮಾಡುತ್ತಿರುವ ವಹಿವಾಟಿನ ಮೇಲೂ ಪರಿಣಾಮ ಬೀರಲಿದೆ. 2018ರ ಬಳಿಕ ಭಾರತ ಮತ್ತು ಪಾಕಿಸ್ತಾನದ ನಡುವೆ ದ್ವಿಪಕ್ಷೀಯ ಸಂಬಂಧ ಹಳಸಿದ್ದರೂ ಸಣ್ಣ ಪ್ರಮಾಣದ ವ್ಯಾಪಾರ ಮುಂದುವರಿದಿತ್ತು.

ಆಧಾರ: ಪಿಟಿಐ, ರಾಯಿಟರ್ಸ್, ಭಾರತದ ವಿದೇಶಾಂಗ ಸಚಿವಾಲಯದ ವೆಬ್‌ಸೈಟ್, ಭಾರತೀಯ ಭೂ ಬಂದರುಗಳ ಪ್ರಾಧಿಕಾರ

ರಾಷ್ಟ್ರೀಯ

ಕಾಶ್ಮೀರಿಗಳ ಮೇಲೆ ದೌರ್ಜನ್ಯ ನೆರವು ಕೋರಿದ ಅಬ್ದುಲ್ಲಾ

ಶ್ರೀನಗರ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ಭೀಕರ ದಾಳಿಯ ಬಳಿಕ ದೇಶದ ವಿವಿಧೆಡೆ ಕಾಶ್ಮೀರಿಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂಬ ಆರೋಪಗಳು ವ್ಯಕ್ತವಾಗಿವೆ.

ಇದಕ್ಕೆ ಪ್ರತಿಕ್ರಿಯಿಸಿರುವ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, ಈ ವಿಷಯದ ಕುರಿತು ಇತರ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಂಪರ್ಕದಲ್ಲಿ ಇರುವುದಾಗಿ ತಿಳಿಸಿದ್ದಾರೆ.



ಒಮರ್

'ಕಾಶ್ಮೀರಿ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿರುವ ಕುರಿತು ಯಾವ ರಾಜ್ಯಗಳಿಂದ ವರದಿಗಳು ಬಂದಿವೆಯೋ, ಅಲ್ಲಿನ ಮುಖ್ಯಮಂತ್ರಿಗಳ ಜತೆ ನಾನು ಸಂಪರ್ಕದಲ್ಲಿದ್ದು, ವಿದ್ಯಾರ್ಥಿಗಳ ಬಗ್ಗೆ ವಿಶೇಷ ಕಾಳಜಿ ತೋರುವಂತೆ ಕೋರಿದ್ದೇನೆ' ಎಂದು ಅಬ್ದುಲ್ಲಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೇಶದ ವಿವಿಧೆಡೆ ಕಾಶ್ಮೀರಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಂಕಷ್ಟದ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊಗಳು ಬಿತ್ತರವಾದ ಬೆನ್ನಲ್ಲೇ, ಅಬ್ದುಲ್ಲಾ ಅವರು ಈ ಕುರಿತು ಪ್ರತಿಕ್ರಿಯೆ ನೀಡಿದ್ದಾರೆ.

ಸಹಾಯವಾಣಿ: ದೆಹಲಿಯಲ್ಲಿರುವ ಜಮ್ಮು ಮತ್ತು ಕಾಶ್ಮೀರದ ರೆಸಿಡೆಂಟ್ ಕಮಿಷನ್ ಕಚೇರಿಯಲ್ಲಿ ಸಹಾಯವಾಣಿ ತೆರೆಯಲಾಗಿದ್ದು, ಅದು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುತ್ತದೆ.

ತೊಂದರೆಗೆ ಸಿಲುಕಿರುವ ಕಾಶ್ಮೀರಿಗಳು ಸಹಾಯವಾಣಿ ಸಂಖ್ಯೆಗಳಾದ 7303620090, 9682389265, 9419158581, 01124611108, 01124615475, 01124611157, 01126112021 ಮತ್ತು 01126112022 ಸಂಪರ್ಕಿಸಬಹುದು ಎಂದು ಜಮ್ಮು ಮತ್ತು ಕಾಶ್ಮೀರ ಸರ್ಕಾರ ತಿಳಿಸಿದೆ.

'ಪಾಕ್ ನಟನ ಸಿನಿಮಾ ಬಿಡುಗಡೆ ಇಲ್ಲ'

ನವದೆಹಲಿ (ಪಿಟಿಐ): ಪಾಕಿಸ್ತಾನದ ನಟ ಫವಾದ್ ಖಾನ್ ನಟಿಸಿರುವ 'ಅಬೀರ್ ಗುಲಾಲ್' ಸಿನಿಮಾವನ್ನು ಭಾರತದಲ್ಲಿ ಬಿಡುಗಡೆ ಮಾಡಲು ಅನುಮತಿ ನೀಡದಿರಲು ಸರ್ಕಾರ ನಿರ್ಧರಿಸಿದೆ ಎಂದು ಉನ್ನತ ಮೂಲಗಳು ಗುರುವಾರ ತಿಳಿಸಿವೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ಬೆನ್ನಲ್ಲೇ, ಪಾಕ್ ನಟನ ಸಿನಿಮಾ ಬಹಿಷ್ಕರಿಸುವಂತೆ ಆಗ್ರಹ ಕೇಳಿ ಬಂದಿತ್ತು.

ಫವಾದ್ ಖಾನ್ ಮತ್ತು ನಟಿ ವಾಣಿ ಕಪೂರ್ ನಟಿಸಿರುವ 'ಅಬೀರ್ ಗುಲಾಲ್' ಸಿನಿಮಾ ಮೇ 9ರಂದು ಬಿಡುಗಡೆ ಆಗಬೇಕಿತ್ತು.


ಪಾಕ್ ಕಲಾವಿದರ ಸಂಪೂರ್ಣ ನಿಷೇಧಕ್ಕೆ ಕರೆ: 'ಅಬೀರ್ ಗುಲಾಲ್' ನಿಷೇಧಕ್ಕೆ ಬೇಡಿಕೆ ಹೆಚ್ಚಾದ ಬೆನ್ನಲ್ಲೇ, 'ಪಶ್ಚಿಮ ಭಾರತ ಸಿನಿಮಾ ಉದ್ಯೋಗಿಗಳ ಸಂಘಟನೆ'ಯು (ಎಫ್‌ಡಬ್ಲ್ಯುಐಸಿಇ) ಪಾಕ್‌ನ ಎಲ್ಲ ನಟರು, ಕಲಾವಿದರು, ತಂತ್ರಜ್ಞರು ಮತ್ತು ಗಾಯಕರನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕರೆ ನೀಡಿದೆ.

'ದೇಶದ ಸಿನಿಮಾ ಮತ್ತು ಮನೋರಂಜನೆ ಉದ್ಯಮದಲ್ಲಿ ಪಾಕ್ ಮೂಲದ ಕಲಾವಿದರಿಗೆ ಯಾವುದೇ ರೀತಿಯ ಸಹಕಾರ ನೀಡದಂತೆ 2019ರ ಫೆಬ್ರುವರಿ 18ರಂದು ನಿರ್ದೇಶನಗಳನ್ನು ಹೊರಡಿಸಲಾಗಿತ್ತು. ಅದನ್ನು ನಾವು ಪುನರುಚ್ಚರಿಸುತ್ತೇವೆ' ಎಂದು ಎಫ್‌ಡಬ್ಲ್ಯುಐಸಿಇ ಅಧ್ಯಕ್ಷ ಬಿ.ಎನ್.ತಿವಾರಿ ಹೇಳಿದ್ದಾರೆ. ಭಯೋತ್ಪಾದಕರ ದಾಳಿಯನ್ನು ಭಾರತೀಯ ಸಿನಿಮಾ ಮತ್ತು ಟಿವಿ ನಿರ್ದೇಶಕರ ಸಂಘಟನೆ (ಐಎಫ್‌ಟಿಡಿಎ) ತೀವ್ರವಾಗಿ ಖಂಡಿಸಿದೆ.

ಅದಾಗ್ಯೂ, ನಟರಾದ ಫವಾದ್ ಖಾನ್ ಮತ್ತು ವಾಣಿ ಕಪೂರ್ ಅವರು ಭಯೋತ್ಪಾದಕ ದಾಳಿಯನ್ನು ಖಂಡಿಸಿದ್ದಾರೆ.

ಗೌತಮ್ ಗಂಭೀರ್‌ಗೆ ಬೆದರಿಕೆ ಸಂದೇಶ


ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ 'ಐಎಸ್‌ಐಎಸ್ ಕಾಶ್ಮೀರ' ಎನ್ನುವ ಹೆಸರಿನಿಂದ 'ನಾನು ನಿನ್ನನ್ನು ಕೊಲ್ಲುತ್ತೇನೆ' ಎಂದು ಎರಡು ಬಾರಿ ಬೆದರಿಕೆ ಇ–ಮೇಲ್ ಬಂದಿದೆ. ಹೀಗಾಗಿ, ಗೌತಮ್ ಅವರಿಗೆ ದೆಹಲಿ ಪೊಲೀಸರು ಭದ್ರತೆ ಒದಗಿಸಿದ್ದಾರೆ.



'ಪಹಲ್ಗಾಮ್‌ನಲ್ಲಿ ಭಯೋತ್ಪದಾಕರ ದಾಳಿ ನಡೆದ ದಿನವೇ ಗೌತಮ್ ಗಂಭೀರ್ ಅವರಿಗೆ ಬೆದರಿಕೆ ಸಂದೇಶ ಬಂದಿದೆ. ಈ ಬಗ್ಗೆ ಅವರೇ ನಮಗೆ ದೂರು ನೀಡಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಡಿಸಿಪಿ ಎಂ. ಹರ್ಷ ವರ್ಧನ್ ತಿಳಿಸಿದ್ದಾರೆ.

ಗೌತಮ್ ಗಂಭೀರ್ ಅವರಿಗೆ 2022ರಲ್ಲಿಯೂ ಇದೇ ಮಾದರಿಯಲ್ಲಿ ಬೆದರಿಕೆ ಸಂದೇಶ ಬಂದಿತ್ತು.

ಗುಂಡಣ್ಣ



ವಚನ ಮತ್ತು ವಂಚನೆ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

181

ಸುಖಿ, ಸಮೃದ್ಧ, ಸಂತೋಷದ ಜೀವನ ನಮ್ಮದಾಗಬೇಕು ಎನ್ನುವುದು ಎಲ್ಲರ ಬಯಕೆ. ನಾವು ದುಃಖಿಗಳಾಗಬೇಕು ಎಂದು ಯಾರಾದರೂ ಬಯಸುತ್ತಾರೇನು? ನಮ್ಮ ತಲೆ ನಿಶ್ಚಿಂತವಾಗಿರಬೇಕು, ಹೃದಯ ವಿಶಾಲವಾಗಿರಬೇಕು, ಮನಸ್ಸು ಪ್ರಸನ್ನವಾಗಿರಬೇಕು ಎಂದು ಬಯಸುತ್ತೇವೆ. ನೀವು ದೇವರ ಗುಡಿಗೆ ಹೋಗುವಾಗ ಕೈಯಲ್ಲಿ ಅರಳಿದ ಹೂವು ಹಿಡಿದುಕೊಂಡು ಒಳಗೆ ಬಾಡಿದ ಮನಸ್ಸು ಇದ್ದರೆ ದೇವರಿಗೆ ಸಂತೋಷ ಆಗೋದಿಲ್ಲ. ನಿಮ್ಮ ಕೈಯಲ್ಲಿ ಇರುವ ಹೂವು ಬಾಡಿರಲಿ. ಆದರೆ ನಿಮ್ಮ ಹೃದಯ ಅರಳಿರಬೇಕು. ಅದು ಸುಖೀ ಜೀವನ. ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ನೇಮ ಎಂದರು ಉರಿಲಿಂಗ ಪೆದ್ದಿಗಳು.

ಈ ಜಗತ್ತಿಗೆ ಬಂದ ಮೇಲೆ ಇದನ್ನು ಕೆಡಿಸಲಾರದಂತೆ ಇರುವುದೇ ಧರ್ಮ. ಕೆಡಿಸಿದರೆ ಅದು ಅಧರ್ಮ. ಈ ಜಗತ್ತಿನಲ್ಲಿರುವ ಪಶು ಪಕ್ಷಿ ಪ್ರಾಣಿಗಳಲ್ಲಿ ಯಾವುದೂ ಇಲ್ಲಿರುವುದನ್ನು ಕೆಡಿಸಿಲ್ಲ. ಅವು ಬಳಸುತ್ತವೆ ಅಷ್ಟೆ. ದೇವರು ಸೃಷ್ಟಿಸಿದ ಈ ನಿಸರ್ಗವನ್ನು ಹಾಳು ಮಾಡದಂತೆ ಇರುವುದೇ ನೀನು ಮಾಡಬೇಕಾದ ಕೆಲಸ. ಇನ್ನೂ ನಿನಗೆ ಏನಾದರೂ ಮಾಡಬೇಕು ಎಂದು ಅನ್ನಿಸಿದರೆ, ಈ ಸೃಷ್ಟಿಯನ್ನು ಇನ್ನಷ್ಟು ಸುಂದರ ಮಾಡುವವಂತಹ ಕೆಲಸಗಳನ್ನು ಮಾಡು ಅಷ್ಟೇ. ಗಿಡ ಕಡಿದರೆ ಅಧರ್ಮ. ಸಸಿ ನೆಟ್ಟರೆ ಧರ್ಮ. ಗುಡಿ ಕಟ್ಟೋದು ಮಾತ್ರ ಧರ್ಮ ಅಂತ ನಾವು ಅಂದುಕೊಂಡಿದ್ದೇವೆ. ಅದು ಸರಿಯಲ್ಲ. ಸಸಿ ನೆಡೋದು ಶ್ರೇಷ್ಠ ಧರ್ಮ.

ಈಗ ನೀವು ಒಂದು ಗುಡಿ ಕಟ್ಟಿದರೆ ಒಂದು ನಿರ್ದಿಷ್ಟ ಧರ್ಮದವರು ಮಾತ್ರ ಹೋಗುತ್ತಾರೆ. ಒಂದು ಮಸೀದಿ ಕಟ್ಟಿದರೆ, ಒಂದು ಚರ್ಚ್ ಕಟ್ಟಿದರೆ ಆಯಾ ಧರ್ಮದವರು ಮಾತ್ರ ಹೋಗುತ್ತಾರೆ. ಆದರೆ ಒಂದು ಗಿಡ ನೆಟ್ಟರೆ ಅದರ ನೆರಳಿನಲ್ಲಿ ಎಲ್ಲಾ ಧರ್ಮದವರೂ ಒಂದು ನಿಲ್ಲುತ್ತಾರೆ. ಒಂದು ಗಿಡ ಎಂದರೆ ಅದು ಮಾನವ ಧರ್ಮಪೀಠ ಇದ್ದ ಹಾಗೆ. ಯಾರನ್ನಾದರೂ ಸಾಯಿಸುವವರು ನಾಯಕರಾಗಿಲ್ಲ. ಸಾಯುವವರನ್ನು ಬದುಕಿಸಿದವರು ಹೀರೋಗಳಾಗಿದ್ದಾರೆ. ಜಗತ್ತಿಗೆ ಬೇಕಾಗಿರುವುದು ಅಂತಹ ಹೀರೋಗಳು. ನಾವು ಒಳ್ಳೆಯದಕ್ಕೆ ಹಾತೊರೆಯುವುದಕ್ಕಿಂತ ಕೆಟ್ಟದ್ದಕ್ಕೆ ಬಹಳ ಬೇಗ ಹಾತೊರೆಯುತ್ತೇವೆ. ಕೆಟ್ಟದ್ದನ್ನು ಬಹಳ ನೆನಪಿಟ್ಟುಕೊಳ್ಳುತ್ತೇವೆ. ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಮಾತನಾಡುವುದು, ಇನ್ನೊಬ್ಬರ ಮನೆ ಮುರಿಯುವ ಕೆಲಸ ಮಾಡದೇ ಇರುವುದು– ಈ ಎರಡನ್ನು ಮಾಡಿದರೆ ಮನುಷ್ಯನ ಬದುಕು ಸುಂದರವಾಗುತ್ತದೆ. ಅದೇ ಧರ್ಮ.

ದಿನಾ ಭಸ್ಮ ಹಚ್ಚಿಕೊಳ್ಳೋದು, ನಾಲ್ಕು ತಾಸು ಕಣ್ಣು ಮುಚ್ಚಿ ಕುಳಿತುಕೊಳ್ಳುವುದಷ್ಟೇ ಧರ್ಮ ಅಲ್ಲ. ನಮ್ಮ ಮಾತಿನಿಂದ, ನಮ್ಮ ಕಾರ್ಯದಿಂದ ಇನ್ನೊಬ್ಬರ ಮುಖದ ಮೇಲೆ ನಗೆ ಬಂತು ಅಂದರೆ ಅದು ಧರ್ಮ. ಏನು ಒಳ್ಳೆಯದಿದೆ ಅದನ್ನು ಪ್ರೀತಿಸುವುದೇ ಧರ್ಮ. ಅನ್ಯಾಯದಿಂದ ಬಂದಿದ್ದನ್ನು ಮುಟ್ಟದಿರುವುದೇ ನೇಮ. ಕೈಯಲ್ಲಿ ಹಣ ನಿಲ್ಲೋದಿಲ್ಲ ಅಂತ ಗುಡಿಗೆ ಹೋಗಿ ಕೈಗಳಿಗೆ ದಾರ ಕಟ್ಟಿಸಿಕೊಂಡು ಬಂದ ಒಬ್ಬವ. ಆಗ ದಾರ ಅವನಿಗೆ 'ನನ್ನ ಕಟ್ಟಿಸಿಕೊಂಡರೆ ದುಡ್ಡು ನಿಲ್ಲೋದಿಲ್ಲ, ದುಡಿಯುವ ಕೈಗಳಲ್ಲಿ ದುಡ್ಡು ನಿಲ್ಲುತ್ತದೆ' ಎಂದು ಹೇಳಿತು. ವಂಚನೆ ಇಲ್ಲದಿರ್ಪುದೇ ಭಕ್ತಿ. ವಚನ ಎಂಬ ಶಬ್ದ ಇದೆ. ಈ ವಚನಕ್ಕೆ ಒಂದು ಪೂಜ್ಯ (ಸೊನ್ನೆ) ಸೇರಿಸಿದರೆ ವಂಚನೆಯಾಗುತ್ತದೆ. ಮಾತು, ಮನಸ್ಸು ಕಾರ್ಯ ಒಂದೇ ಇದ್ದರೆ ವಚನ; ತೋರಿಕೆ ಇದ್ದರೆ ವಂಚನೆ ಅಷ್ಟೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 25, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಾದಶಿ ಗಂ. 11-45 **ನಕ್ಷತ್ರ:** ಪೂರ್ವಭಾದ್ರ ಗಂ.8-54 **ಯೋಗ:** ಇಂದ್ರ ಗಂ. 12-31 **ಕರಣ:** ತೈತಿಲ ಗಂ. 11-45, ಮೇಷ ಮಾಸದ 12 ನೇ ದಿನ.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-15 **ಸೂರ್ಯಾಸ್ತ:** 06-41
ಮುಸ್ಲಿಂ ದಿನಾಂಕ: 26 ಶವ್ವಾಲ್
ಅದೃಷ್ಟ ಸಂಖ್ಯೆ: 3, 9

ಮೇಷ: ಇನ್ನೊಬ್ಬರಿಗೆ ಅಗೌರವ ತೋರುವ ಅಥವಾ ಮನಸ್ಸಿಗೆ ನೋವು ನೀಡುವ ಕೆಲಸ ನಿಮ್ಮಿಂದ ಆಗಬಹುದು. ಹೊಸ ಹೊಸ ಯೋಚನೆಗಳು ನಿಮ್ಮ ಗುರಿಯ ದಾರಿಯನ್ನು ಬದಲು ಮಾಡುವುದು. ಆರೋಗ್ಯ ಸುಧಾರಿಸಲಿದೆ.

ವೃಷಭ: ಸಣ್ಣ ಕೈಗಾರಿಕೋದ್ಯಮಿಗಳು ರಫ್ತು ವಹಿವಾಟಿನಿಂದ ಹೇರಳ ಲಾಭ ಪಡೆಯಬಹುದು. ಕುಟುಂಬದಲ್ಲಿ ನಿಮ್ಮ ಸ್ಥಾನಮಾನ, ಗೌರವಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳಿರಿ. ಖರ್ಚು ಅಧಿಕವಾದಿತು ಎಚ್ಚರದಿಂದಿರಿ.

ಮಿಥುನ: ಮಡದಿ, ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ. ಕುಟುಂಬದಲ್ಲಿ ಸೌಖ್ಯ, ನೆಮ್ಮದಿ ಪ್ರಾಪ್ತಿಯಾಗುವುದು. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ. ಶ್ರೀ ದುರ್ಗಾ ದೇವಿಯನ್ನು ಸ್ತುತಿಸಿ.

ಕರ್ಕಾಟಕ: ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವಾಗಿರುತ್ತದೆ. ಸಂಘ ಸಂಸ್ಥೆಯ ಆಡಳಿತ ನಿರ್ವಹಿಸುವ ಮುಖ್ಯಸ್ಥರು ಸರ್ವ ಸದಸ್ಯರೊಂದಿಗೆ ಸಮಾಲೋಚಿಸಿ ಬಹುಮತದ ನಿರ್ಧಾರ ಕೈಗೊಳ್ಳುವುದು ಸೂಕ್ತ.

ಸಿಂಹ: ಕೌಟುಂಬಿಕ ವಿಚಾರದ ಬಗ್ಗೆ ಹೆಚ್ಚಿನ ಗಮನವಹಿಸಿ. ವ್ಯವಸಾಯಗಾರರಿಗೆ ಕೃಷಿ ಕೆಲಸ ಕಾರ್ಯಗಳು ಹೆಚ್ಚಲಿದೆ. ಮೆಕ್ಯಾನಿಕಲ್ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚು ಪರಿಶ್ರಮ ಅಗತ್ಯ. ನೆಚ್ಚಿನ ಹವ್ಯಾಸಗಳಲ್ಲಿ ತೊಡಗಿಕೊಳ್ಳುವಿರಿ.

ಕನ್ಯಾ: ಆಭರಣ ಖರೀದಿ ಅಥವಾ ಆಸ್ತಿ ಖರೀದಿ ಮಾಡುವ ವಿಚಾರದ ಬಗ್ಗೆ ಹೆಂಡತಿ ಮಕ್ಕಳೊಂದಿಗೆ ಚರ್ಚೆ ನಡೆಯಲಿದೆ. ಹೆಚ್ಚಿನ ತರಬೇತಿಗಾಗಿ ಸಂಸ್ಥೆಯ ಮುಖಾಂತರ ದೂರ ಪ್ರಯಾಣ ಮಾಡಬೇಕಾಗಬಹುದು.

ತುಲಾ: ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕವಾಗುವುದು. ರಿಯಲ್ ಎಸ್ಟೇಟುದಾರರಿಗೆ ಉತ್ತಮ ಧನಲಾಭದ ಅವಕಾಶದಿಂದ ವ್ಯವಹಾರ ವೃದ್ಧಿಗೊಳ್ಳಲಿದೆ. ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವಿರಿ.

ವೃಶ್ಚಿಕ: ಮನೆಯಲ್ಲಿ ಮದುವೆ ಸಮಾರಂಭಗಳು ಜರುಗುವ ಸಾಧ್ಯತೆ ಇದೆ. ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ನಿರೀಕ್ಷಿಸಬಹುದು. ನ್ಯಾಯಾಂಗ ಇಲಾಖೆಯವರಿಗೆ ಕಾರ್ಯದ ಒತ್ತಡ ಹೆಚ್ಚುತ್ತದೆ.

ಧನು: ಏಕಚಿತ್ತದಿಂದ ಪ್ರಾರಂಭಿಸಿದ ಕಾರ್ಯ ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ಹವ್ಯಾಸಿ ಬರಹಗಾರರಿಗೆ ಹೇರಳ ಅವಕಾಶಗಳು ಸಿಗುವುದು. ಸಿನಿಮಾ ರಂಗದವರಿಗೆ ಮತ್ತು ಬಂಗಾರ ವ್ಯಾಪಾರಿಗಳಿಗೆ ಶುಭ ದಿನ.

ಮಕರ: ಹೊಸ ವಾಹನ ಖರೀದಿಯ ನಿಮ್ಮ ಆಲೋಚನೆಗೆ ತಂದೆಯಿಂದ ಬೆಂಬಲ ಸಿಗುತ್ತದೆ. ಕೊಟ್ಟ ಸಾಲವನ್ನು ಹಿಂಪಡೆಯಲು ಸಾಹಸ ಪಡಬೇಕಾಗಬಹುದು. ಆಪ್ತರೊಬ್ಬರಿಂದ ಮಗನ ಉನ್ನತ ವಿದ್ಯಾಭ್ಯಾಸಕ್ಕೆ ಸಹಾಯವಾಗಲಿದೆ.

ಕುಂಭ: ಕಚೇರಿಯ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇಬೇಕಾದ ಸಮಯ ಬಂದಿದೆ. ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನ ಅಗತ್ಯ. ಮುಂದಿನ ಗುರಿ ಸಾಧನೆಗೆ ಇದು ಅತಿ ಮುಖ್ಯ.


ಮೀನ: ಸರಿಯಾದ ಪರಿಶೀಲನೆ ಇಲ್ಲದೆ ಹೂಡಿಕೆ ಸಲ್ಲದು. ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯುವಿರಿ. ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯವನ್ನು ಪಡೆದು ಮುಂದುವರಿಯುವಿರಿ.

ಪದಬಂಧ 6022

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈ ಪರಿ ಹರಡಿರುವ ಸುವಾಸನೆ! (4)
5.ದೇವಾಲಯದ ಸಭಾಮಂಟಪ (4)
6.ಶ್ರೀ ಮಾರಿಕಾಂಬ ದೇವಸ್ಥಾನವಿರುವ ಈ ಊರು ಉತ್ತರಕನ್ನಡ ಜಿಲ್ಲೆಯಲ್ಲಿದೆ (3)
9.ಹಗರಣದಲ್ಲಿ ಸಿಕ್ಕಿರುವ ದುಡ್ಡು! (2)
10.ಅವಸರಕ್ಕೊಂದು ಪರ್ಯಾಯ ಪದ (3)
11.ಬಡಗಣ ದಿಕ್ಕಿನಲ್ಲಿ ಕಾಣುತ್ತಿರುವ ಗುಂಪು! (2)
13.ಕನಸು ಇಲ್ಲಿ ನಿಜವಾಗಿದೆ! (3)
15.ತಾಯಿಯ ಮನೆ ಕಿಟಕಿ (4)
17.ಈತ ದನಗಳನ್ನು ಕಾಯುವವನು (4)

ಮೇಲಿಂದ ಕೆಳಕ್ಕೆ
1.ಪ್ರತ್ಯಯಸಹಿತವಾದ ಶಬ್ದ (2)
2.ಕನ್ನಡಿಗನು ಹಿಡಿದಿರುವ ಲೆನ್ಸು! (3)
3.ವನದ ಬಗ್ಗೆ ಬರೆದ ಪದ್ಯ (3)
4.ನಡುವೆ ಗರವಿದ್ದರೆ ಈ ಗೊಂದಲ! (4)
6.ತಲೆಯನ್ನು ಕಾಪಾಡುವ ಸಾಧನ (4)
7.ಕಿರಿಧಾನ್ಯವೆಂದು ಕರೆಯಲಾಗುತ್ತಿದ್ದ ಧಾನ್ಯಗಳಿಗೆ ಈ ಹೊಸ ಹೆಸರು ಬಂದಿದೆ (4)
8.ಓಟನ್ನು ನೀಡುವಿಕೆ (4)
9.ಹಸುವಿನ ಹತ್ತಿರವಿರುವ ಎಳೆಮಗು (4)
11.ಕದಂಬರ ರಾಜಧಾನಿಯಾಗಿದ್ದ ಈ ಊರಿನಲ್ಲಿ ಮಧುಕೇಶ್ವರ ದೇವಾಲಯವಿದೆ (4)
12.ಕಾಯ ಬಗ್ಗಿಸಿ ಮಾಡುವ ಕೆಲಸ! (3)
14.ನಯವಾಗಿ ಕಾಣುವ ಕಣ್ಣು! (3)
16.ಮಹಿಮಾವಂತನಿರುವ ಭೂಮಿ (2)



6021ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಿತಾಪತಿ 5.ಜಾಯಮಾನ
6.ಕುಡಿನೋಟ 8.ಮಡಿವಾಳ
12.ವನಸುಮ 14.ನಿರಾಯುಧ
15.ಅಂತರ್ವಾಣಿ 16.ಯಮಭಾರ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು 2.ಸಮಾಗಮ
3.ಕಿರುಕುಳ 4.ತಿಕ್ಕಾಟ
7.ನೋವು 9.ವಾಮನ
10.ಮದುವಣಿಗ 11.ಣಿರಾ
12.ವಧಕಾರ 13.ಮನೆತನ
14.ನಿಶ್ಚಯ

ಸುಡೊಕು 6407

		6			8	5		1
			2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6406 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು 315



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,328
ಇಂದಿನ ಅಂತ್ಯ	24,246
▼	82
ದಿನದ ಕನಿಷ್ಠ	24,216

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹435

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-585
ದ್ವಿತಳಿ (ಬಿ.ವಿ)	₹285-676

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ಪಿಎನ್‌ಬಿ ಸಾಲ ಅಭಿಯಾನ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ವಿಶೇಷ ರಿಟೇಲ್ ಸಾಲ ಅಭಿಯಾನವನ್ನು ಆರಂಭಿಸಿದೆ.

ಇದರಡಿ ದೇಶದಲ್ಲಿರುವ ಎಲ್ಲಾ ಶಾಖೆಗಳು, ಡಿಜಿಟಲ್ ವೇದಿಕೆ ಮತ್ತು ಅಧಿಕೃತ ವೆಬ್‌ಸೈಟ್ ಮೂಲಕ ಗ್ರಾಹಕರಿಗೆ ಸಾಲ ಸೌಲಭ್ಯದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಜೂನ್ 20ರ ವರೆಗೆ ಈ ಅಭಿಯಾನ ನಡೆಯಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಗೃಹ ಮತ್ತು ವಾಹನ ಸಾಲಕ್ಕೆ ನಿಗದಿಪಡಿಸಿದ್ದ ಸಂಸ್ಕರಣಾ ಶುಲ್ಕವನ್ನು ಶೂನ್ಯಕ್ಕೆ ಇಳಿಸಿದೆ. ದಾಖಲೆಗಳ ಪರಿಶೀಲನೆಗೆ ನಿಗದಿಪಡಿಸಿರುವ ಶುಲ್ಕಕ್ಕೂ ವಿನಾಯಿತಿ ಘೋಷಿಸಿದೆ.

ಆಸ್ತಿಯೊಂದಿಗೆ ಯಾವುದೇ ಕಾನೂನು ತೊಡಕು ಇಲ್ಲ ಎಂದು ದೃಢೀಕರಿಸುವ ಪ್ರಮಾಣ ಪತ್ರ ಮತ್ತು ಕಾನೂನು ಸಲಹೆಗೆ ನಿಗದಿಪಡಿಸುವ ಶುಲ್ಕಕ್ಕೂ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದೆ.

ಗೃಹ, ವಾಹನ ಮತ್ತು ಶಿಕ್ಷಣ ಸಾಲದ ಮೇಲಿನ ಬಡ್ಡಿ ಮೇಲೆ ಶೇ 0.05ರಷ್ಟು ರಿಯಾಯಿತಿ ಇದೆ. ಈ ಸೌಲಭ್ಯಕ್ಕೆ ಷರತ್ತುಗಳು ಅನ್ವಯಿಸಲಿವೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

24-04-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	7400-7500
ದಪ್ಪ ಗುಜರಾತ್(ಹೊಸ)	7700-7800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1325 (1325)
ಒಂದು ವಾರದ ಡೆಲಿವರಿ	1320 (1320)
ಪಾಮ್ ವಾರದ ಡೆಲಿವರಿ	1258 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1325)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹**95,650** (95,300)
ಬೆಳ್ಳಿ ಕೆ.ಜಿ ₹**97,500** (96,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ವಿನಿಮಯ ದರ

$ ಡಾಲರ್	85.33
£ ಪೌಂಡ್	113.42
€ ಯುರೊ	97.05
¥ ಯೆನ್ (100ಕ್ಕೆ)	60

ಭಾರತದಿಂದ ₹3,820 ಕೋಟಿ ರಫ್ತು: ಆಮದು ತೀರಾ ಕಡಿಮೆ

ಪಾಕ್ ಆರ್ಥಿಕತೆಗೆ ಭಾರಿ ಪೆಟ್ಟು?

ನವದೆಹಲಿ (ಪಿಟಿಐ): ಪಾಕಿಸ್ತಾನ ಕೂಡ ಭಾರತದೊಟ್ಟಿಗಿನ ಎಲ್ಲಾ ವ್ಯಾಪಾರ ಒಪ್ಪಂದಗಳನ್ನು ಸ್ಥಗಿತಗೊಳಿಸಿದೆ. ಹಾಗಾಗಿ, ಅಲ್ಪ ಪ್ರಮಾಣದಲ್ಲಿ ನಡೆಯುತ್ತಿದ್ದ ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟು ಸಂಪೂರ್ಣ ಬಂದ್ ಆಗಲಿದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ (ಎಫ್‌ಐಇಒ) ಗುರುವಾರ ತಿಳಿಸಿದೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯಿಂದಾಗಿ ಭಾರತವು, ಪಾಕಿಸ್ತಾನದ ಜೊತೆಗಿನ ಸಂಬಂಧವನ್ನು ಕಡಿತಗೊಳಿಸಿದೆ. ಇದರಲ್ಲಿ ಅಟ್ಟಾರಿ ಗಡಿ ಬಂದ್ ಕೂಡ ಮಾಡಲಾಗಿದೆ. ಈ ಮಾರ್ಗದ ಮೂಲಕ ನಡೆಯುತ್ತಿದ್ದ ವ್ಯಾಪಾರ ಸಂಪೂರ್ಣ ಸ್ಥಗಿತಗೊಳ್ಳಲಿದೆ ಎಂದು ಹೇಳಿದೆ.


'ಆ ದೇಶದ ಜೊತೆಗಿನ ಭಾರತದ ದ್ವಿಪಕ್ಷೀಯ ವ್ಯಾಪಾರ ವಹಿವಾಟು ತೀರಾ ಕಡಿಮೆ. ದೇಶದ ಒಟ್ಟು ವ್ಯಾಪಾರದ ಶೇ 0.06ರಷ್ಟಿದೆ' ಎಂದು ಎಫ್‌ಐಇಒ ಅಧ್ಯಕ್ಷ ಎಸ್.ಸಿ. ರಾಲ್ಹಾನ್ ಅವರು, ಪಿಟಿಐಗೆ ತಿಳಿಸಿದ್ದಾರೆ.

'2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಭಾರತದ ಒಟ್ಟು ರಫ್ತು ವ್ಯಾಪಾರ ಮೌಲ್ಯ ₹68.27 ಲಕ್ಷ ಕೋಟಿ ಆಗಿದೆ. ಇದೇ ಅವಧಿಯಲ್ಲಿ ಪಾಕಿಸ್ತಾನಕ್ಕೆ ₹3,820 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ವ್ಯಾಪಾರ ಸಂಪೂರ್ಣ ಸ್ಥಗಿತಗೊಳ್ಳುವುದರಿಂದ ಆ ದೇಶದ ಆರ್ಥಿಕತೆ ಮೇಲೆ ಹೆಚ್ಚು ಪರಿಣಾಮ ಬೀರಲಿದೆ' ಎಂದು ಹೇಳಿದ್ದಾರೆ. ಇದೇ ಅವಧಿಯಲ್ಲಿ ಭಾರತಕ್ಕೆ ಅಲ್ಲಿಂದ ₹3.58 ಕೋಟಿ ಮೌಲ್ಯದ ಸರಕುಗಳು ಆಮದಾಗಿವೆ ಎಂದು ತಿಳಿಸಿದ್ದಾರೆ.

2023–24ರಲ್ಲಿ ಭಾರತವು ₹10 ಸಾವಿರ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿದ್ದರೆ, ₹24.57 ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ. ಭಾರತದಿಂದ ದುಬೈ ಬಂದರಿನ ಮೂಲಕ ಪಾಕಿಸ್ತಾನಕ್ಕೆ ಹೆಚ್ಚಾಗಿ ಉತ್ಪನ್ನಗಳು ರವಾನೆಯಾಗುತ್ತವೆ.

ಶೇ 200ರಷ್ಟು ಸುಂಕ

ಪಾಕಿಸ್ತಾನದಿಂದ ಆಮದು ಮಾಡಿಕೊಳ್ಳುವ ತಾಜಾ ಹಣ್ಣು, ಸಿಮೆಂಟ್, ಪೆಟ್ರೋಲಿಯಂ ಉತ್ಪನ್ನ ಮತ್ತು ಖನಿಜ ಅದಿರಿನ ಮೇಲೆ ಭಾರತವು ಶೇ 200ರಷ್ಟು ಸುಂಕ ವಿಧಿಸುತ್ತದೆ. 2017–18ರಲ್ಲಿ ಆ ದೇಶವು ಭಾರತಕ್ಕೆ ₹4,170 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿತ್ತು.



1996ರಲ್ಲಿ ಭಾರತವು ಆ ದೇಶಕ್ಕೆ ಪರಮಾಪ್ತ ರಾಷ್ಟ್ರದ ಸ್ಥಾನಮಾನ ನೀಡಿತ್ತು. ಆದರೆ, ಇದನ್ನು ಅದು ಉಳಿಸಿಕೊಳ್ಳಲಿಲ್ಲ. ಹಾಗಾಗಿ, ಈ ಪಟ್ಟಿಯಿಂದ ಕೈಬಿಟ್ಟಿದೆ.

2012ರಲ್ಲಿ ಪಾಕಿಸ್ತಾನವು ಭಾರತಕ್ಕೆ ಪರಮಾಪ್ತ ರಾಷ್ಟ್ರ ಸ್ಥಾನಮಾನ ಘೋಷಿಸಿತ್ತು. ಆದರೆ, ಅಲ್ಲಿನ ವಿಪಕ್ಷಗಳ ತೀವ್ರ ವಿರೋಧದಿಂದ ಈ ಘೋಷಣೆಯನ್ನು ಹಿಂಪಡೆಯಿತು.

ಯಾವ ಉತ್ಪನ್ನ ರವಾನೆ?

2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ದೇಶದಿಂದ ರಾಸಾಯನಿಕಗಳು ಮತ್ತು ಔಷಧ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಾಕಿಸ್ತಾನಕ್ಕೆ ರಫ್ತು ಮಾಡಲಾಗಿದೆ. ಒಟ್ಟು ರಫ್ತಿನ ಪೈಕಿ ಇವುಗಳ ಪಾಲು ಶೇ 60ರಷ್ಟಿದೆ.

ಸಕ್ಕರೆ ಮತ್ತು ಸಕ್ಕರೆ ಮಿಠಾಯಿ, ತರಕಾರಿ, ಕಾಫಿ, ಟೀ, ಸಂಬಾರ ಪದಾರ್ಥ, ದ್ವಿದಳ ಧಾನ್ಯ, ಪೆಟ್ರೋಲಿಯಂ ಉತ್ಪನ್ನ, ರಸಗೊಬ್ಬರ, ಪ್ಲಾಸ್ಟಿಕ್, ರಬ್ಬರ್, ಆಟೊ ಬಿಡಿಭಾಗ, ಸೋಯಾಬೀನ್, ಕುಕ್ಕುಟ ಆಹಾರವನ್ನು ಪ್ರಮುಖವಾಗಿ ರಫ್ತು ಮಾಡಲಾಗುತ್ತದೆ.

ಅಲ್ಲಿಂದ ಪ್ರಮುಖವಾಗಿ ತಾಜಾ ಹಣ್ಣುಗಳು, ಒಣ ಹಣ್ಣುಗಳು, ಒಣ ಖರ್ಜೂರ, ಎಣ್ಣೆ ಬೀಜಗಳು, ಸಿಮೆಂಟ್, ಗಿಡಮೂಲಿಕೆ ಸಸ್ಯಗಳು, ರಾಸಾಯನಿಕಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹200 ಹೆಚ್ಚಳವಾಗಿ, ₹99,400 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ ₹98,900 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹700 ಹೆಚ್ಚಳವಾಗಿ, ₹99,900 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.


ದಾಸ್ತಾನುಗಾರರು ಮತ್ತು ಆಭರಣ ತಯಾರಕರಿಂದ ಚಿನ್ನ ಖರೀದಿ ಹೆಚ್ಚಳವಾಗಿದೆ. ಜೊತೆಗೆ, ಡಾಲರ್ ಮೌಲ್ಯ ಇಳಿಕೆಯಾಗಿದೆ. ಇದು ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

ಶೀಘ್ರ ಅನುಷ್ಠಾನಕ್ಕೆ ಕ್ರಮ: ಸಚಿವ ನಿತಿನ್ ಗಡ್ಕರಿ

ಟ್ರಕ್‌ಗಳಿಗೂ ಸುರಕ್ಷತಾ ಶ್ರೇಯಾಂಕ

ನವದೆಹಲಿ (ಪಿಟಿಐ): ಟ್ರಕ್‌ಗಳು ಮತ್ತು ದೊಡ್ಡ ವಾಣಿಜ್ಯ ವಾಹನಗಳಿಗೆ ಕ್ರ್ಯಾಷ್ ಟೆಸ್ಟ್ ನಡೆಸಿ ಅದರ ಆಧಾರದ ಮೇಲೆ ಅವುಗಳಿಗೂ ಸುರಕ್ಷತಾ ಶ್ರೇಯಾಂಕ ನೀಡಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ನಿರ್ಧರಿಸಿದೆ.

ಜಿಎನ್‌ಸಿಎಪಿ ಮತ್ತು ರಸ್ತೆ ಸಂಚಾರ ಶಿಕ್ಷಣ ಸಂಸ್ಥೆಯಿಂದ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, 'ಪ್ರಸ್ತುತ ದೇಶದಲ್ಲಿ ಭಾರತ್–ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂನ (ಭಾರತ್–ಎನ್‌ಸಿಎಪಿ) ಕ್ರ್ಯಾಷ್ ಟೆಸ್ಟ್‌ನಲ್ಲಿ ಕಾರುಗಳಿಗೆ ಶ್ರೇಯಾಂಕ ನೀಡಲಾಗುತ್ತಿದೆ. ಇದೇ ಮಾದರಿಯಲ್ಲಿ ಟ್ರಕ್‌ಗಳು ಮತ್ತು ವಾಣಿಜ್ಯ ವಾಹನಗಳಿಗೆ ಶ್ರೇಯಾಂಕ ನೀಡಲು ಸಿದ್ಧತೆ ನಡೆದಿದೆ' ಎಂದರು.



ನಿತಿನ್ ಗಡ್ಕರಿ

ಸುರಕ್ಷಿತವಾದ ವಾಹನ ತಯಾರಿಕೆಗೆ ಸಂಬಂಧಿಸಿದಂತೆ ತಯಾರಕರ ನಡುವೆ ಆರೋಗ್ಯಕರ ಪೈಪೋಟಿ ನೀಡುವುದು ಇದರ ಉದ್ದೇಶ. ಇದರಿಂದ ವಾಹನಗಳ ಗುಣಮಟ್ಟ ಮತ್ತು ಸುರಕ್ಷತೆ ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ ಎಂದರು.

ವಿದ್ಯುತ್‌ಚಾಲಿತ ರಿಕ್ಷಾಗಳು ಸುರಕ್ಷತೆಯ ಸಮಸ್ಯೆ ಎದುರಿಸುತ್ತಿವೆ. ಹಾಗಾಗಿ, ಇವುಗಳಿಗೆ ಸಂಬಂಧಿಸಿದಂತೆ ಸುರಕ್ಷತೆ ಮೌಲ್ಯಮಾಪನ ವ್ಯವಸ್ಥೆ ಮತ್ತು ಇದಕ್ಕೆ ಪೂರಕವಾದ ಮಾನದಂಡಗಳನ್ನು ರೂಪಿಸಲು ಈಗಾಗಲೇ ಸಚಿವಾಲಯವು ಕಾರ್ಯತತ್ಪರವಾಗಿದೆ ಎಂದು ಮಾಹಿತಿ ನೀಡಿದರು.

ಇ-ರಿಕ್ಷಾಗಳ ಸುರಕ್ಷತೆಯು ಸುಧಾರಣೆಗೊಂಡರೆ ಅವುಗಳ ಗುಣಮಟ್ಟ ಹೆಚ್ಚಲಿದೆ. ಇದು ಹೆಚ್ಚಿನ ಉದ್ಯೋಗ ಸೃಷ್ಟಿಗೆ ನೆರವಾಗಲಿದೆ ಎಂದರು.

ಚಾಲಕರಿಗೆ ಕೆಲಸದ ಸಮಯ ನಿಗದಿ: 'ಪ್ರಸ್ತುತ ದೇಶದಲ್ಲಿ ಲಾರಿ ಚಾಲಕರು ದಿನವೊಂದಕ್ಕೆ 13ರಿಂದ 14 ಗಂಟೆ ದುಡಿಯುತ್ತಿದ್ದಾರೆ. ಇದರಿಂದ ಹಲವು ಸಂಕಷ್ಟಗಳನ್ನು ಎದುರಿಸುತ್ತಾರೆ. ಅವರು ದಿನವೊಂದಕ್ಕೆ ಎಷ್ಟು ಅವಧಿವರೆಗೆ ಕೆಲಸ ಮಾಡಬೇಕು ಎಂಬ ಬಗ್ಗೆ ನಿಯಮ ರೂಪಿಸಲು ಸಚಿವಾಲಯವು ಕಾರ್ಯನಿರತವಾಗಿದೆ' ಎಂದು ಗಡ್ಕರಿ ತಿಳಿಸಿದರು.

ನಬಾರ್ಡ್ ಸಿಜಿಎಂ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಕರ್ನಾಟಕ ವಲಯದ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ (ಸಿಜಿಎಂ) ಸುರೇಂದ್ರ ಬಾಬು ಅಧಿಕಾರ ಸ್ವೀಕರಿಸಿದ್ದಾರೆ.

ಅವರು ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಿಂದ (ಐಎಆರ್‌ಐ) ಎಂ.ಎಸ್ಸಿ ಮತ್ತು ಪಿಎಚ್‌.ಡಿ ಪದವಿ ಪಡೆದಿದ್ದಾರೆ. ಸಿಜಿಎಂ ಆಗಿ ನೇಮಕಗೊಳ್ಳುವ ಮೊದಲು ಲಖನೌದ ರಾಷ್ಟ್ರೀಯ ಬ್ಯಾಂಕ್‌ಗಳ ಸಿಬ್ಬಂದಿ ಕಾಲೇಜಿನಲ್ಲಿ ಉಪ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

1992ರಲ್ಲಿ ವೃತ್ತಿ ಜೀವನ ಆರಂಭಿಸಿದ ಅವರು, ನಬಾರ್ಡ್‌ನ ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹16000-16000
ಬೆಂಗಳೂರು	₹16500-18000
ತಿಪಟೂರು	₹17300-18700

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,000-1,400
ಮಧ್ಯಮ	₹700-1,000
ಸಣ್ಣ	₹400-700

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1315 (1315)
ಸೋಯಾ (ರಿಫೈನ್ಡ್)	₹1285 (1285)
ಸೂರ್ಯಕಾಂತಿ (ರಿಫೈನ್ಡ್)	₹1385 (1385)
ಪಾಮೋಲಿನ್	₹1265 (1265)

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹28650
ಎಸಿ	₹16660
ಆರ್‌ಪಿ	₹22600
ಆರ್‌ಸಿ	₹12530

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗುಣಧರ್, ಶಿಗ್ಗಾವಿ.

- **ಪ್ರಶ್ನೆ:** ನಾನು ಇತ್ತೀಚೆಗೆ ಗೃಹ ಉತ್ಪನ್ನ ಖರೀದಿಸಲು ಸಮೀಪದ ಮಾರಾಟ ಮಳಿಗೆಗೆ ಭೇಟಿ ನೀಡಿದ್ದೆ. ನಾನು ಖರೀದಿಸುವ ಉತ್ಪನ್ನಕ್ಕೆ ಸಂಬಂಧಿಸಿ ಅಲ್ಲಿನ ಗ್ರಾಹಕ ಸೇವಾ ಸಿಬ್ಬಂದಿಯು ಶೂನ್ಯ ಬಡ್ಡಿ ಇಎಂಐ ನೀಡುವ ಬಗ್ಗೆ ಭರವಸೆ ನೀಡಿದ್ದಾರೆ. ಇದು ನಿಜಕ್ಕೂ ಕಂತು ಪಾವತಿಯಲ್ಲಿ ಯಾವುದೇ ಬಡ್ಡಿ ಇಲ್ಲದೆ ಕೊಳ್ಳುವ ಮೊತ್ತವನ್ನೇ ಹಂತ ಹಂತವಾಗಿ ಪಾವತಿಸುವ ವ್ಯವಸ್ಥೆಯಾಗಿದೆ ಎಂದು ಪ್ರಚಾರ ಮಾಡುತ್ತಾರೆ.

ಕೆಲವೊಮ್ಮೆ ಇದು ಮಾರ್ಕೆಟಿಂಗ್ ತಂತ್ರವಾಗಿರಬಹುದು ಎಂಬ ಅನುಮಾನ ಉಂಟಾಗುತ್ತಿದೆ. ನಿಜವಾಗಿ ಶೂನ್ಯ ಬಡ್ಡಿ ಇಎಂಐ ಹೇಗೆ ಕೆಲಸ ಮಾಡುತ್ತದೆ? ಗ್ರಾಹಕರಿಗೆ ಇದರಿಂದ ಲಾಭವಾಗುತ್ತದೆಯೇ? ಇಂತಹ ವ್ಯವಹಾರದಲ್ಲಿ ಖರೀದಿಸುವ ಉತ್ಪನ್ನಗಳ ಬಗ್ಗೆ ನಾವೆಷ್ಟು ಜಾಗೃತರಾಗಿರಬೇಕು ಎಂಬ ಬಗ್ಗೆ ಮಾಹಿತಿ ನೀಡಬಹುದೇ?

ಉತ್ತರ: ಇಂದಿನ ದಿನಗಳಲ್ಲಿ 'ಶೂನ್ಯ ಬಡ್ಡಿ ಇಎಂಐ' ಅಥವಾ 'ವೆಚ್ಚವಿಲ್ಲದ ಇಎಂಐ' ಎಂಬ ಪರಿಕಲ್ಪನೆ ಜನಪ್ರಿಯವಾಗುತ್ತಿದೆ. ಇದು ಗ್ರಾಹಕರಿಗೆ ಯಾವುದೇ ಅಧಿಕ ಬಡ್ಡಿ ಅಥವಾ ಶುಲ್ಕವಿಲ್ಲದೆ ಒಂದು ಉತ್ಪನ್ನದ ಮಾರುಕಟ್ಟೆ ಬೆಲೆಯಲ್ಲಿ ಒಟ್ಟಾರೆಯಾಗಿ ಎಲ್ಲಾ ಪಾವತಿ ಮುಗಿದಾಗ ಬಳಿಕ ಆ ಬೆಲೆಗೆ ಹೆಚ್ಚುವರಿಯಾಗದಂತೆ ಗ್ರಾಹಕರಿಗೆ ವಸ್ತು ಮತ್ತು ಹಣಕಾಸಿನ ಸೌಲಭ್ಯ ಒದಗಿಸುವ ವ್ಯವಸ್ಥೆಯಾಗಿದೆ. ಇದರಲ್ಲಿ ಮಾರಾಟ ತಂತ್ರಗಾರಿಕೆ ಇಲ್ಲವೆಂದಲ್ಲ. ಅದನ್ನು ಪರೋಕ್ಷವಾಗಿ ಸರಿದೂಗಿಸಿರುವುದನ್ನು ನಿಮಗೆ ಸೂಕ್ಷ್ಮವಾಗಿ ಅವಗಾಹನೆ ಮಾಡಿದರೆ ತಿಳಿಯಬಹುದು.

ಈ ಆಯ್ಕೆಯನ್ನು ಆನ್‌ಲೈನ್ ಮತ್ತು ಸೂಪರ್ ಮಾರ್ಕೆಟ್ ಮಳಿಗೆಗಳಲ್ಲಿ ಸುಲಭವಾಗಿ ಲಭ್ಯವಾಗಿಸಿ ಕೊಳ್ಳಬಹುದಾಗಿದೆ. ಸಾಮಾನ್ಯ ಇಎಂಐ ಯೋಜನೆಗೆ ಸಹಿ ಹಾಕುವಾಗ ನೀವು ಖರೀದಿಸುವ ಉತ್ಪನ್ನಗಳಿಗೆ ಬಡ್ಡಿ ಸಹಿತ ಮುಂದಿನ ಕೆಲವು ತಿಂಗಳು ಸಮಾನ ಕಂತುಗಳಲ್ಲಿ ಇಎಂಐ ಪಾವತಿಸಲು ಒಪ್ಪಿಗೆ ನೀಡುತ್ತೀರಿ. ಇಂತಹ ಇಎಂಐ ಆಯ್ಕೆಗಳಲ್ಲಿ ಬಹುತೇಕ ಹಣಕಾಸು ಸಂಸ್ಥೆಗಳು ಹೆಚ್ಚು ಬಡ್ಡಿದರ ವಿಧಿಸುತ್ತವೆ. ಇದರಿಂದ ಉತ್ಪನ್ನದ ಒಟ್ಟು ವೆಚ್ಚವು ಪಾವತಿಸುವ ಬಡ್ಡಿ, ಸೇವಾ ಶುಲ್ಕ ಇತ್ಯಾದಿ ಸೇರಿ ಹೆಚ್ಚಾಗುತ್ತದೆ.

ಆದರೆ, ವೆಚ್ಚವಿಲ್ಲದ ಯೋಜನೆ ಎರಡು ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಮೊದಲನೆಯದು ನೀವು ನಗದು ರೂಪದಲ್ಲಿ ಸಂಪೂರ್ಣ ಮೊತ್ತ ಪಾವತಿಸುವಾಗ ಒಂದು ವೇಳೆ ನಿಮಗೆ ಭಾರಿ ರಿಯಾಯಿತಿ ಸಿಗುವ ಸಾಧ್ಯತೆ ಇದ್ದರೆ, ನೀವು ವೆಚ್ಚವಿಲ್ಲದ ಇಎಂಐ ಯೋಜನೆ ಆಯ್ಕೆ ಮಾಡಿಕೊಂಡರೆ ಇಂತಹ ರಿಯಾಯಿತಿ ಮೊತ್ತವನ್ನು ಕಳೆದುಕೊಳ್ಳಬೇಕಾಗಬಹುದು. ಜೊತೆಗೆ, ರಿಯಾಯಿತಿ ಪೂರ್ವ ಮೊತ್ತವನ್ನೇ ಸಮಾನ ಕಂತುಗಳಲ್ಲಿ ವಿಭಜಿಸಿ ನಿಮ್ಮಿಂದ ಮಾಸಿಕ ಕಂತುಗಳಲ್ಲಿ ಪಡೆಯುವ ವ್ಯವಸ್ಥೆ ಇದಾಗಿದೆ. ಇಲ್ಲಿ ನೇರ ಬಡ್ಡಿ ಕಟ್ಟುವ ಬದಲು ನಿಮಗೆ ನಗದು ಪಾವತಿ ಸಂದರ್ಭದಲ್ಲಿ ಸಿಗಬಹುದಾದ ರಿಯಾಯಿತಿ ಬಿಟ್ಟುಕೊಡುವ ಕಾರಣ ನೀವು ಖರೀದಿಸುವ ಉತ್ಪನ್ನದ ಮೌಲ್ಯ ಅಷ್ಟು ಅಧಿಕ ಆಗಿರುತ್ತದೆ. ಇದನ್ನು ಗ್ರಾಹಕರಿಂದ ಸಂಗ್ರಹಿಸಿ ಹಣಕಾಸು ಸಂಸ್ಥೆಗಳಿಗೆ ನೀಡುವ ಈ ಆಂತರಿಕ ಒಪ್ಪಂದವು ಮಾರಾಟ ಸಂಸ್ಥೆ ಹಾಗೂ ಹಣಕಾಸು ಸಂಸ್ಥೆಯ ನಡುವೆ ಇರುತ್ತದೆ.

ಇನ್ನೊಂದು ಪದ್ಧತಿಯಡಿ ಬಡ್ಡಿ ಬದಲು ವಸ್ತುವಿನ ಮೌಲ್ಯವನ್ನಷ್ಟೇ ವರ್ಧಿಸಿ ಮಾರಾಟದ ಮೌಲ್ಯವನ್ನು ಆಯ್ಕೆ ಮಾಡುವ ತಿಂಗಳಿಗೆ ಸಮಾನವಾಗಿ ಹಂಚಿ ಇಎಂಐ ಮೂಲಕ ಸಂಗ್ರಹಿಸಲಾಗುತ್ತದೆ. ಹೀಗಾಗಿ ಗ್ರಾಹಕರಾದವರು ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ, ನಗದು ಖರೀದಿ ಹಾಗೂ ವೆಚ್ಚವಿಲ್ಲದ ಇಎಂಐ ವಿಧಾನದ ಮೂಲಕ ಒಟ್ಟು ಪಾವತಿಸುವ ಮೊತ್ತದ ಬಗ್ಗೆ ಹಾಗೂ ಯಾವುದೇ ಇತರೆ ಸಂಸ್ಕರಣಾ ಶುಲ್ಕ ಅಥವಾ ಸೇವಾ ಶುಲ್ಕ ಇತ್ಯಾದಿ ಇದೆಯೇ ಎಂಬ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ.

ಗಂಗಾಧರ್ ಹೂಗೊಂಡ್, ಊರು ತಿಳಿಸಿಲ್ಲ.

- **ಪ್ರಶ್ನೆ:** ನನಗೆ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಹೂಡಿಕೆ ಹಾಗೂ ಸಂಪತ್ತು ನಿರ್ವಹಣೆ ಬಗ್ಗೆ ಮಾಹಿತಿ ಗಳಿಸಲು ಅನುಕೂಲವಾಗುವ ಪುಸ್ತಕಗಳ ಬಗ್ಗೆ ಸೂಚಿಸಿ.

ಉತ್ತರ: ಹೂಡಿಕೆ ಬಗ್ಗೆ ಮಾಹಿತಿ ಪಡೆಯುವ ನಿಮ್ಮ ಆಸಕ್ತಿ ಶ್ಲಾಘನೀಯ. ಆದರೆ, ಪುಸ್ತಕಗಳು ನಿಮಗೆ ಒಟ್ಟಾರೆ ಪಠ್ಯದಂತೆ ಮಾಹಿತಿ ನೀಡುವಲ್ಲಿ ನೆರವಾದೀತೆ ಹೊರತು ನೈಜ ಸನ್ನಿವೇಶಗಳಲ್ಲಿ ನಿಮ್ಮ ನಿರ್ಧಾರ ಹೇಗಿರಬೇಕು ಎನ್ನುವ ಮಾಹಿತಿ ನೀಡಲಾರವು. ಪ್ರತಿ ಹೂಡಿಕೆಯ ಕಾಲಘಟ್ಟದಲ್ಲಿ ಒಂದಲ್ಲ ಒಂದು ವಿಶೇಷ ಸನ್ನಿವೇಶ ಇರುವುದೇ ಇದಕ್ಕೆ ಕಾರಣ.

ಉದಾಹರಣೆಗೆ ಕೋವಿಡ್ ಸಂದರ್ಭದಲ್ಲಿ ಕೆಲವು ದಿನ ಷೇರು ಮಾರುಕಟ್ಟೆ ಮುಗ್ಗರಿಸಿತ್ತು. ಇದು ಒಂದಷ್ಟು ಆತಂಕ ಸೃಷ್ಟಿಸಿ ಅನೇಕ ಮಂದಿ ತಮ್ಮಲ್ಲಿದ್ದ ಹೂಡಿಕೆಗಳನ್ನು ನಷ್ಟದಲ್ಲಿ ಮಾರಾಟ ಮಾಡಿದರು. ಮುಂದೆ ಕ್ಷಿಪ್ರವಾಗಿ ಮಾರುಕಟ್ಟೆ ಏರುಗತಿಯಲ್ಲಿ ಮೂರ್ನಾಲ್ಕು ಪಾಲು ಲಾಭಗಳಿಸಿಕೊಡುವ ಸ್ಥಿತಿಗೆ ಬಂದಾಗ ನಿರಾಶೆಪಟ್ಟರು. ಹೀಗಾಗಿ, ಇಂತಹ ಅನಿರೀಕ್ಷಿತ ವಿದ್ಯಮಾನಗಳು ಯಾವುದೇ ಸಮಯದಲ್ಲೂ ಬರಬಹುದು. ಅದಕ್ಕೆ ಎಲ್ಲೂ ಸ್ಪಷ್ಟ ಉತ್ತರ ಸಿಗಲಾರದು. ಮಾರುಕಟ್ಟೆ ನಡೆಯುವುದು ಒಬ್ಬರ ಆಸೆ- ಆಕಾಂಕ್ಷೆ ಹಾಗೂ ಅದಕ್ಕೆ ತದ್ವಿರುದ್ಧ ನಿರಾಶೆ- ಹತಾಶೆ ಹಾಗೂ ತೃಪ್ತಿ ಇದ್ದು ಮಾರಾಟ ಮಾಡುವವರ ನಡುವೆ ತಾನೇ. ಹೀಗಾಗಿ ಒಂದು ಹಂತದಿಂದ ಇದೊಂದು ಪ್ರಾಯೋಗಿಕ ಅನುಭವ ಇರಬೇಕಾದ ಕ್ಷೇತ್ರ.

ನೀವು ಕೇಳಿರುವಂತೆ ಮಾಹಿತಿ ನೀಡುವ ಸಾಕಷ್ಟು ಪುಸ್ತಕಗಳು ಮಾರುಕಟ್ಟೆಯಲ್ಲಿವೆ. ಆದರೆ, ಬಹಳಷ್ಟು ಪುಸ್ತಕಗಳು ಹೂಡಿಕೆಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿಯನ್ನು ಹೊಂದಿವೆ. ಕೆಲವು ಮೂಲ ವಿಚಾರಗಳ ಬಗ್ಗೆ ಓದುಗರಿಗೆ ಮಾಹಿತಿ ನೀಡುವಲ್ಲಿ ನೆರವಾಗುವ ಪುಸ್ತಕಗಳೂ ಇವೆ. ಹೀಗಾಗಿ, ನಿಮ್ಮ ಆಸಕ್ತಿ ಯಾವುದರ ಬಗ್ಗೆ ಹಾಗೂ ಈಗಾಗಲೇ ನಿಮಗೆ ತಿಳಿದಿರುವ ವಿಚಾರಗಳು ಏನು ಎಂಬುದನ್ನು ಮೊದಲು ಗಮನದಲ್ಲಿಟ್ಟುಕೊಳ್ಳಿ. ಮುಂದೆ ತಿಳಿಯಬೇಕಾದ್ದನ್ನೂ ಗ್ರಹಿಸಿ. ಹೀಗಾಗಿ, ನಿರ್ದಿಷ್ಟ ಪುಸ್ತಕದ ಉಲ್ಲೇಖ ನೀಡುವ ಬದಲು ಈ ಅಂಶಗಳನ್ನು ಆನ್‌ಲೈನ್ ಅಥವಾ ಸಮೀಪದ ಉತ್ತಮ ಪುಸ್ತಕಾಲಯಗಳಿಗೆ ಭೇಟಿ ನೀಡಿ. ಅಲ್ಲಿ ನಿಮಗೆ ಬೇಕಿರುವ ಮಾಹಿತಿ ಒಳಗೊಂಡಿರುವ ಪುಸ್ತಕಗಳನ್ನು ಆಯ್ಕೆ ಮಾಡಿ. ಹೂಡಿಕೆಗೆ ಸಂಬಂಧಿಸಿ ಇಂದು ಕೇವಲ ಪುಸ್ತಕಗಳಷ್ಟೇ ಅಲ್ಲದೆ, ಪ್ರಸ್ತುತ ಅಷ್ಟೇ ಮಾಹಿತಿ ನೀಡುವ ವಿಡಿಯೊ ನೋಡಿಯೂ ನಿಮ್ಮ ಜ್ಞಾನವನ್ನು ಪ್ರಸಕ್ತ ಸನ್ನಿವೇಶಕ್ಕೆ ತಕ್ಕಂತೆ ಪಡೆಯಬಹುದು.

ಒಂದು ಗಮನದಲ್ಲಿ ಇರಲಿ. ಹೂಡಿಕೆದಾರರು ಈ ತನಕ ಹೂಡಿಕೆ ಮಾಡಿ ಸಾಕಷ್ಟು ಸಂಪತ್ತು ಸೃಷ್ಟಿಸಿದ್ದು ತಮ್ಮ ಅನುಭವದಿಂದಲೇ. ಈ ಅನುಭವವೇ ಇಂದು ನಾವು ಓದುವ ಅವರ ಬದುಕಿನ ಚರಿತ್ರೆಯು ಪುಸ್ತಕ ರೂಪವಾಗಿ ಬಂದಿದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ವಾರನ್ ಬಫೆಟ್ ಜೀವನ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಗೂಳಿ ಓಟಕ್ಕೆ ತಡೆ

ಮುಂಬೈ (ಪಿಟಿಐ): ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸತತ ಏಳು ವಹಿವಾಟುಗಳಲ್ಲಿ ಓಟ ಮುಂದುವರಿಸಿದ್ದ ಗೂಳಿಯು, ಗುರುವಾರದ ವಹಿವಾಟಿನಲ್ಲಿ ಮುಗ್ಗರಿಸಿತು.



ಐಸಿಐಸಿಐ ಬ್ಯಾಂಕ್ ಮತ್ತು ಭಾರ್ತಿ ಏರ್‌ಟೆಲ್ ಷೇರುಗಳ ಮಾರಾಟ ಹೆಚ್ಚಳ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟು ದೇಶೀಯ ಷೇರುಪೇಟೆ ಮೇಲೂ ಪರಿಣಾಮ ಬೀರಿದೆ ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 315 ಅಂಶ ಇಳಿಕೆ ಕಂಡು 79,801 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಇಳಿಕೆ ಕಂಡು 24,246 ಅಂಶಗಳಲ್ಲಿ ಸ್ಥಿರಗೊಂಡಿತು. ಕಳೆದ ಏಳು ವಹಿವಾಟಿನಲ್ಲಿ ಸೆನ್ಸೆಕ್ಸ್ 6,269 ಅಂಶ (ಶೇ 8.48) ಮತ್ತು ನಿಫ್ಟಿ 1,929 ಅಂಶ (ಶೇ 8.61) ಗಳಿಕೆ ಕಂಡಿದೆ.

2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಹಿಂದೂಸ್ತಾನ್ ಯೂನಿಲಿವರ್ ಕಂಪನಿಯ ನಿವ್ವಳ ಲಾಭದಲ್ಲಿ ಇಳಿಕೆಯಾಗಿದೆ. ಇದರಿಂದ ಕಂಪನಿಯ ಷೇರಿನ ಮೌಲ್ಯವು ಶೇ 4ರಷ್ಟು ಕುಸಿದಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,332 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮಯೋನಿಸ್‌ಗೆ ನಿಷೇಧ

ಚೆನ್ನೈ (ಪಿಟಿಐ): ಮಯೋನಿಸ್ ತಯಾರಿಕೆ, ಸಂಗ್ರಹ ಮತ್ತು ಮಾರಾಟವನ್ನು ತಮಿಳುನಾಡು ಸರ್ಕಾರವು ಒಂದು ವರ್ಷದ ಮಟ್ಟಿಗೆ ನಿಷೇಧಿಸಿದೆ. 'ಮಯೋನಿಸ್ ಸೇವನೆಯು ವಿಷವಾಗುವ ಸಂಭವ ಹೆಚ್ಚಿದೆ' ಎಂದು ಸರ್ಕಾರ ಹೇಳಿದೆ.

ಏಪ್ರಿಲ್ 8ರಿಂದ ಅನ್ವಯವಾಗುವಂತೆ ಸರ್ಕಾರ ಆದೇಶ ಹೊರಡಿಸಿತ್ತು. ಮಯೋನಿಸ್ ಅನ್ನು ಬೇಯಿಸದ ಮೊಟ್ಟೆ, ತರಕಾರಿ ಎಣ್ಣೆ, ವಿನೆಗರ್ ಮತ್ತು ಕೆಲವು ವಸ್ತುಗಳಿಂದ ತಯಾರಿಸಲಾಗುತ್ತದೆ. ಇದನ್ನು ಹಲವು ಆಹಾರ ಪದಾರ್ಥಗಳಲ್ಲಿ ಬಳಸಲಾಗುತ್ತದೆ.

'ಮಯೋನಿಸ್ ತಯಾರಿಸಲು ಬೇಯಿಸದ ಮೊಟ್ಟೆಯನ್ನು ಬಳಸಲಾಗುತ್ತದೆ. ಜೊತೆಗೆ, ಇದರ ಸಂಗ್ರಹವನ್ನೂ ಸೂಕ್ತ ರೀತಿಯಲ್ಲಿ ಮಾಡುವುದಿಲ್ಲ. ಇದರಿಂದ ಹಲವು ಬಗೆಯ ಸೂಕ್ಷ್ಮಜೀವಾಣುಗಳು ಉತ್ಪತ್ತಿಯಾಗುತ್ತಿವೆ. ಇದು ಮಯೋನಿಸ್ ಅನ್ನು ವಿಷವಾಗಿಸುತ್ತಿದೆ' ಎಂದು ಸರ್ಕಾರವು ತನ್ನ ಆದೇಶದಲ್ಲಿ ಹೇಳಿದೆ.

ಗಾಜಾ ಮೇಲೆ ಇಸ್ರೇಲ್ ದಾಳಿ 28 ಮಂದಿ ಸಾವು

ದೀರ್ ಅಲ್ ಬಲಾಹ್ (ಎಪಿ): ಗಾಜಾ ಪಟ್ಟಿಯ ವಿವಿಧೆಡೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ 28 ಮಂದಿ ಮೃತಪಟ್ಟಿದ್ದಾರೆಂದು ಗಾಜಾದ ಆರೋಗ್ಯ ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಉತ್ತರ ಗಾಜಾದ ಜಬಾಲಿಯಾದಲ್ಲಿನ ಪೊಲೀಸ್ ಠಾಣೆ ಮೇಲೆ ನಡೆದ ದಾಳಿಯಲ್ಲಿ 9 ಮಂದಿ ಮೃತಪಟ್ಟಿದ್ದರೆ, ಖಾನ್ ಯೂನಿಸ್ ನಗರದ ಮೇಲಿನ ದಾಳಿಯಲ್ಲಿ ತಾಯಿ, ನಾಲ್ಕು ಮಕ್ಕಳು ಸೇರಿ ಏಳು ಮಂದಿ ಮೃತಪಟ್ಟಿದ್ದಾರೆ.

ಕೇಂದ್ರ ಗಾಜಾದಲ್ಲಿ ಆರು ಮಂದಿ ಮೃತಪಟ್ಟಿದ್ದರೆ, ಮನೆಯೊಂದರ ಮೇಲೆ ನಡೆದ ದಾಳಿಯಲ್ಲಿ ನಾಲ್ಕು ಮಕ್ಕಳು ಮತ್ತು ಅವರ ಪೋಷಕರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ರಷ್ಯಾ ದಾಳಿ: ಪುಟಿನ್ ವಿರುದ್ಧ ಟ್ರಂಪ್ ಟೀಕೆ

ವಾಷಿಂಗ್ಟನ್/ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಮೇಲೆ ರಷ್ಯಾ ಭೀಕರ ದಾಳಿ ನಡೆಸಿರುವುದಕ್ಕೆ ಪುಟಿನ್ ವಿರುದ್ಧ ಅಪರೂಪಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೀಕಾಪ್ರಹಾರ ನಡೆಸಿದ್ದು, 'ವ್ಲಾದಿಮಿರ್ ದಾಳಿ ನಿಲ್ಲಿಸಿ' ಎಂದು ಗುರುವಾರ ಕಟುವಾಗಿ ಹೇಳಿದ್ದಾರೆ.



'ಕೀವ್ ಮೇಲಿನ ದಾಳಿ ಸರಿಯಲ್ಲ. ಇದು ಅನಗತ್ಯ ಮತ್ತು ಕೆಟ್ಟ ಸಮಯ. ವಾರಕ್ಕೆ 5 ಸಾವಿರ ಸೈನಿಕರು ಸಾಯುತ್ತಿದ್ದಾರೆ. ವ್ಲಾದಿಮಿರ್ ಈ ದಾಳಿ ನಿಲ್ಲಿಸಿ! ಶಾಂತಿ ಒಪ್ಪಂದವನ್ನು ಮಾಡಿಕೊಳ್ಳೋಣ!' ಎಂದು ತಮ್ಮ 'ಟ್ರುಥ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೀವ್ ನಗರದ ಮೇಲೆ ರಷ್ಯಾ ಒಂದು ತಾಸಿನ ಅವಧಿಯಲ್ಲಿ ನಡೆಸಿರುವ ಕ್ಷಿಪಣಿ ಮತ್ತು ಡ್ರೋನ್ ದಾಳಿಯಿಂದ 9 ಜನರು ಮೃತಪಟ್ಟಿದ್ದು, 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕೀವ್ ಮೇಲೆ ಕಳೆದ ಜುಲೈನಿಂದ ಈವರೆಗೆ ನಡೆದ ದಾಳಿಗಳಲ್ಲಿ ಇದು ಅತ್ಯಂತ ಹೆಚ್ಚಿನ ಮಾರಕ ದಾಳಿ ಎನಿಸಿದೆ.

ಉಕ್ರೇನ್ ಮತ್ತು ರಷ್ಯಾ ನಡುವೆ ಶಾಂತಿ ಒಪ್ಪಂದ ಏರ್ಪಡಿಸುವ ಅಮೆರಿಕದ ಪ್ರಯತ್ನವು ಪ್ರಗತಿ ಸಾಧಿಸದ ಕಾರಣ ಟ್ರಂಪ್ ಹತಾಶೆ ಹೆಚ್ಚುತ್ತಿದೆ.

ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ದೇಶಕ್ಕೆ ವಾಪಸಾಗುವುದಾಗಿ ಹೇಳಿದ್ದಾರೆ. 'ರಷ್ಯಾದ ಅತಿರೇಕದ ದಾಳಿಗಳಲ್ಲಿ ಈ ದಾಳಿಯೂ ಒಂದಾಗಿದೆ' ಎಂದಿದ್ದಾರೆ.

ಅಲ್ಲದೇ, ಯುದ್ಧಕೊನೆಗೊಳಿಸುವ ನಿಟ್ಟಿನಲ್ಲಿ ಮಾತುಕತೆಗಳು ನಡೆಯುತ್ತಿವೆ. ಆದರೆ, ರಷ್ಯಾ ಹೇಗೆ ನಡೆದುಕೊಳ್ಳಲಿದೆ ಎಂಬುದರ ಮೇಲೆ ಅಂತಿಮ ನಿರ್ಧಾರ ಅವಲಂಬಿತವಾಗಿದೆ ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ.

ದೇಶೀಯ ಪಾಲುದಾರರ ಧ್ವನಿಗೆ ಕಿವಿಗೊಡಿ: ಟ್ರಂಪ್ ಆಡಳಿತಕ್ಕೆ ಕೋರಿಕೆ

ಅಮೆರಿಕ ಜತೆ ಮಾತುಕತೆಗೆ ಚೀನಾ ನಕಾರ

ಬೀಜಿಂಗ್ (ಪಿಟಿಐ): ಸುಂಕದ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಅಮೆರಿಕದೊಂದಿಗೆ ಯಾವುದೇ ರೀತಿಯ ಮಾತುಕತೆ ನಡೆಸುವುದನ್ನು ಚೀನಾ ಗುರುವಾರ ತಳ್ಳಿಹಾಕಿದೆ. ಈ ಸಂಬಂಧ ದ್ವಿಪಕ್ಷೀಯ ಮಾತುಕತೆ ಪ್ರಗತಿಯಲ್ಲಿದೆ ಎನ್ನುವ ವರದಿಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದೂ ಅದು ಹೇಳಿದೆ.

'ಚೀನಾ ಮತ್ತು ಅಮೆರಿಕ ಸುಂಕದ ಬಗ್ಗೆ ಸಮಾಲೋಚನೆ ಅಥವಾ ಮಾತುಕತೆ ನಡೆಸುತ್ತಿಲ್ಲ. ಈ ವಿಚಾರದಲ್ಲಿ ಈವರೆಗೆ ಯಾವುದೇ ಒಪ್ಪಂದಕ್ಕೆ ಬಂದಿಲ್ಲ' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಇಲ್ಲಿ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

'ಸುಂಕ ಸಮರದ ಬಗ್ಗೆ ಉಭಯ ರಾಷ್ಟ್ರಗಳು ಮಾತುಕತೆ ನಡೆಸುತ್ತಿವೆ ಮತ್ತು ಶೀಘ್ರವೇ ಒಪ್ಪಂದಕ್ಕೆ ಬರಲಿವೆ' ಎಂಬ ಮಾಧ್ಯಮ ವರದಿಗಳಿಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

'ಸುಂಕ ಸಮರ ಪ್ರಾರಂಭಿಸಿದ್ದು ಅಮೆರಿಕ. ಚೀನಾದ ನಿಲುವು ಅಚಲ ಮತ್ತು ಸ್ಪಷ್ಟವಾಗಿದೆ. ಅನಿವಾರ್ಯವಾದರೆ ನಾವು ಹೋರಾಡುತ್ತೇವೆ. ಅಮೆರಿಕವು ಮಾತುಕತೆ ಬಯಸಿದರೆ ಅದಕ್ಕೆ ನಮ್ಮ ಕಡೆಯಿಂದ ಬಾಗಿಲುಗಳು ಸದಾ ತೆರೆದಿರುತ್ತವೆ. ಚರ್ಚೆ ಮತ್ತು ಮಾತುಕತೆಗಳು ಸಮಾನತೆ, ಗೌರವ ಮತ್ತು ಪರಸ್ಪರರಿಗೆ ಲಾಭ ತರುವಂತಿರಬೇಕು' ಎಂದು ಗುವೊ ಹೇಳಿದ್ದಾರೆ.

'ಅಮೆರಿಕ ನಿಜವಾಗಿಯೂ ಸಮಸ್ಯೆಯನ್ನು ಬಗೆಹರಿಸಲು ಬಯಸಿದರೆ, ಅದು ಅಂತರರಾಷ್ಟ್ರೀಯ ಸಮುದಾಯ ಮತ್ತು ದೇಶೀಯ ಪಾಲುದಾರರ ನ್ಯಾಯಸಮ್ಮತ ಧ್ವನಿಗಳಿಗೆ ಕಿವಿಗೊಡಬೇಕು. ಚೀನಾದ ಮೇಲಿನ ಎಲ್ಲ ರೀತಿಯ ಏಕಪಕ್ಷೀಯ ಸುಂಕಗಳನ್ನು ಸಂಪೂರ್ಣ ರದ್ದುಗೊಳಿಸಬೇಕು' ಎಂದು ಸಚಿವಾಲಯದ ಮತ್ತೊಬ್ಬ ವಕ್ತಾರ ಹಿ ಯಡಾಂಗ್ ಅವರು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ್ದಾರೆ.

'ವ್ಯಾಪಾರ ಒಪ್ಪಂದಕ್ಕೆ ಭಾರತ ಸಹಿ ಸಾಧ್ಯತೆ'

ನ್ಯೂಯಾರ್ಕ್/ವಾಷಿಂಗ್ಟನ್(ಪಿಟಿಐ): 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕವನ್ನು ತಪ್ಪಿಸಲು ಭಾರತವು ಅಮೆರಿಕದ ಜತೆಗೆ ಮೊದಲ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ನಿರೀಕ್ಷೆ ಇದೆ' ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿರುವುದಾಗಿ 'ನ್ಯೂಯಾರ್ಕ್ ಪೋಸ್ಟ್' ವರದಿ ಮಾಡಿದೆ.

'ಭಾರತದೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆಗಳು ಅಂತಿಮಘಟ್ಟದಲ್ಲಿವೆ. ಏಕೆಂದರೆ ವಿಶ್ವದ ಅತ್ಯಂತ ಜನನಿಬಿಡ ರಾಷ್ಟ್ರದ ಮೇಲೆ ಹೆಚ್ಚಿನ ಸುಂಕಗಳನ್ನು ಹೇರಿಲ್ಲ. ಜತೆಗೆ ಭಾರತ ಕಡೆಯಲ್ಲಿ ಸುಂಕ ರಹಿತ ವ್ಯಾಪಾರ ಅಡೆತಡೆಗಳು ಮತ್ತು ಸರ್ಕಾರಿ ಸಬ್ಸಿಡಿಗಳು ಬಹಳ ಕಡಿಮೆ ಇವೆ. ಹಾಗಾಗಿ, ಭಾರತೀಯರೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ತುಂಬಾ ಸುಲಭ' ಎಂದು ಬೆಸೆಂಟ್ ಹೇಳಿರುವುದಾಗಿ ಅದು ವರದಿ ಮಾಡಿದೆ.

ಭಾರತವು ಅಮೆರಿಕಕ್ಕೆ ರಫ್ತು ಮಾಡುವ ಸರಕುಗಳ ಮೇಲೆ ಹೇರಿರುವ ಶೇ 26ರಷ್ಟು ಪ್ರತಿಸುಂಕಕ್ಕೆ ಟ್ರಂಪ್ 90 ದಿನಗಳ ಮಟ್ಟಿಗೆ ತಡೆ ನೀಡಿದ್ದಾರೆ. ಈ ಗಡುವು ಜುಲೈ 8ರಂದು ಮುಗಿಯಲಿದೆ. ಆದಾಗ್ಯೂ ಇತರ ದೇಶಗಳಂತೆಯೇ ಭಾರತವು ಸದ್ಯ ಅಮೆರಿಕ ಹೇರಿರುವ ಶೇ 10ರಷ್ಟು ಸುಂಕದ ವ್ಯಾಪ್ತಿಗೆ ಒಳಪಟ್ಟಿದೆ.

ನ್ಯಾಯಾಲಯಕ್ಕೆ ಮೊರೆ

ನ್ಯೂಯಾರ್ಕ್(ಎಪಿ): 'ಪ್ರತಿಸುಂಕ ಹೇರಿದ ಕ್ರಮವನ್ನು ನಿಲ್ಲಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸೂಚನೆ ನೀಡಿ' ಎಂದು 12 ರಾಜ್ಯಗಳು ಅಂತರ ರಾಷ್ಟ್ರೀಯ ವ್ಯಾಪಾರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿವೆ. ಕಾನೂನು ಬಾಹಿರವಾದ ಈ ಕ್ರಮವು ಅಮೆರಿಕದ ಆರ್ಥಿಕತೆಯನ್ನು ಅಸ್ತವ್ಯಸ್ತ ಸ್ಥಿತಿಗೆ ತಲುಪಿಸಿದೆ ಎಂದೂ ದೂರಿವೆ.

'ಕಾನೂನುಬದ್ಧವಾಗಿ ಉತ್ತಮ ರೀತಿಯಲ್ಲಿ ಅಧಿಕಾರ ಚಲಾಯಿಸುವುದಕ್ಕಿಂತ ಟ್ರಂಪ್ ಅವರು ತಮ್ಮ ಸ್ವಹಿತಾಸಕ್ತಿಗಾಗಿ ದೇಶದ ವ್ಯಾಪಾರ ನೀತಿಯನ್ನು ಬಳಸಿಕೊಳ್ಳುತ್ತಿದ್ದಾರೆ. ಸುಂಕವನ್ನು ಅಕ್ರಮ ಎಂದು ಘೋಷಿಸಿ, ಸರ್ಕಾರಿ ಸಂಸ್ಥೆಗಳು ಮತ್ತು ಅಧಿಕಾರಿಗಳಿಗೆ ಇರುವ ಸುಂಕ ಹೇರುವ ಅಧಿಕಾರವನ್ನು ರದ್ದು ಮಾಡಿ' ಎಂದೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	33389-43398
ಚಿಪ್ಪು	11200-33669
ಕೋಕ	10100-27689
ಹೊಸಚಾಲಿ	29100-42900
ಸಾಗರ	
ಬಿಳಿಗೋಟು	10261-27199
ಚಾಲಿ	24699-39166
ಕೋಕ	10989-27899
ಕೆಂಪುಗೋಟು	17989-31309
ರಾಶಿ	32999-60099
ಸಿಪ್ಪೆಗೋಟು	8699-20309
ಶಿವಮೊಗ್ಗ	
ಬೆಟ್ಟೆ	53669-63389
ಗೊರಬಲು	22196-35669
ರಾಶಿ	48016-60589
ಸರಕು	67240-96340
ಸಿದ್ದಾಪುರ	
ಬಿಳಿಗೋಟು	26509-32099
ಚಾಲಿ	34189-41199
ಕೋಕ	17499-24989
ಕೆಂಪುಗೋಟು	20499-22689
ರಾಶಿ	42699-51099
ತಟ್ಟಿಬೆಟ್ಟೆ	28199-36199
ಯಲ್ಲಾಪುರ	
ಅಪಿ	64000-64000
ಬಿಳಿಗೋಟು	14899-34600
ಚಾಲಿ	34719-43599
ಕೋಕ	4801-17710
ಕೆಂಪುಗೋಟು	16122-26329
ರಾಶಿ	40000-56655
ತಟ್ಟಿಬೆಟ್ಟೆ	27016-39600

ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ: ಬಹುಕೋಟಿ ತೆರಿಗೆ ವಂಚನೆ ಜಾಲ ಪತ್ತೆ

₹20 ಲಕ್ಷ ಲಂಚ: ವಾಣಿಜ್ಯ ತೆರಿಗೆ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ವಂಚಿಸಿ ಕೋಟ್ಯಂತರ ಮೌಲ್ಯದ ಪಾನ್ ಮಸಾಲವನ್ನು ದೆಹಲಿಯಿಂದ ಬೆಂಗಳೂರಿಗೆ ಸಾಗಣೆ ಮಾಡುತ್ತಿದ್ದ ಜಾಲಕ್ಕೆ ನೆರವಾಗುತ್ತಿದ್ದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಯನ್ನು ₹20 ಲಕ್ಷ ಲಂಚದ ಸಮೇತ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಕೋಟ್ಯಂತರ ಮೊತ್ತದ ತೆರಿಗೆ ವಂಚಿಸುತ್ತಿದ್ದ ಜಾಲವನ್ನು ಪತ್ತೆ ಮಾಡಿದ್ದಾರೆ.

'ದೆಹಲಿಯಿಂದ ಪಾನ್ ಮಸಾಲವನ್ನು ಬೆಂಗಳೂರಿಗೆ ಕಳ್ಳಸಾಗಣೆ ಮಾಡುತ್ತಿರುವ ಬಗ್ಗೆ ಕೆಲ ಮಾಹಿತಿ ಇತ್ತು. ಈ ಸಂಬಂಧ ತನಿಖೆ ನಡೆಸಿ, ಇನ್ನಷ್ಟು ಮಾಹಿತಿ ಕಲೆ ಹಾಕಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಹಾದುಬರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ವಾಹನಗಳನ್ನು ಪರಿಶೀಲಿಸದೆ, ನಗರದೊಳಕ್ಕೆ ಬಿಡಲಾಗುತ್ತಿತ್ತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ತಪಾಸಣೆ ನಡೆಸದೆ ಬಿಡಲಾದ ಟ್ರಕ್‌ಗಳಿಗೆ ಪ್ರತಿಯಾಗಿ ಅವುಗಳ ಮಾಲೀಕರಿಂದ ವಾಣಿಜ್ಯ ತೆರಿಗೆ ಇಲಾಖೆಯ ಹಲವು ಅಧಿಕಾರಿಗಳಿಗೆ ಪ್ರತಿ ತಿಂಗಳು, ಲಂಚ ಪಾವತಿಯಾಗುತ್ತಿತ್ತು. ವಾಣಿಜ್ಯ ತೆರಿಗೆ ಅಧಿಕಾರಿಗಳ ಚಲನವಲನವನ್ನು ಪರಿಶೀಲಿಸಲಾಗಿತ್ತು. ಬೆಂಗಳೂರು ನಗರದ ನಾಗರಬಾವಿ ವೃತ್ತದ ಬಳಿ ಇರುವ 'ನಮ್ಮೂರ ತಿಂಡಿ' ಹೋಟೆಲ್ ಬಳಿ ವಾಣಿಜ್ಯ ತೆರಿಗೆ ಅಧಿಕಾರಿ ಮತ್ತು ಟ್ರಕ್‌ಗಳ ಮಾಲೀಕರ ಪರವಾಗಿ ವ್ಯಕ್ತಿಯೊಬ್ಬ ಬರುತ್ತಾರೆ ಎಂಬ ಮಾಹಿತಿ ಇತ್ತು. ಅದರಂತೆ ಕಾರ್ಯಾಚರಣೆ ರೂಪಿಸಲಾಗಿತ್ತು' ಎಂದು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಪೊಲೀಸ್‌ನ ಬೆಂಗಳೂರು ಗ್ರಾಮಾಂತರ ವಿಭಾಗದ ಡಿವೈಎಸ್‌ಪಿ ವೆಂಕಟೇಶ ಟಿ.ಸಿ., 'ಬುಧವಾರ ಸಂಜೆ 6.50ರ ವೇಳೆಗೆ ವಾಣಿಜ್ಯ ತೆರಿಗೆ ಪರಿವೀಕ್ಷಕ ನಿಜಾನಂದಮೂರ್ತಿ ಎಂ.ಆರ್ ಅವರಿಗೆ ಮನೋಜ್ ಎಂಬ ವ್ಯಕ್ತಿ ಬ್ಯಾಗ್‌ನಲ್ಲಿ ಹಣ ನೀಡುತ್ತಿದ್ದರು. ಈ ವೇಳೆ ದಾಳಿ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆಯಲಾಯಿತು. ಬ್ಯಾಗ್‌ನಲ್ಲಿ ₹20 ಲಕ್ಷ ಇದ್ದು, ಅದನ್ನೂ ವಶಕ್ಕೆ ಪಡೆಯಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಬೆಂಗಳೂರು ಗ್ರಾಮಾಂತರ ವಿಭಾಗದ ಲೋಕಾಯುಕ್ತ ಎಸ್‌ಪಿ ಪವನ್ ನೆಜ್ಜೂರ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು.

ಶಾಸಕ ವಿನಯ್ ಕುಲಕರ್ಣಿ ಮನೆಯಲ್ಲಿ ಇ.ಡಿ ತಪಾಸಣೆ

ಬೆಂಗಳೂರು: ಐಶ್ವರ್ಯ ಗೌಡ ಅವರು ₹9.82 ಕೋಟಿ ಮೊತ್ತದ ಚಿನ್ನಾಭರಣ ವಂಚಿಸಿದ ಪ್ರಕರಣದಲ್ಲಿ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಮನೆಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ತಪಾಸಣೆ ನಡೆಸಿದರು.

ಶಾಸಕರ ಮನೆಗೆ ಬೆಳಿಗ್ಗೆಯೇ ಬಂದಿದ್ದ ಇ.ಡಿ ಅಧಿಕಾರಿಗಳು ಸಂಜೆಯವರೆಗೂ ತಪಾಸಣೆ ನಡೆಸಿದರು. ಮನೆಯಲ್ಲಿದ್ದ ಸಿಬ್ಬಂದಿಯ ವಿಚಾರಣೆ ನಡೆಸಿದರು. ಜತೆಗೆ ಮನೆಯ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು, ಕರೆ ವಿವರಗಳನ್ನು ಕಲೆ ಹಾಕಿದರು ಎಂದು ಮೂಲಗಳು ತಿಳಿಸಿವೆ.

ಐಶ್ವರ್ಯ ಗೌಡ ವಶಕ್ಕೆ: ಇದೇ ವೇಳೆ ಐಶ್ವರ್ಯ ಗೌಡ ಅವರ ಆರ್‌ಎಂಸಿ ಯಾರ್ಡ್ ನಿವಾಸ ನಿವಾಸದ ಮೇಲೆ ದಾಳಿ ನಡೆಸಿ, ಪರಿಶೀಲನೆ ಮಾಡಿದರು.

ಸಂಜೆಯವರೆಗೂ ನಡೆದ ಪರಿಶೀಲನೆ ನಂತರ ಹಲವು ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದರು. ಐಶ್ವರ್ಯ ಅವರನ್ನು ಮನೆಯಲ್ಲಿಯೇ ಕೆಲಕಾಲ ವಿಚಾರಣೆ ನಡೆಸಿ, ರಾತ್ರಿಯ ವೇಳೆಗೆ ವಶಕ್ಕೆ ಪಡೆದರು. ನಂತರ ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತಂದರು ಮೂಲಗಳು ತಿಳಿಸಿವೆ.

ಐಶ್ವರ್ಯ ತಾಯಿ ವಿಚಾರಣೆ (ಮಳವಳ್ಳಿ ವರದಿ):



ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಗ್ರಾಮದ ಐಶ್ವರ್ಯ ಗೌಡ ಅವರ ಮನೆ ಮೇಲೆ ಇ.ಡಿ ಅಧಿಕಾರಿಗಳು ಗುರುವಾರ ದಾಳಿ ನಡೆಸಿದರು

ತಾಲ್ಲೂಕಿನ ಕಿರುಗಾವಲು ಗ್ರಾಮದಲ್ಲಿರುವ ಐಶ್ವರ್ಯ ಗೌಡ ಅವರ ಮನೆಯ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿ, ಪರಿಶೀಲಿಸಿದರು.

ಇಬ್ಬರು ಸಿಆರ್‌ಪಿಎಫ್ ಸಿಬ್ಬಂದಿಯ ಭದ್ರತೆಯೊಂದಿಗೆ, ಗುರುವಾರ ಬೆಳಿಗ್ಗೆ 9ರ ವೇಳೆಗೆ ಬಂದ ಅಧಿಕಾರಿಗಳು ಸಂಜೆಯವರೆಗೂ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದರು. ಕೆಲ ದಾಖಲೆಗಳ ಸಂಬಂಧ ಅವರ ತಾಯಿ ಮತ್ತು ಸಹೋದರನ ವಿಚಾರಣೆ ನಡೆಸಿದರು.

ಹಲವು ತಿಂಗಳಿಂದ ಸಕ್ರಿಯ

'ಈ ಜಾಲವು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಹತ್ತಾರು ತಿಂಗಳಿಂದ ಸಕ್ರಿಯವಾಗಿತ್ತು ಎಂಬ ಮಾಹಿತಿ ದೊರೆತಿದೆ. ರಾಜ್ಯ ಸರ್ಕಾರಕ್ಕೆ ಈ ಜಾಲವು ಈಗಾಗಲೇ ಹತ್ತಾರು ಕೋಟಿ ತೆರಿಗೆ ವಂಚಿಸಿದೆ' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

'ನಕಲಿ ಇನ್ವಾಯ್ಸ್‌ಗಳನ್ನು ಸೃಷ್ಟಿಸಿ, ಎಲ್ಲೆಡೆ ತಪಾಸಣೆ ಪಾಸು ಮಾಡಿಕೊಂಡು ಕಳ್ಳಸಾಗಣೆ ಮಾಡಲಾಗಿದೆ. ಈ ಬಗ್ಗೆ ಅರಿವಿದ್ದ ಅಧಿಕಾರಿಗಳಿಗೆ ಲಂಚ ನೀಡಿ, ಅಕ್ರಮ ಮುಂದುವರೆಸಲಾಗಿದೆ. ಲಂಚದ ಮೊತ್ತವೇ ₹20 ಲಕ್ಷ ಇರುವಾಗ, ಅಕ್ರಮದ ಮೊತ್ತ ಎಷ್ಟು ದೊಡ್ಡದಿರಬಹುದು ಎಂಬುದು ಗೊತ್ತಾಗುತ್ತದೆ' ಎಂದು ಹೇಳಿವೆ.

'ವಾಣಿಜ್ಯ ಇಲಾಖೆಯ ಹಲವು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ. ಈ ಕಳ್ಳಸಾಗಣೆಗೆ ಬಳಕೆಯಾಗುತ್ತಿದ್ದ ಟ್ರಕ್‌ಗಳ ಮಾಲೀಕರು, ದೆಹಲಿಯಲ್ಲಿನ ಪಾನ್ ಮಸಾಲ ತಯಾರಕ ಕಂಪನಿಗಳು, ಮಾರಾಟಗಾರರು ಮತ್ತು ಖರೀದಿದಾರರ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಡಿಜಿಟಲ್ ಮಾಧ್ಯಮಕ್ಕೆ ಜಾಹೀರಾತು: ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರ್ಜಾಲ ಬಳಸುವ ಜನರಿಗೆ ಸರ್ಕಾರದ ನೀತಿ ಮತ್ತು ಯೋಜನೆಗಳನ್ನು ಡಿಜಿಟಲ್ ಜಾಹೀರಾತುಗಳ ಮೂಲಕ ತಲುಪಿಸಲು ವಾರ್ತಾ ಇಲಾಖೆಯು 'ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ-2024' ಅನ್ನು ಜಾರಿಗೆ ತಂದಿದೆ.

'ಡಿಜಿಟಲ್ ಜಾಹೀರಾತಿಗಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಡಿಜಿಟಲ್ ಏಜೆನ್ಸಿ ಮತ್ತು ಮಾಧ್ಯಮಗಳನ್ನು ನೋಂದಾಯಿಸಿಕೊಳ್ಳಲಾಗುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

'ಅಂತರ್ಜಾಲ, ಕಂಪ್ಯೂಟರ್, ಸ್ಮಾರ್ಟ್ ಟಿವಿ, ಸ್ಮಾರ್ಟ್ ಫೋನ್, ಸಾಮಾಜಿಕ ಜಾಲತಾಣಗಳ ಬಳಕೆ ಇತ್ತೀಚೆಗೆ ಹೆಚ್ಚಾಗಿದೆ. ಸಾಂಪ್ರದಾಯಿಕ ಜಾಹೀರಾತುಗಳಿಗಿಂತ ಡಿಜಿಟಲ್ ಜಾಹೀರಾತು ಹೆಚ್ಚು ಪ್ರಭಾವಶಾಲಿಯಾಗಿದೆ. ಅಲ್ಲದೆ, ಹೆಚ್ಚು ವ್ಯಾಪ್ತಿ ಮತ್ತು ನಿರ್ದಿಷ್ಟ ಜನರನ್ನು ತಲುಪುತ್ತಿದೆ. ಈ ಕಾರಣಕ್ಕೆ ಸರ್ಕಾರದ ಕಾರ್ಯಕ್ರಮಗಳು ಮತ್ತು ನೀತಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಮಾದರಿಯಲ್ಲಿ ಡಿಜಿಟಲ್ ಜಾಹೀರಾತು ನೀಡಲು ಮಾರ್ಗಸೂಚಿ ಸಿದ್ಧಪಡಿಸಲಾಗಿದೆ' ಎಂದಿದ್ದಾರೆ.

ಗೂಗಲ್ (ಯೂಟ್ಯೂಬ್), ಮೆಟಾ (ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಬಿಸಿನೆಸ್, ವಾಟ್ಸ್‌ಆ್ಯಪ್ ಚಾನಲ್), ಸರ್ಚ್ ಎಂಜಿನ್‌ಗಳಾದ ಗೂಗಲ್, ಬಿಂಗ್, ಸಾಮಾಜಿಕ ಜಾಲತಾಣಗಳಾದ 'ಎಕ್ಸ್', ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಲಿಂಕ್ಡ್‌ಇನ್, ಸ್ನಾಪ್‌ಚಾಟ್, ಟೆಲಿಗ್ರಾಂ, ಒಟಿಟಿ ಪ್ಲಾಟ್‌ಫಾರ್ಮ್‌ಗಳಾದ ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಡಿಸ್ನಿ ಹಾಟ್‌ಸ್ಟಾರ್, ಸೋನಿಲಿವ್, ಜಿಯೋ ಸಿನಿಮಾ, ಜೀ 5, ವೂಟ್, ಸನ್ ನೆಕ್ಸ್ಟ್ ಮತ್ತು ಟಾಕೀಸ್, ಫಿನ್‌ಟೆಕ್ ಪ್ಲಾಟ್‌ಫಾರ್ಮ್‌ಗಳಾದ ಪೇಟಿಎಂ, ಫೋನ್‌ಪೇ ಮತ್ತು ಜಿಪೇ ಮುಂತಾದ ಡಿಜಿಟಲ್ ವೇದಿಕೆಗಳಡಿ ಅರ್ಹ ಏಜೆನ್ಸಿಗಳ ಮೂಲಕ ಜಾಹೀರಾತು ನೀಡಲು ವಾರ್ತಾ ಇಲಾಖೆ ಉದ್ದೇಶಿಸಿದೆ.

ಡಿಜಿಟಲ್ ಮಾಧ್ಯಮ ಘಟಕಗಳು ಮತ್ತು ಡಿಜಿಟಲ್ ಜಾಹೀರಾತು ಏಜೆನ್ಸಿಗಳು sevasindhu.karnataka.gov.in ವೆಬ್‌ಸೈಟ್ ಮೂಲಕ ನಿಗದಿಪಡಿಸಿರುವ ದಾಖಲಾತಿಗಳೊಂದಿಗೆ ಶುಲ್ಕ ಪಾವತಿಸಿ, ಮೇ 15ರ ಒಳಗೆ ಅರ್ಜಿ ಸಲ್ಲಿಸಲು ವಾರ್ತಾ ಇಲಾಖೆ ತಿಳಿಸಿದೆ.

ವೃತ್ತಿ ಆಧಾರಿತ ಜಾತಿಗಳಲ್ಲೇ ಭೇದ

ಆಯೋಗದ ವಿರುದ್ಧ ವೀರಶೈವ–ಲಿಂಗಾಯತ ಮಹಾಸಭಾ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಥಕ್ಕೆ ಸೇರಿದ ಅತ್ಯಂತ ಹಿಂದುಳಿದ, ವೃತ್ತಿ ಆಧಾರಿತ ಜಾತಿಗಳನ್ನು ಪ್ರವರ್ಗ 3 'ಬಿ'ಗೆ ಸೇರಿಸುವ ಮೂಲಕ ಹಿಂದುಳಿದ ವರ್ಗಗಳ ಆಯೋಗ ಘೋರ ಅಪರಾಧ ಎಸಗಿದೆ ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಂಕರ ಬಿದರಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ನಾಲ್ಕು ವರ್ಣಗಳಿಗೆ ಸೇರಿದ 99ಕ್ಕೂ ಹೆಚ್ಚು ವೃತ್ತಿಗಳ ಜನರು 12ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಪಾದಿಸಿದ ಲಿಂಗಾಯತ ಪಂಥಕ್ಕೆ ಸೇರ್ಪಡೆಯಾದರು. ಅದೇ ವೃತ್ತಿಯ ಕೆಲವರು ಸನಾತನ ಹಿಂದೂ ಧರ್ಮದ ಭಾಗವಾಗಿಯೇ ಮುಂದುವರಿದಿದ್ದಾರೆ. ಹಿಂದೂ ಧರ್ಮ ಹಾಗೂ ಲಿಂಗಾಯತ ಪಂಥಗಳಲ್ಲಿ ವಿಭಜಿತವಾದರೂ ಎರಡೂ ಕಡೆ ಗುರುತಿಸಿಕೊಂಡಿರುವ ಅವರ ವೃತ್ತಿ ಇಂದಿಗೂ ಒಂದೇ ತೆರನಾಗಿವೆ. ಆದರೆ, ಹಿಂದುಳಿದ ಜಾತಿಗಳನ್ನು ವಿಂಗಡಿಸುವಾಗ ಆಯೋಗ ಭೇದ ಮಾಡಿದೆ. ಇಂತಹ ತಾರತಮ್ಯ ಸರಿಯಲ್ಲ ಎಂದು ದೂರಿದರು.

'99ಕ್ಕೂ ಹೆಚ್ಚು ಜಾತಿಗಳನ್ನು ಒಳಗೊಂಡ ಕಾರಣಕ್ಕಾಗಿಯೇ ಲಿಂಗಾಯತವನ್ನು ಒಂದು ಪಂಥ ಅಥವಾ ಧರ್ಮ ಎಂದು ಪರಿಗಣಿಸಬೇಕು ಎಂದು ಮಹಾಸಭಾ ಹಿಂದಿನಿಂದಲೂ ಒತ್ತಾಯಿಸುತ್ತಾ ಬಂದಿದೆ. ಆದರೂ, ಹಿಂದೂ ಧರ್ಮದ ಒಂದು ಭಾಗವಾಗಿಯೇ ಗುರುತಿಸಲಾಗುತ್ತಿದೆ. ಈಗ ಒಂದೇ ತೆರನಾದ ವೃತ್ತಿ ಆಧಾರಿತ ಜಾತಿಗಳನ್ನು ವಿಭಜಿಸಿದ್ದಾರೆ. ಲಿಂಗಾಯತ ಪಂಥದ ಜಾತಿಗಳನ್ನು ಪ್ರವರ್ಗ 3 'ಬಿ'ಗೆ ಸೇರಿಸಿ, ಹಿಂದೂ ಧರ್ಮದ ಅದೇ ಜಾತಿಗಳನ್ನು ಅತ್ಯಂತ ಹಿಂದುಳಿದ, ಅತಿ ಹಿಂದುಳಿದ, ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಯ ಪ್ರವರ್ಗಗಳಿಗೆ ಸೇರಿಸಲಾಗಿದೆ. ಈ ತಾರತಮ್ಯವನ್ನು ಖಂಡಿಸುತ್ತೇವೆ' ಎಂದು ಅವರು ಹೇಳಿದರು.

ಸಂಪುಟ ಟಿಪ್ಪಣಿ, ವರದಿಯಲ್ಲಿ ವ್ಯತ್ಯಾಸ



ಶಂಕರ ಬಿದರಿ

ಸಂಪುಟ ಸಭೆಗೆ ಮಂಡಿಸಿದ ಟಿಪ್ಪಣಿಯಲ್ಲಿ 'ಆಯೋಗದ ಮಾನದಂಡದ ಪ್ರಕಾರ 20ರಿಂದ 149 ಅಂಕಗಳನ್ನು ಪಡೆದ ಜಾತಿಗಳನ್ನು ಸೇರಿಸಲಾಗಿದೆ' ಎಂದು ನಮೂದಿಸಲಾಗಿದೆ. ಸಚಿವರಿಗೆ ನೀಡಿದ ಆಯೋಗದ ದತ್ತಾಂಶ ವರದಿಯಲ್ಲಿ 20ರಿಂದ 49 ಅಂಕಗಳು ಎಂದು ನಮೂದಿಸಲಾಗಿದೆ. ಈ ಕುರಿತು ಸರ್ಕಾರ ಹಾಗೂ ಆಯೋಗ ಸ್ಪಷ್ಟನೆ ನೀಡಬೇಕು ಎಂದು ಶಂಕರ ಬಿದರಿ ಒತ್ತಾಯಿಸಿದರು.

ಹಿಂದೂ ಧರ್ಮದ ಜಾತಿಗಳಿಗೆ ಅತಿ ಹೆಚ್ಚು ಅಂಕ ಹಾಗೂ ಲಿಂಗಾಯತ ಪಂಥದ ಜಾತಿಗಳಿಗೆ ಅತಿ ಕಡಿಮೆ ಅಂಕ ನೀಡಲಾಗಿದೆ. ಈ ವೃತ್ತಿ ಆಧಾರಿತ ಜಾತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು ಒಂದೇ ತೆರನಾಗಿ ಇದ್ದರೂ, ಅಂಕ ನೀಡುವಿಕೆಯಲ್ಲೂ ತಾರತಮ್ಯ ಮಾಡಲಾಗಿದೆ ಎಂದರು.

ಜನವರಿಯಿಂದ ಲಿಂಗಾಯತರ ಗಣತಿ: ವೀರಶೈವ-ಲಿಂಗಾಯತ ಪಂಥದ ಎಲ್ಲ ಜಾತಿಗಳ ಗಣತಿ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮಹಾಸಭಾ ನಡೆಸಲಿದೆ. 2026ರ ಜನವರಿಯಿಂದ ಡಿಸೆಂಬರ್‌ವರೆಗೆ ಇದನ್ನು ನಡೆಸಲಾಗುವುದು ಎಂದು ಶಂಕರ ಬಿದರಿ ಹೇಳಿದರು.

2040ಕ್ಕೆ ಚಂದ್ರನ ಮೇಲೆ ಮೊದಲ ಭಾರತೀಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಂದ್ರಯಾನ-3'ರ ಯಶಸ್ಸಿನಿಂದ ಬೀಗುತ್ತಿರುವ ಇಸ್ರೊ 2027-28ರಲ್ಲಿ ನಾಲ್ಕನೇ ಯಾನಕ್ಕೂ ಸಿದ್ಧತೆ ನಡೆಸಿದೆ. 2040ರಲ್ಲಿ ಚಂದ್ರನ ಮೇಲೆ ಮೊದಲ ಭಾರತೀಯನನ್ನು ಇಳಿಸುವ ಯೋಜನೆಯನ್ನೂ ಹೊಂದಿದೆ.

ಚಂದ್ರಯಾನ-4ರ ಮೂಲಕ ಚಂದ್ರನ ನೆಲದಿಂದ ಕಲ್ಲು-ಮಣ್ಣು ಮತ್ತು ಇತರ ಮಾದರಿಗಳನ್ನು ಭೂಮಿಗೆ ತರಲು ಇಸ್ರೊ ಉದ್ದೇಶಿಸಿದೆ. ಈ ಮಾದರಿಗಳ ಅಧ್ಯಯನದ ಮೂಲಕ ವಿಶ್ವ ವಿಕಾಸದ ಸಂದರ್ಭದಲ್ಲಿ ಸಂಭವಿಸಿದ ಹಲವು ಮಹತ್ವದ ವಿದ್ಯಮಾನಗಳನ್ನು ಅಧ್ಯಯನ ಮಾಡುವುದರ ಜತೆಗೆ, ಚಂದ್ರನಲ್ಲಿ ಇರಬಹುದಾದ ಅಪರೂಪದ ಖನಿಜಗಳ ಬಗ್ಗೆಯೂ ಅಧ್ಯಯನ ನಡೆಸಲಿದೆ.

ಈ ಕುರಿತು ದೇಶದ ವಿವಿಧ ವೈಜ್ಞಾನಿಕ ಸಂಸ್ಥೆಗಳ 50 ವಿಜ್ಞಾನಿಗಳು, ಸಂಶೋಧನೆ ಮತ್ತು ಶೈಕ್ಷಣಿಕ ಕ್ಷೇತ್ರದ 12 ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ರಾಷ್ಟ್ರೀಯ ಮಟ್ಟದ ಸಭೆಯೊಂದನ್ನು ಇಸ್ರೊ ಇತ್ತೀಚೆಗೆ ಹಮ್ಮಿಕೊಂಡಿತ್ತು.

ಚಂದ್ರನ ಕುರಿತು ಉನ್ನತ ಮಟ್ಟದ ಅಧ್ಯಯನ ನಡೆಸುತ್ತಿರುವ ವಿಜ್ಞಾನಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

'ಚಂದ್ರಯಾನ-4'ಕ್ಕೆ ಪೂರಕವಾಗಿ ಮಾದರಿಗಳ ಅಧ್ಯಯನ ಮತ್ತು ವಿಶ್ಲೇಷಣೆಗೆ ಅನುಕೂಲವಾಗುವ ಸೌಲಭ್ಯ ಸ್ಥಾಪಿಸುವ ಅಗತ್ಯವಿದೆ ಎಂದು ಬೆಂಗಳೂರಿನ ಯು.ಆರ್. ರಾವ್ ಉಪಗ್ರಹ ಕೇಂದ್ರದ ತಂಡ ಪ್ರತಿಪಾದಿಸಿದೆ.

ಇಸ್ರೊದ ವೈಜ್ಞಾನಿಕ ಕಾರ್ಯದರ್ಶಿ ಎಂ.ಗಣೇಶ್ ಪಿಳ್ಳೈ ಮಾತನಾಡಿ, 2040ರಲ್ಲಿ ಚಂದ್ರನ ಅಂಗಳಕ್ಕೆ ಮೊದಲ ಭಾರತೀಯನನ್ನು ಕಳುಹಿಸಲು ಈ ಸಮಾಲೋಚನೆ ಸಹಾಯಕವಾಗಿದೆ ಎಂದರು. ಇಸ್ರೊ ವೈಜ್ಞಾನಿಕ ಕಾರ್ಯಕ್ರಮಗಳ ಕಚೇರಿಯ ನಿರ್ದೇಶಕ ಡಾ.ತೀರ್ಥ ಪ್ರತಿಮ್ ದಾಸ್, ಚಂದ್ರನಿಂದ ಹಲವು ಬಗೆಯ ಮಾದರಿಗಳನ್ನು ಸಂಗ್ರಹಿಸಿ ತರಲಾಗುವುದು ಎಂದರು. ಅಹಮದಾಬಾದ್ ಭೌತಸಂಶೋಧನಾ ಲ್ಯಾಬೊರೇಟರಿಯ ನಿರ್ದೇಶ ಡಾ.ಅನಿಲ್ ಭಾರದ್ವಾಜ್ ಮಾತನಾಡಿದರು.

ನಮ್ಮದು ಏಕ ಸಂಸ್ಕೃತಿ, ಆಚರಣೆಯಷ್ಟೇ ವೈವಿಧ್ಯ: ಆರ್‌ಎಸ್‌ಎಸ್ ನಾಯಕ ವೈದ್ಯ

ಮುಂಬೈ(ಪಿಟಿಐ): 'ಭಾರತವು ವಿವಿಧತೆಯನ್ನು ಆಚರಿಸುವ ದೇಶವಾಗಿದೆ. ನಾವು ಯಾರನ್ನೂ ಹೊರಗಿಡುವುದಿಲ್ಲ. ನಮ್ಮ ರಾಷ್ಟ್ರಧ್ವಜದ ಚಕ್ರವು ವಾಸ್ತವದಲ್ಲಿ ಧರ್ಮ ಚಕ್ರವಾಗಿದೆ. ಇದು ಸಮಾಜದ ಎಲ್ಲವನ್ನು ಬೆಸೆಯುವ ಮೂಲಭೂತ ತತ್ವದ ಪ್ರತಿಬಿಂಬ' ಎಂದು ಆರ್‌ಎಸ್‌ಎಸ್ ಜಂಟಿ ಪ್ರಧಾನ ಕಾರ್ಯದರ್ಶಿ ಮನಮೋಹನ್ ವೈದ್ಯ ಹೇಳಿದರು.

ಬುಧವಾರ ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಭಾರತವನ್ನು ವೈವಿಧ್ಯಮಯ ಸಂಸ್ಕೃತಿಗಳ ದೇಶವೆಂದು ವರ್ಣಿಸಲಾಗಿದೆ. ಆದರೆ, ಅದು ತಪ್ಪು. ನಾವು ವಿಭಿನ್ನ ಸಂಸ್ಕೃತಿಗಳನ್ನು ಹೊಂದಿಲ್ಲ, ನಮ್ಮಲ್ಲಿ ಇರುವುದು ಏಕ ಸಂಸ್ಕೃತಿ. ಆದರೆ, ಇದರ ಆಚರಣೆಯಷ್ಟೇ ವಿವಿಧತೆಯಿಂದ ಕೂಡಿದೆ' ಎಂದು ಹೇಳಿದರು.

ರ‍್ಯಾಗಿಂಗ್ ತಡೆಗೆ ನಿಯಮಾವಳಿ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ‍್ಯಾಗಿಂಗ್, ಲೈಂಗಿಕ ಕಿರುಕುಳ, ಜಾತಿ, ಲಿಂಗ, ಅಂಗವೈಕಲ್ಯ ಆಧಾರಿತ ತಾರತಮ್ಯಕ್ಕೆ ಸಂಬಂಧಿಸಿದ ಕರಡು ನಿಯಮಾವಳಿಯನ್ನು ಅಧಿಸೂಚನೆಯಲ್ಲಿ ಪ್ರಕಟಿಸಲು ಯುಜಿಸಿ ಸುಪ್ರೀಂ ಕೋರ್ಟ್ ಗುರುವಾರ ಅನುಮತಿಸಿದೆ.

ನೌಕಾಪಡೆಯಿಂದ ಕ್ಷಿಪಣಿ ಪರೀಕ್ಷೆ

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ • ಭಾರತ, ಪಾಕ್ ಮಧ್ಯೆ ಉದ್ವಿಗ್ನ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯಿಂದಾಗಿ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆ ಮನೆ ಮಾಡಿದೆ. ಇದರ ಬೆನ್ನಲ್ಲೇ, ಭಾರತೀಯ ನೌಕಾಪಡೆ 'ಹೈ ಅಲರ್ಟ್' ಘೋಷಿಸಿದ್ದು, ಗುರುವಾರ ತಾಲೀಮು ಆರಂಭಿಸಿದೆ.

ದೇಶೀಯವಾಗಿ ನಿರ್ಮಿಸಲಾದ, ನೆಲದಿಂದ ಆಗಸಕ್ಕೆ ಚಿಮ್ಮಬಲ್ಲ ಮಧ್ಯಮ ವ್ಯಾಪ್ತಿಯ ಕ್ಷಿಪಣಿಯ ಪರೀಕ್ಷೆಯನ್ನು ಯುದ್ಧನೌಕೆ 'ಐಎನ್‌ಎಸ್ ಸೂರತ್'ನಿಂದ ಅರಬ್ಬಿ ಸಮುದ್ರದಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ ಎಂದು ನೌಕಾಪಡೆಯ ವೆಸ್ಟರ್ನ್ ಕಮಾಂಡ್‌ನ ಮೂಲಗಳು ಹೇಳಿವೆ.

ವೆಸ್ಟರ್ನ್ ನಾವಲ್ ಕಮಾಂಡ್, ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿದೆ.

ರಹಸ್ಯವಾಗಿ ಕಾರ್ಯಾಚರಣೆ ನಡೆಸಿ, ಶತ್ರುರಾಷ್ಟ್ರಗಳ ಗುರಿಯನ್ನು ಧ್ವಂಸ ಮಾಡುವ 'ಐಎನ್‌ಎಸ್ ಸೂರತ್', 'ಪ್ರಾಜೆಕ್ಟ್ 15ಬಿ' ವರ್ಗದ ನಾಲ್ಕು ಮತ್ತು ಕೊನೆಯ ಯುದ್ಧನೌಕೆಯಾಗಿದೆ.

'ಐಎನ್‌ಎಸ್ ಸೂರತ್, ದೇಶೀಯವಾಗಿ ಯುದ್ಧನೌಕೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಹಾಗೂ ಕಾರ್ಯಾಚರಣೆಯಲ್ಲಿ ಭಾರತವು ತನ್ನ ಸಾಮರ್ಥ್ಯ ವೃದ್ಧಿಸಿಕೊಂಡಿರುವುದನ್ನು ತೋರಿಸುತ್ತದೆ' ಎಂದು ವೆಸ್ಟರ್ನ್ ಕಮಾಂಡ್‌ನ ಅಧಿಕಾರಿಗಳು ಹೇಳಿದ್ದಾರೆ.

ಐಎನ್‌ಎಸ್ ಸೂರತ್ ವೈಶಿಷ್ಟ್ಯಗಳು



- ಅತ್ಯಾಧುನಿಕ 'ಬ್ರಹ್ಮೋಸ್' ಹಾಗೂ 'ಬರಾಕ್-8' ಕ್ಷಿಪಣಿಗಳಿಂದ ಸಜ್ಜಿತ
- ಜಲಾಂತರ್ಗಾಮಿ ನಿರೋಧಕ ಆಯುಧಗಳು ಹಾಗೂ ಸಂವೇದಕಗಳನ್ನು ಅಳವಡಿಸಲಾಗಿದೆ. ಪ್ರಮುಖವಾಗಿ ಸೋನಾರ್ ಹಮ್‌ಸಾ ಎನ್‌ಜಿ, ಟಾರ್ಪೆಡೊ ಟ್ಯೂಬ್ ಲಾಂಚರ್‌ಗಳು, ಎಎಸ್‌ಡಬ್ಲ್ಯು ರಾಕೆಟ್ ಲಾಂಚರ್ ಹೊಂದಿದೆ
- ಶತ್ರು ರಾಷ್ಟ್ರಗಳ ಜಲಾಂತರ್ಗಾಮಿಗಳು, ಯುದ್ಧನೌಕೆಗಳು, ಹಡಗು ನಿರೋಧಕ ಕ್ಷಿಪಣಿಗಳು, ಯುದ್ಧವಿಮಾನಗಳ ದಾಳಿ ಎದುರಿಸುವ ಸಾಮರ್ಥ್ಯ. ಇತರ ಹಡಗುಗಳ ನೆರವು ಇಲ್ಲದೆಯೇ ಸ್ವತಂತ್ರವಾಗಿ ಕಾರ್ಯಾಚರಣೆ ನಡೆಸಬಲ್ಲದು

ಸಂಕ್ಷಿಪ್ತ ಸುದ್ದಿ

ಚಿನ್ನ ಕಳ್ಳಸಾಗಣೆ ಆರೋಪಿಗಳಿಗೆ 'ಸುಪ್ರೀಂ' ನೋಟಿಸ್



ನವದೆಹಲಿ(-ಪಿಟಿಐ): ಚಿನ್ನ ಕಳ್ಳಸಾಗಣೆ ಪ್ರಕರಣದ ವಿಚಾರಣೆಯನ್ನು ಕೇರಳದಿಂದ ಕರ್ನಾಟಕಕ್ಕೆ ವರ್ಗಾಯಿಸುವಂತೆ ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯ ಮೇರೆಗೆ ಸುಪ್ರೀಂ ಕೋರ್ಟ್ ಗುರುವಾರ ನಾಲ್ವರು ಆರೋಪಿಗಳಿಗೆ ನೋಟಿಸ್ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ರಾಜೇಶ್ ಬಿಂದಾಲ್ ಅವರಿದ್ದ ನ್ಯಾಯಪೀಠವು ಇ.ಡಿ ಪರವಾಗಿ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಸಲ್ಲಿಸಿದ್ದ ಕೋರಿಕೆ ಗಮನಿಸಿ, ಆರು ವಾರಗಳಲ್ಲಿ ಉತ್ತರಿಸುವಂತೆ ಆರೋಪಿಗಳಿಗೆ ನೋಟಿಸ್ ನೀಡಿದೆ.

ಈ ಪ್ರಕರಣದ ಉಳಿದ ಇತರ ಆರೋಪಿಗಳನ್ನು ಪಕ್ಷಗಾರರನ್ನಾಗಿ ಮಾಡುವಂತೆ ಇ.ಡಿಯು ಅರ್ಜಿಯಲ್ಲಿ ಕೋರಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಹೇಳಿದ್ದಾರೆ.

ಪ್ರಸ್ತುತ, ಇ.ಡಿ ತನ್ನ ಅರ್ಜಿಯಲ್ಲಿ ಪಿ.ಎಸ್. ಸರಿತ್, ಸ್ವಪ್ನಾ ಪ್ರಭಾ ಸುರೇಶ್, ಸಂದೀಪ್ ನಾಯರ್ ಮತ್ತು ಎಂ. ಶಿವಶಂಕರ್ ಅವರನ್ನು ಪಕ್ಷಕಾರರನ್ನಾಗಿ ಮಾಡಿದೆ. ಚಿನ್ನ ಕಳ್ಳಸಾಗಣೆ ಪ್ರಕರಣದ ವಿಚಾರಣೆಯನ್ನು ಕೇರಳದಿಂದ ಕರ್ನಾಟಕಕ್ಕೆ ವರ್ಗಾಯಿಸುವಂತೆ ಕೋರಿ 2022ರಲ್ಲಿ ಇ.ಡಿ ಸುಪ್ರಿಂ ಕೋರ್ಟ್ ಮೆಟ್ಟಿಲೇರಿದೆ.

ತೆಲಂಗಾಣದಲ್ಲಿ 14 ನಕ್ಸಲರು ಶರಣು

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ 14 ನಕ್ಸಲರು ಗುರುವಾರ ಪೊಲೀಸರ ಮುಂದೆ ಶರಣಾಗಿದ್ದಾರೆ.

ಇಬ್ಬರು ಪ್ರಾದೇಶಿಕ ಸಮಿತಿ ಸದಸ್ಯರು (ಎಸಿಎಂ) ಮತ್ತು ವಿವಿಧ ಕೇಡರ್‌ಗೆ ಸೇರಿದ ನಕ್ಸಲರು ಐಜಿಪಿ ಚಂದ್ರಶೇಖರ ರೆಡ್ಡಿ ಅವರ ಸಮ್ಮುಖದಲ್ಲಿ ವಾರಂಗಲ್ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶರಣಾಗಿದ್ದಾರೆ.

ನೀಟ್ ಆಕಾಂಕ್ಷಿ ಮೃತದೇಹ ಪತ್ತೆ

ಕೋಟಾ (ರಾಜಸ್ಥಾನ) (ಪಿಟಿಐ): ನೀಟ್ ಆಕಾಂಕ್ಷಿಯೊಬ್ಬರ ಮೃತದೇಹವು ಇಲ್ಲಿನ ರೈಲು ಹಳಿಯ ಬಳಿ ಗುರುವಾರ ಬೆಳಿಗ್ಗೆ ಪತ್ತೆಯಾಗಿದೆ.

ದೆಹಲಿ ಮೂಲದ ರೋಶನ್ ಶರ್ಮಾ (23) ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಪ್ರಾಥಮಿಕ ತನಿಖೆಯ ಆಧಾರದಲ್ಲಿ ಹೇಳಿದ್ದಾರೆ.

ಶರ್ಮಾ ಅವರು ಬುಧವಾರ ರಾತ್ರಿ ಪೋಷಕರೊಂದಿಗೆ ಮಾತನಾಡಿದ್ದರು. 'ನಾನು ನೀಟ್ ಪರೀಕ್ಷೆ ಬರೆಯಲ್ಲ. ದೆಹಲಿಗೂ ವಾಪಸ್ ಬರುವುದಿಲ್ಲ. ನಾನು ವಿಷ ಸೇವಿಸುತ್ತೇನೆ' ಎಂದು ಶರ್ಮಾ ಹೇಳಿರುವುದಾಗಿ ಕುಟುಂಬ ಸದಸ್ಯರು ಹೇಳಿದ್ದಾರೆ.

ಟ್ರಿಪಲ್ ಜಂಪ್‌ನಲ್ಲಿ ದಾಖಲೆ ಸರಿಗಟ್ಟಿದ ಚಿತ್ರವೇಲ್

ಅನಿಮೇಶ್ ರಾಷ್ಟ್ರೀಯ ದಾಖಲೆ

ಕೊಚ್ಚಿ (ಪಿಟಿಐ): ಮಿಂಚಿನ ಓಟ ಓಡಿದ ಒಡಿಶಾದ ಅನಿಮೇಶ್ ಕುಜೂರ್ ಅವರು ಫೆಡರೇಷನ್ ಕಪ್ ಸೀನಿಯರ್ ರಾಷ್ಟ್ರೀಯ ಅಥ್ಲೆಟಿಕ್ ಸ್ಪರ್ಧೆಗಳ 200 ಮೀ. ಓಟವನ್ನು 20.40 ಸೆಕೆಂಡುಗಳಲ್ಲಿ ಪೂರೈಸಿ ರಾಷ್ಟ್ರೀಯ ದಾಖಲೆ ಮುರಿದರು.

ಈ ಕೂಟದಲ್ಲಿ 100 ಮೀ. ಓಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದ 21 ವರ್ಷ ವಯಸ್ಸಿನ ಕುಜೂರ್, ಕೂಟದ ಅಂತಿಮ ದಿನವಾದ ಗುರುವಾರ ಅತ್ಯಮೋಘ ಓಟ ಓಡಿ, 2022ರಲ್ಲಿ ಕೇರಳದ ತೇನಿಪ್ಪಾಲಂನಲ್ಲಿ ಆಮ್ಲನ್ ಬೋರ್ಗೊಹೈನ್ ಸ್ಥಾಪಿಸಿದ್ದ 20.52 ಸೆ.ಗಳ ದಾಖಲೆ ಮುರಿದರು.

ರಿಲಯನ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಬೊರ್ಗೊಹೈನ್ 20.80 ಸೆ.ಗಳಲ್ಲಿ ಓಟ ಕ್ರಮಿಸಿ ಎರಡನೇ ಸ್ಥಾನ ಪಡೆದರು. ತಮಿಳುನಾಡಿನ ರಾಹುಲ್ ಕುಮಾರ್ (20.85) ಮೂರನೇಯವರಾದರು. ಕುಜೂರ್‌ಗೆ ವಿಶ್ವಚಾಂಪಿಯನ್‌ಷಿಪ್ ಅರ್ಹತಾ ಮಟ್ಟ (20.16 ಸೆ.) ತಲುಪಲು ಸಾಧ್ಯವಾಗಲಿಲ್ಲ. ಆದರೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ 20.53 ಸೆ.ಗಳ ಅರ್ಹತಾ ಮಟ್ಟದೊಳಗೆ ಓಟ ಮುಗಿಸಿದರು.

ದಾಖಲೆ ಸರಿಗಟ್ಟಿದ ಚಿತ್ರವೇಲ್: ಟ್ರಿಪಲ್ ಜಂಪ್‌ನಲ್ಲಿ ಪ್ರವೀಣ್ ಚಿತ್ರವೇಲ್ 17.37 ಮೀ. ಜಿಗಿದು ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಸರಿಗಟ್ಟಿದರು. ಜೊತೆಯಲ್ಲೇ, ಈ ವರ್ಷದ ಸೆಪ್ಟೆಂಬರ್‌ನಲ್ಲಿ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೂ ಅರ್ಹತೆ ಪಡೆದರು. ಈ ಕೂಟಕ್ಕೆ 17.22 ಮೀ. ಅರ್ಹತಾ ಮಟ್ಟ ನಿಗದಿ ಆಗಿತ್ತು.



ಅನಿಮೇಶ್ ಕುಜೂರ್

ಜಿಂದಾಲ್ ಸಂಸ್ಥೆ ಪ್ರತಿನಿಧಿಸುತ್ತಿರುವ 23 ವರ್ಷ ವಯಸ್ಸಿನ ಚಿತ್ರವೇಲ್, 2023ರ ಮೇ ತಿಂಗಳಲ್ಲಿ ಕ್ಯೂಬಾದ ಹವಾನಾದಲ್ಲಿ 17.37 ಮೀ. ಜಿಗಿದು ಈ ಹಿಂದಿನ ದಾಖಲೆ ಸ್ಥಾಪಿಸಿದ್ದರು. ಈ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಯತ್ನದಲ್ಲೇ ದಾಖಲೆ ಸರಿಗಟ್ಟಿದರು.

ವಾಯುಪಡೆಯ ಅಬ್ದುಲ್ಲಾ ಅಬೂಬಕ್ಕರ್ (16.99 ಮೀ.) ಮತ್ತು ಜಿಂದಾಲ್‌ನ ಮೊಹಮ್ಮದ್ ಮುಹಸ್ಸಿನ್ (16.28) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಕಳೆದ ವರ್ಷದ ಬಹುತೇಕ ಅವಧಿಯಲ್ಲಿ ಪರದಾಡಿದ್ದ ಚಿತ್ರವೇಲ್ ಒಮ್ಮೆ ಮಾತ್ರ 17 ಮೀ.ಗಳ ಗಡಿ ದಾಟಿದ್ದರು. ಉತ್ತರಾಖಂಡದಲ್ಲಿ ಈ ವರ್ಷ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ 16.50 ಮೀ.ಗಳ ತ್ರಿವಳಿ ಜಿಗಿತದೊಡನೆ ಚಿನ್ನ ಗೆದ್ದಿದ್ದರು. ಬೆಂಗಳೂರಿನಲ್ಲಿ ಕಳೆದ ತಿಂಗಳು ನಡೆದ ರಾಷ್ಟ್ರೀಯ ಜಂಪ್ಸ್ ಸ್ಪರ್ಧೆಯಲ್ಲಿ 17.13 ಮೀ. ಜಿಗಿದು ಗಮನ ಸೆಳೆದಿದ್ದರು.

ಕರ್ನಾಟಕಕ್ಕೆ 4 ಪದಕ

ಕೊನೆಯ ದಿನ ಕರ್ನಾಟಕದ ಸ್ಪರ್ಧಿಗಳು 4 ಪದಕ ಗೆದ್ದುಕೊಂಡರು. ಜಾವೆಲಿನ್ ಥ್ರೊನಲ್ಲಿ ಉತ್ತರ ಪ್ರದೇಶದ ಅನ್ನುರಾಣಿ (56.66 ಮೀ) ಚಿನ್ನ ಗೆದ್ದರೆ, ಕರ್ನಾಟಕದ ಕರಿಷ್ಮಾ ಸನಿಲ್ (52.73 ಮೀ) ಮತ್ತು ರಮಶ್ರೀ ಜೈನ್ (51.17 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮಹಿಳೆಯರ ಹೈಜಂಪ್‌ನಲ್ಲಿ ಅಭಿನಯಾ ಶೆಟ್ಟಿ (1.80 ಮೀ.) ಕಂಚಿನ ಪದಕ ಗೆದ್ದರು. ಹರಿಯಾಣದ ಪೂಜಾ (1.84 ಮೀ.) ಚಿನ್ನದೊಡನೆ ಏಷ್ಯನ್ ಕೂಟಕ್ಕೆ (1.83 ಮೀ.) ಅರ್ಹತೆ ಪಡೆದರು.

200 ಮೀ. ಓಟದಲ್ಲಿ ಕರ್ನಾಟಕದ ಸುಧೀಕ್ಷಾ (24.31 ಸೆ.) ಮೂರನೇ ಸ್ಥಾನ ಪಡೆದರು. ತೆಲಂಗಾಣದ ನಿತ್ಯಾ ಗಂಧೆ (23.68 ಸೆ.) ಮತ್ತು ತಮಿಳುನಾಡಿನ ಏಂಜೆಲ್ ಸಿಲ್ವಿಯಾ (23.91ಸೆ.) ಮೊದಲ ಎರಡು ಸ್ಥಾನ ಪಡೆದರು.



ವಿರಾಟ್, ಪಡಿಕ್ಕಲ್ ಅರ್ಧಶತಕ • ಹೇಜಲ್‌ವುಡ್‌ಗೆ ನಾಲ್ಕು ವಿಕೆಟ್ • ರಾಜಸ್ಥಾನ ರಾಯಲ್ಸ್‌ಗೆ ನಿರಾಸೆ

ತವರಿನಲ್ಲಿ ಆರ್‌ಸಿಬಿಗೆ ಮೊದಲ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ 'ಕೆಂಪು ಸಮುದ್ರ' ಭೋರ್ಗರೆಯಿತು. ಪ್ರೇಕ್ಷಕರ ಗ್ಯಾಲರಿಯು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳ ಪಾಲಿಗೆ ಸುಗ್ಗಿ ಕುಣಿತದ ವೇದಿಕೆಯಾಯಿತು. ಅವರ ಈ ಸಂಭ್ರಮಕ್ಕೆ ಕಾರಣವಾಗಿದ್ದು ವೇಗಿ ಜೋಶ್ ಹೇಜಲ್‌ವುಡ್. ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಜೋಶ್ ಅವರ ಅಮೋಘ ಬೌಲಿಂಗ್ (4-0-33-4) ಬಲದಿಂದ ಅರ್‌ಸಿಬಿ ತಂಡವು ತವರಿನಂಗಳದಲ್ಲಿ ಮೊದಲ ಜಯ ಸಾಧಿಸಿತು.

206 ರನ್‌ಗಳ ಗುರಿ ಬೆನ್ನಟ್ಟಿದ್ದ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಕೊನೆಯ 2 ಓವರ್‌ಗಳಲ್ಲಿ 18 ರನ್‌ಗಳ ಅಗತ್ಯವಿತ್ತು. ಕ್ರೀಸ್‌ನಲ್ಲಿದ್ದ ಧ್ರುವ ಜುರೇಲ್ ಉತ್ತಮ ಲಯದಲ್ಲಿದ್ದರು. ಆದರೆ 19ನೇ ಓವರ್‌ನಲ್ಲಿ ಸತತ ಎರಡು ಎಸೆತಗಳಲ್ಲಿ ಜುರೇಲ್ ಮತ್ತು ಜೋಫ್ರಾ ಆರ್ಚರ್ ವಿಕೆಟ್‌ಗಳನ್ನು ಕಿತ್ತ ಹೇಜಲ್‌ವುಡ್ ಆರ್‌ಸಿಬಿ ತಂಡದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು. ಕೊನೆ ಓವರ್‌ನಲ್ಲಿ ಯಶ್ ದಯಾಳ್ ಕೂಡ ಜವಾಬ್ದಾರಿಯುತ ಬೌಲಿಂಗ್ ಮಾಡಿದರು. ಅದರಿಂದಾಗಿ ಆರ್‌ಸಿಬಿ 11 ರನ್‌ಗಳ ರೋಚಕ ಗೆಲುವು ದಾಖಲಿಸಿತು.

ಪ್ರಸಕ್ತ ಟೂರ್ನಿಯಲ್ಲಿ ರಜತ್ ಪಾಟೀದಾರ್ ಬಳಗವು ಇಲ್ಲಿ ಆಡಿದ್ದ 3 ಪಂದ್ಯಗಳಲ್ಲಿಯೂ ಸೋತಿತ್ತು. ಆದರೆ ತವರಿನಾಚೆ ಆಡಿದ್ದ ಎಲ್ಲ ಪಂದ್ಯಗಳನ್ನು ಗೆದ್ದಿತ್ತು.

ರಾಜಸ್ಥಾನ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ಅವರ ಚೆಂದದ ಅರ್ಧ ಶತಕಗಳ ಬಲದಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 205 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 9ಕ್ಕೆ194 ರನ್ ಗಳಿಸಿತು. ಕೊನೆಯ ಹಂತದಲ್ಲಿ ರಾಜಸ್ಥಾನ 29 ರನ್‌ಗಳ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡಿತು.

ಗುರಿ ಬೆನ್ನಟ್ಟಿದ್ದ ಪ್ರವಾಸಿ ಬಳಗಕ್ಕೆ ಉತ್ತಮ ಆರಂಭ ದೊರೆಯಿತು. ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ (49; 19ಎ) ಮತ್ತು 14ರ ಪೋರ ವೈಭವ್ ಸೂರ್ಯವಂಶಿ (16; 12ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ವೇಗಿ ಭುವನೇಶ್ವರ್ ಕುಮಾರ್ ಅವರು ಸೂರ್ಯವಂಶಿ ಅವರನ್ನು ಬೌಲ್ಡ್ ಮಾಡುವ ಮೂಲಕ ಜೊತೆಯಾಟ ಮುರಿದರು. ಯಶಸ್ವಿ ಔಟಾದ ನಂತರವೂ ನಿತೀಶ್ ರಾಣಾ (28; 22ಎ) ಹಾಗೂ ರಿಯಾನ್ ಪರಾಗ್ (22 10ಎ) ತಮ್ಮ ತಂಡದ ಗೆಲುವಿನ ಆಸೆಯನ್ನು ಜೀವಂತವಾಗಿಟ್ಟರು.

ತಂಡವು 9 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 ರನ್ ಪೇರಿಸಿತ್ತು. ಈ ಹಂತದಲ್ಲಿ ಆರ್‌ಸಿಬಿಯಿಂದ ಗೆಲುವು ಕೈಜಾರಿದಂತೆ ಕಾಣುತ್ತಿತ್ತು. ಆದರೆ, ಎಡಗೈ ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರು ಪರಾಗ್ ಮತ್ತು ರಾಣಾ ವಿಕೆಟ್ ಕಬಳಿಸಿ ಆರ್‌ಸಿಬಿ ಬಳಗದಲ್ಲಿ ಮತ್ತೆ ಗೆಲುವಿನ ಆಸೆ ಚಿಗುರಿಸಿದರು. ಆದರೆ ಜುರೇಲ್ (47; 34ಎ) ಮತ್ತು ಹೆಟ್ಮೆಯರ್ (11; 8ಎ) ರಾಯಲ್ಸ್ ಬಳಗದ ಭರವಸೆಯಾಗಿದ್ದರು. ಅವರ ಆತಂಕವನ್ನು ಹೇಜಲ್‌ವುಡ್ ದೂರಗೊಳಿಸಿದರು.

ಕೊಹ್ಲಿ-ಪಡಿಕ್ಕಲ್ ಜೊತೆಯಾಟ: ಈ ಸಲದ ಐಪಿಎಲ್‌ನಲ್ಲಿ ಐದನೇ ಅರ್ಧಶತಕ ಗಳಿಸಿದ ವಿರಾಟ್ (70; 42ಎ, 4X8, 6X2) ಮತ್ತು ಪಡಿಕ್ಕಲ್ (50; 27ಎ, 4X4, 6X3) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 95 ರನ್ ಸೇರಿಸಿದರು. ಫಜಲ್ ಹಕ್ ಫಾರೂಕಿ ಹಾಕಿದ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಫಿಲ್ ಸಾಲ್ಟ್ ಅವರ ಕ್ಯಾಚ್ ಪಡೆಯುವಲ್ಲಿ ಮಿಡ್‌ಆಫ್‌ನಲ್ಲಿದ್ದ ಪರಾಗ್ ವಿಫಲರಾದರು. ಇದರ ಲಾಭ ಪಡೆದ ಸಾಲ್ಟ್ (26; 23ಎ) ವಿರಾಟ್ ಜೊತೆ ಸೇರಿ ಮೊದಲ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಪವರ್‌ಪ್ಲೇ ನಂತರದ ಬೌಲಿಂಗ್ ಮಾಡಿದ ಸ್ಪಿನ್ನರ್ ವನಿಂದು ಹಸರಂಗ ಅವರು ಸಾಲ್ಟ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಕ್ರೀಸ್‌ಗೆ ಬಂದ ದೇವದತ್ತ ಜೊತೆಗೆ ವಿರಾಟ್ ಚೆಂದದ ಇನಿಂಗ್ಸ್ ಕಟ್ಟಿದರು. ಯಾವುದೇ ಅವಸರ ಅಥವಾ ಅಬ್ಬರದ ಆಟವಾಡದಿದ್ದರೂ ಮೊತ್ತ ಏರುವಂತೆ ನೋಡಿಕೊಂಡರು. ವಿರಾಟ್ 32 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಅದರಲ್ಲಿ 8 ಬೌಂಡರಿಗಳಿದ್ದವು.

ಇನಿಂಗ್ಸ್‌ನ 13 ಓವರ್‌ಗಳಲ್ಲಿ ಒಂದೂ ಸಿಕ್ಸರ್ ದಾಖಲಾಗಲಿಲ್ಲ. ಪರಾಗ್ ಹಾಕಿದ 14ನೇ ಓವರ್‌ನ ಮೊದಲ ಎಸೆತವನ್ನು ಲಾಂಗ್ ಆಫ್‌ಗೆ ಸಿಕ್ಸರ್ ಎತ್ತಿದ ಎಡಗೈ ಬ್ಯಾಟರ್ ದೇವದತ್ತ ವೇಗದ ಆಟಕ್ಕೆ ಚಾಲನೆ ನೀಡಿದರು. ಅದೇ ಓವರ್‌ನಲ್ಲಿ ವಿರಾಟ್ ಕೂಡ ಒಂದು ಸಿಕ್ಸರ್ ಹೊಡೆದರು.

ದೇವದತ್ತ ತಮಗೆ ಲಭಿಸಿದ ಎರಡು ಜೀವದಾನಗಳನ್ನು ಸಮರ್ಥವಾಗಿ ಬಳಸಿಕೊಂಡರು. ಅವರು 26 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದರಲ್ಲಿ ಒಟ್ಟು 3 ಸಿಕ್ಸರ್‌ಗಳಿದ್ದವು. ಸಂದೀಪ್ ಶರ್ಮಾ ಬೌಲಿಂಗ್‌ನಲ್ಲಿ ನಿತೀಶ್ ರಾಣಾ ಪಡೆದ 'ಜಗ್ಲಿಂಗ್ ಕ್ಯಾಚ್' ನಿಂದಾಗಿ ದೇವದತ್ತ ಆಟಕ್ಕೆ ತೆರೆಬಿತ್ತು.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ರಾಜಸ್ಥಾನ ರಾಯಲ್ಸ್ ವಿರುದ್ಧ ಗೆದ್ದ ಬಳಿಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಜೋಶ್ ಹೇಜಲ್‌ವುಡ್ (ಮಧ್ಯ) ಅವರನ್ನು ನಾಯಕ ರಜತ್ ಪಾಟೀದಾರ್ (ಬಲ) ಸೇರಿದಂತೆ ಸಹ ಆಟಗಾರರು ಅಭಿನಂದಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ



ಅರ್ಧಶತಕ ದಾಖಲಿಸಿದ ದೇವದತ್ತ ಪಡಿಕ್ಕಲ್ ಪ್ರಜಾವಾಣಿ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 5 ವಿಕೆಟ್‌ಗೆ 205 (20 ಓವರುಗಳಲ್ಲಿ)
ಸಾಲ್ಟ್ ಸಿ ಹೆಟ್ಮೆಯರ್ ಬಿ ಹಸರಂಗ 26 (23ಎ, 4x4)
ಕೊಹ್ಲಿ ಸಿ ರಾಣಾ ಬಿ ಆರ್ಚರ್ 70 (42ಎ, 4x8, 6x2)
ಪಡಿಕ್ಕಲ್ ಸಿ ರಾಣಾ ಬಿ ಶರ್ಮಾ 50 (27ಎ, 4x4, 6x3)
ಡೇವಿಡ್ ರನೌಟ್ (ಹೆಟ್ಮೆಯರ್/ಜುರೇಲ್) 23 (15ಎ, 4x2, 6x1)
ಪಾಟೀದಾರ್ ಸಿ ಜುರೇಲ್ ಬಿ ಶರ್ಮಾ 1 (3ಎ)
ಜಿತೇಶ್ ಔಟಾಗದೇ 20 (10ಎ, 4x4)
ಇತರೆ: 15 (ಲೆಗ್‌ಬೈ 1, ವೈಡ್ 14)
ವಿಕೆಟ್ ಪತನ: 1-61 (ಫಿಲ್ ಸಾಲ್ಟ್, 6.4), 2-156 (ವಿರಾಟ್ ಕೊಹ್ಲಿ, 15.1), 3-161 (ದೇವದತ್ತ ಪಡಿಕ್ಕಲ್, 16.1), 4-163 (ರಜತ್ ಪಾಟೀದಾರ್, 16.5), 5-205 (ಟಿಮ್ ಡೇವಿಡ್, 19.6).
ಬೌಲಿಂಗ್: ಜೋಫ್ರಾ ಆರ್ಚರ್ 4-0-33-1; ಫಜಲ್ ಹಕ್ ಫಾರೂಕಿ 3-0-30-0; ತುಷಾರ್ ದೇಶಪಾಂಡೆ 2-0-36-0; ಸಂದೀಪ್ ಶರ್ಮಾ 4-0-45-2; ವನಿಂದು ಹಸರಂಗ 4-0-30-1; ರಿಯಾನ್ ಪರಾಗ್ 3-0-30-0.

ರಾಜಸ್ಥಾನ ರಾಯಲ್ಸ್: 9ಕ್ಕೆ 194 (20 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಶೆಫರ್ಡ್ ಬಿ ಹೇಜಲ್‌ವುಡ್ 49 (19ಎ, 4x7, 6x3)
ವೈಭವ್ ಬಿ ಭುವನೇಶ್ವರ್ 16 (12ಎ, 6x2)
ನಿತೀಶ್ ಸಿ ಭುವನೇಶ್ವರ್ ಬಿ ಕೃಣಾಲ್ 28 (22ಎ, 4x3, 6x1)
ರಿಯಾನ್ ಸಿ ಜಿತೇಶ್ ಬಿ ಕೃಣಾಲ್ 22 (10ಎ, 4x2, 6x2)
ಜುರೇಲ್ ಸಿ ಜಿತೇಶ್ ಬಿ ಹೇಜಲ್‌ವುಡ್ 47 (34ಎ, 4x3, 6x3)
ಹೆಟ್ಮೆಯರ್ ಸಿ ಜಿತೇಶ್ ಬಿ ಹೇಜಲ್‌ವುಡ್ 11 (8ಎ, 4x1)
ಶುಭಂ ಸಿ ಸಾಲ್ಟ್ ಬಿ ದಯಾಳ್ 12 (7ಎ, 4x1, 6x1)
ಆರ್ಚರ್ ಸಿ ಪಾಟೀದಾರ್ ಬಿ ಹೇಜಲ್‌ವುಡ್ 0 (1ಎ)
ಹಸರಂಗ ರನೌಟ್ (ಡೇವಿಡ್/ಜಿತೇಶ್) 1 (3ಎ)
ತುಷಾರ್ ಔಟಾಗದೇ 1 (2ಎ)
ಫಾರೂಕಿ ಔಟಾಗದೇ 2 (2ಎ)
ಇತರೆ: 5 (ಬೈ 1, ವೈಡ್ 4)
ವಿಕೆಟ್ ಪತನ: 1-52 (ವೈಭವ್ ಸೂರ್ಯವಂಶಿ, 4.2), 2-72 (ಯಶಸ್ವಿ ಜೈಸ್ವಾಲ್, 5.5), 3-110 (ಪರಾಗ್, 9.1), 4-134 (ನಿತೀಶ್ ರಾಣಾ, 13.3), 5-162 (ಶಿಮ್ರಾನ್ ಹೆಟ್ಮೆಯರ್, 16.3), 6-189 (ಧ್ರುವ್ ಜುರೇಲ್, 18.3), 7-189 (ಆರ್ಚರ್, 18.4), 8-189 (ಶುಭಂ ದುಬೆ, 19.1), 9-191 (ಹಸರಂಗ)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-50-1, ಯಶ್ ದಯಾಳ್ 3-0-33-1, ಜೋಶ್ ಹೇಜಲ್‌ವುಡ್ 4-0-33-4, ರೊಮಾರಿಯೊ ಶೆಫರ್ಡ್ 1-0-15-0, ಸುಯಶ್ ಶರ್ಮಾ 4-0-31-0, ಕೃಣಾಲ್ ಪಾಂಡ್ಯ 4-0-31-2
ಪಂದ್ಯದ ಆಟಗಾರ: ಹೇಜಲ್‌ವುಡ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 11 ರನ್‌ಗಳ ಗೆಲುವು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	8	6	2	12	1.104
ಡೆಲ್ಲಿ ಕ್ಯಾಪಿಟಲ್ಸ್	8	6	2	12	0.657
ರಾಯಲ್ ಚಾಲೆಂಜರ್ಸ್ ಬೆಂಗಳೂರು	9	6	3	12	0.482
ಮುಂಬೈ ಇಂಡಿಯನ್ಸ್	9	5	4	10	0.673
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	9	5	4	10	-0.054
ಕೋಲ್ಕತ್ತ ನೈಟ್ ರೈಡರ್ಸ್	8	3	5	6	0.212
ರಾಜಸ್ಥಾನ ರಾಯಲ್ಸ್	9	2	7	4	-0.625
ಸನ್‌ರೈಸರ್ಸ್ ಹೈದರಾಬಾದ್	8	2	6	4	-1.361
ಚೆನ್ನೈ ಸೂಪರ್ ಕಿಂಗ್ಸ್	8	2	6	4	-1.392

ಸನ್ ಪಡೆಗೆ 'ಸೂಪರ್' ಸವಾಲು

ಚೆನ್ನೈ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪ್ಯಾಟ್ ಕಮಿನ್ಸ್ ಮುನ್ನಡೆಸುತ್ತಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಶುಕ್ರವಾರ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಎರಡೂ ತಂಡಗಳು ತಲಾ 8 ಪಂದ್ಯಗಳನ್ನು ಆಡಿ, ಎರಡರಲ್ಲಿ ಜಯಿಸಿವೆ. ಉಳಿದದ್ದರಲ್ಲಿ ಸೋತಿವೆ. ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಚೆನ್ನೈಗಿಂತ ನಿವ್ವಳ ರನ್‌ರೇಟ್‌ನಲ್ಲಿ ಸ್ವಲ್ಪ ಉತ್ತಮವಾಗಿರುವ ಹೈದರಾಬಾದ್ ಒಂಬತ್ತನೇ ಸ್ಥಾನದಲ್ಲಿದೆ. ಪ್ಲೇ ಆಫ್ ಪ್ರವೇಶಿಸುವ ಅವಕಾಶ ಜೀವಂತವಾಗಿರಿಸಿ ಕೊಳ್ಳಬೇಕಾದರೆ ಇತ್ತಂಡಗಳು ಕಠಿಣ ಹಾದಿ ಸವೆಸಬೇಕಿದೆ. ಉಳಿದಿರುವ ಆರು ಪಂದ್ಯಗಳನ್ನು ಜಯಿಸಲೇಬೇಕಾದ ಒತ್ತಡದಲ್ಲಿವೆ.

ಹೋದ ವಾರ ಲಖನೌ ತಂಡವನ್ನು ಏಕನಾ ಕ್ರೀಡಾಂಗಣದಲ್ಲಿ ಸೋಲಿಸುವ ಮೂಲಕ ಧೋನಿ ಬಳಗದ ಸೋಲಿನ ಸರಪಳಿ ತುಂಡಾಗಿತ್ತು. ಆದರೆ ನಾಲ್ಕು ದಿನಗಳ ಹಿಂದೆ ಮುಂಬೈ ಇಂಡಿಯನ್ಸ್ ಎದುರು ತಂಡವು ಮಣಿದಿತ್ತು.

ಚೆನ್ನೈನ ಆರಂಭಿಕ ಬ್ಯಾಟರ್ ಶೇಖ್ ರಶೀದ್, ರಚಿನ್ ರವೀಂದ್ರ ಅವರ ಅಸ್ಥಿರ ಫಾರ್ಮ್ ತಂಡಕ್ಕೆ ದುಬಾರಿಯಾಗುತ್ತಿದೆ. ರವಿಂದ್ರ ಜಡೇಜ, ಶಿವಂ ದುಬೆ, ಯುವ ಆಟಗಾರ ಆಯುಷ್ ಮಾತ್ರೆ ಮತ್ತು 43 ವರ್ಷ ವಯಸ್ಸಿನ ಮಹೇಂದ್ರಸಿಂಗ್ ಧೋನಿ ಅವರು ಮಧ್ಯಮ ಕ್ರಮಾಂಕವನ್ನು ಬಲಿಷ್ಠಗೊಳಿಸಿದ್ದಾರೆ. ನೂರ್ ಅಹಮದ್, ಮಥೀಷ ಪಥಿರಾಣ, ಖಲೀಲ್ ಅಹಮದ್, ಜಡೇಜ ಮತ್ತು ಅಶ್ವಿನ್ ಅವರಿರುವ ಬೌಲಿಂಗ್ ಪಡೆಯ ಮುಂದೆ ಈಗ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳ ಅಬ್ಬರಕ್ಕೆ ತಡೆಯೊಡ್ಡುವ ಸವಾಲು ಇದೆ.



ಎಂ.ಎಸ್. ಧೋನಿ



ಇಶಾನ್ ಕಿಶನ್

ಹೈದರಾಬಾದ್ ತಂಡದ ಬ್ಯಾಟಿಂಗ್ ಪಡೆ ಬಲಾಢ್ಯವಾಗಿದೆ. ಟೂರ್ನಿಯ ಮೊದಲ ಪಂದ್ಯದಲ್ಲಿ ಭರ್ಜರಿ ಆರಂಭ ಮಾಡಿದ್ದ ತಂಡವು ನಂತರದ ಪಂದ್ಯಗಳಲ್ಲಿ ಮಂಕಾಗಿದೆ. ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ನಿತೀಶ್ ರೆಡ್ಡಿ, ಅನಿಕೇತ್ ವರ್ಮಾ ಹಾಗೂ ಇಶಾನ್ ಕಿಶನ್ ಅವರ ಅಸ್ಥಿರ ಪ್ರದರ್ಶನದಿಂದಾಗಿ ದೊಡ್ಡ ಮೊತ್ತ ಪೇರಿಸಲಾಗುತ್ತಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಚರ್ಚೆಗೆ ಗ್ರಾಸವಾದ ಇಶಾನ್ ವಿಕೆಟ್

ಹೈದರಾಬಾದ್ (ಪಿಟಿಐ): ಬುಧವಾರ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಆಟಗಾರ ಇಶಾನ್ ಕಿಶನ್ ವಿಕೆಟ್ ಪತನವು ಕ್ರಿಕೆಟ್ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ.

ಎಡಗೈ ಬ್ಯಾಟರ್ ಕಿಶನ್ ಅವರು ದೀಪಕ್ ಚಾಹರ್ ಅವರು ತಮ್ಮ ಲೆಗ್‌ಸೈಡ್‌ಗೆ ಹಾಕಿದ ಎಸೆತವನ್ನು ಆಡಲು ಯತ್ನಿಸಿದರು. ಆದರೆ ಬೀಟ್ ಆದರು. ಚೆಂಡು ವಿಕೆಟ್‌ಕೀಪರ್ ರಿಯಾನ್ ರಿಕೆಲ್ಟನ್ ಅವರ ಕೈಗವಸು ಸೇರಿತು. ಆದರೆ ರಿಕೆಲ್ಟನ್ ಅಥವಾ ಬೌಲರ್ ಚಾಹರ್ ಅವರು ಅಪೀಲ್ ಮಾಡಿರಲಿಲ್ಲ.

ಅಂಪೈರ್ ವಿನೋದ್ ಶೇಷನ್ ಅವರು ವೈಡ್ ಸಿಗ್ನಲ್ ನೀಡುವ ಲಕ್ಷಣಗಳೂ ಕಂಡಿದ್ದವು. ಆದರೆ ಬ್ಯಾಟರ್ ಇಶಾನ್ ಅವರೇ ಡಗ್‌ಔಟ್‌ನತ್ತ ಮರಳಿದ್ದು ಎಲ್ಲರಿಗೂ ಅಚ್ಚರಿ ಮೂಡಿಸಿತು. ಇಶಾನ್ ತೆರಳುವುದನ್ನು ನೋಡಿದ ಅಂಪೈರ್ ಕೈಬೆರಳು ಆಕಾಶದತ್ತ ಮುಖಮಾಡಿತು.

ಟೆಲಿವಿಷನ್ ರೀಪ್ಲೆ ಮತ್ತು ಅಲ್ಟ್ರಾ ಎಜ್ ತಂತ್ರಜ್ಞಾನದ ಮೂಲಕ ತೋರಿಸಿದ ಕ್ಲಿಪ್‌ಗಳಲ್ಲಿ ಚೆಂಡು ಬ್ಯಾಟ್‌ಗೆ ಸ್ಪರ್ಶಿಸಿರಲಿಲ್ಲ. ಕೆಲವೊಮ್ಮೆ ಚೆಂಡು ಬ್ಯಾಟಿಗೆ ಕೂದಲೆಳೆಯಷ್ಟು ಅಂತರದಲ್ಲಿ ಸವರಿ ಹೋಗಿರುವುದು ಬ್ಯಾಟರ್ ಅರಿವಿಗೆ ಬಂದಿರುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಇಶಾನ್ ಅವರೇ ಸ್ವಯಂಪ್ರೇರಿತರಾಗಿ ನಿರ್ಗಮಿಸಿರಬಹುದು ಎನ್ನಲಾಗಿದೆ.

ಕಪಿಲ್– ಗ್ರ್ಯಾಂಡ್ ಥಾರ್ನ್‌ಟನ್ ಟೂರ್ನಿಗೆ ಚಾಲನೆ

ಬೆಂಗಳೂರು: ಭಾರತೀಯ ಗಾಲ್ಫ್ ತಾರೆಗಳಾದ ಗಗನ್‌ಜೀತ್ ಭುಲ್ಲರ್, ರಾಹಿಲ್ ಗಂಗ್ಜೀ, ರಶೀದ್ ಖಾನ್ ಮತ್ತು ವಾಣಿ ಕಪೂರ್ ಅವರು ₹2 ಕೋಟಿ ಬಹುಮಾನದ ಕಪಿಲ್ ದೇವ್-ಗ್ರಾಂಟ್ ಥಾರ್ನ್‌ಟನ್ ಆಹ್ವಾನಿತ ಗಾಲ್ಫ್ ಟೂರ್ನಿಯಲ್ಲಿ ಕಣದಲ್ಲಿದ್ದಾರೆ.

ನಗರದ ಹೊರವಲಯದಲ್ಲಿರುವ ಪ್ರೆಸ್ಟೀಜ್ ಗಾಲ್ಫ್‌ಶೈರ್ ಕ್ಲಬ್‌ನಲ್ಲಿ ಟೂರ್ನಿ ಗುರುವಾರ ಆರಂಭವಾಗಿದ್ದು ಮೊದಲ ಬಾರಿ ಪುರುಷರ ಮತ್ತು ಮಹಿಳೆಯರ ಸ್ಪರ್ಧೆ ಜೊತೆಗೇ ನಡೆಯುತ್ತಿದೆ.

ದೇಶದಲ್ಲಿ ಇದೇ ಮೊದಲ ಬಾರಿ ಇಲ್ಲಿ ವೃತ್ತಿಪರ ಗಾಲ್ಫ್ ಟೂರ್ನಿ ಮಿಶ್ರ ಮಾದರಿಯಲ್ಲಿ ನಡೆಯುತ್ತಿದೆ. ಕ್ರೀಡೆಯಲ್ಲಿ ಒಳಗೊಳ್ಳುವಿಕೆ ಮತ್ತು ಲಿಂಗಸಮಾನತೆ ಭಾಗವಾಗಿ ಸಂಘಟಕರು ಈ ಹೆಜ್ಜೆಯಿಟ್ಟಿದ್ದಾರೆ.

ಮೇಲಿನ ದಿಗ್ಗಜರ ಜೊತೆ ವೃತ್ತಿಪರ ಗಾಲ್ಫರ್‌ಗಳಾದ ಅಜಿತೇಶ್ ಸಂಧು, ಯುವರಾಜ್ ಸಂಧು, ಉದಯನ್ ಮಾಣೆ, ಓಂಪ್ರಕಾಶ್ ಚೌಹಾನ್, ವರುಣ್ ಪಾರೀಖ್ ಕೂಡ ಕಣದಲ್ಲಿದ್ದಾರೆ. ಮಹಿಳೆಯ ವಿಭಾಗದಲ್ಲಿ ವಾಣಿ ಅವರ ಜೊತೆ ಸ್ನೇಹಾ ಸಿಂಗ್, ಅಮನ್‌ದೀಪ್ ಕೌರ್, ರಿಧಿಮಾ ದಿಲವರಿ, ಜಾಸ್ಮಿನ್ ಶೇಖರ್, ಅವನಿ ಪ್ರಶಾಂತ್, ವಿಧಾತ್ರಿ ಅರಸ್ ಅವರೂ ಭಾಗವಹಿಸುತ್ತಿದ್ದಾರೆ.

ನೊಯ್ಡಾದ ಗೌರವ್ ಪ್ರತಾಪ್ ಸಿಂಗ್ ಅವರು ಕೋರ್ಸ್ ದಾಖಲೆಯ 63 ಸ್ಕೋರ್‌ನೊಡನೆ (9 ಅಂಡರ್) ಮೊದಲ ಸುತ್ತಿನ ನಂತರ ಲೀಡ್‌ನಲ್ಲಿದ್ದಾರೆ.

ಇಂದಿನಿಂದ ಡಾಜ್‌ಬಾಲ್ ಕಲರವ

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರತದಲ್ಲಿ ಈಚೆಗೆ ಪ್ರವರ್ಧಮಾನಕ್ಕೆ ಬಂದಿರುವ ಡಾಜ್‌ಬಾಲ್ ಆಟದ ರೋಮಾಂಚನಕ್ಕೆ ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕಿನ ಮಾಣಿ ಇದೇ 25ರಿಂದ ಮೂರು ದಿನ ಸಾಕ್ಷಿಯಾಗಲಿದೆ.

ಭಾರತ ಡಾಜ್‌ಬಾಲ್ ಫೆಡರೇಷನ್ ಮತ್ತು ಕರ್ನಾಟಕ ಡಾಜ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಡಾಜ್‌ಬಾಲ್ ಸಂಸ್ಥೆ ಆಯೋಜಿಸಿರುವ ಮೂರು ರಾಷ್ಟ್ರಗಳ ಟೂರ್ನಿ, ರಾಷ್ಟ್ರೀಯ ಮತ್ತು ರಾಜ್ಯ ಚಾಂಪಿಯನ್‌ಷಿಪ್ ಮಾಣಿಯ ಬಾಲವಿಕಾಸ ವಸತಿ ಶಾಲೆಯ ಉದಯ ಚೌಟ ಸ್ಮಾರಕ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

25ರಂದು ನಡೆಯಲಿರುವ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ 15 ತಂಡಗಳು ಪಾಲ್ಗೊಳ್ಳಲಿವೆ. ಭಾರತ, ನೇಪಾಳ ಮತ್ತು ಮಲೇಷ್ಯಾದ ಪುರುಷ ತಂಡಗಳ ಟೂರ್ನಿ ಮತ್ತು ರಾಷ್ಟ್ರೀಯ ಪುರುಷ, ಮಹಿಳೆಯರ ಹಾಗೂ ಮಿಶ್ರ ವಿಭಾಗಗಳ ಚಾಂಪಿಯನ್‌ಷಿಪ್ 26 ಮತ್ತು 27ರಂದು ನಡೆಯಲಿದೆ.

ಕಳೆದ ಬಾರಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಮತ್ತು ಏಷ್ಯಾ ಪೆಸಿಫಿಕ್ ಟೂರ್ನಿಗಳಲ್ಲಿ ಗಮನ ಸೆಳೆದಿರುವ ಭಾರತ ತಂಡ ಬಲಿಷ್ಠ ಮಲೇಷ್ಯಾ ಮತ್ತು ಮರುಜೀವ ಪಡೆದಿರುವ ನೇಪಾಳ ತಂಡಗಳ ಸವಾಲನ್ನು ಮೀರುವುದೇ ಎಂಬುದು 'ತ್ರಿಕೋನ ಸ್ಪರ್ಧೆ'ಯ ಕುತೂಹಲ.

'ಎಲ್ಲ ಕ್ರೀಡೆಗಳಿಗೆ ಶ್ರೇಷ್ಠತಾ ಕೇಂದ್ರ'

ನವದೆಹಲಿ (ಪಿಟಿಐ): ಮುಂದಿನ ದಶಕದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ನೆರವಿನಿಂದ ಎಲ್ಲ ಕ್ರೀಡೆಗಳಿಗೆ ಶ್ರೇಷ್ಠತಾ ಕೇಂದ್ರಗಳನ್ನು (ಸೆಂಟರ್ ಆಫ್ ಎಕ್ಸಲೆನ್ಸ್) ಆರಂಭಿಸಲು ಯೋಜನೆ ಹಮ್ಮಿಕೊಂಡಿರುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.



ಮಾಂಡವೀಯ

ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತದ ಪ್ರದರ್ಶನದಲ್ಲಿ ಸಾಕಷ್ಟು ಬದಲಾವಣೆ ಕಾಣಲು ಈ ಯೋಜನೆ ರೂಪಿಸುತ್ತಿದ್ದು, ಇದರಿಂದ 2036ರ ಒಲಿಂಪಿಕ್ ಕ್ರೀಡೆಗಳ ಆಯೋಜನೆಯ ಬಿಡ್‌ಗೆ ಹೆಚ್ಚು ಬಲ ಬರಲಿದೆ ಎಂದರು.

ಡಿಜಿ ಲಾಕರ್‌ನಲ್ಲಿ ಕ್ರೀಡಾಪಟುಗಳ ಸರ್ಟಿಫಿಕೆಟ್‌ಗಳುಲಭ್ಯವಾಗುವ ಸೇವೆಗೆ ಗುರುವಾರ ಚಾಲನೆ ನೀಡಿದರು. ಸರ್ಟಿಫಿಕೇಟ್‌ಗಳನ್ನು ವ್ಯವಸ್ಥಿತವಾಗಿ ಕಾಪಿಡಲು ಈ ಉಪಕ್ರಮದಿಂದ ಕ್ರೀಡಾಪಟುಗಳಿಗೆ ಸಾಧ್ಯವಾಗಲಿದೆ.

'ಮುಂದಿನ ಹತ್ತು ವರ್ಷಗಳಲ್ಲಿ ಪ್ರತಿಯೊಂದು ಕ್ರೀಡೆಯಲ್ಲಿ ಒಲಿಂಪಿಕ್ ಸೆಂಟರ್ ಅಥವಾ ಶ್ರೇಷ್ಠತಾ ಕೇಂದ್ರವನ್ನು ನಿರ್ಮಿಸುವುದು ನನ್ನ ಗುರಿ. ದೇಶದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ' ಎಂದು ಮಾಂಡವೀಯ ಹೇಳಿದರು.

ದೇಶದಲ್ಲಿ ಪ್ರಸ್ತುತ 23 ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಗಳಿವೆ. ಇವುಗಳಲ್ಲಿ ಕೇವಲ ಮೂರು ಮಾತ್ರ ನಿರ್ದಿಷ್ಟ ಕ್ರೀಡೆ ಗಳಿಗಾಗಿಯೇ ರೂಪಿಸಲಾಗಿದೆ. ಬಾಕ್ಸಿಂಗ್ (ರೋಹ್ಟಕ್), ಈಜು (ದೆಹಲಿ) ಮತ್ತು ಶೂಟಿಂಗ್ (ದೆಹಲಿ) ಕ್ರೀಡೆಗಳಿಗಾಗಿ ಈ ಕೇಂದ್ರ ಮೀಸಲಾಗಿದೆ. ವಿವಿಧ ಕ್ರೀಡೆಗಳಿಗೆ ತರಬೇತಿ ನೀಡುವ ಎರಡು ಬಹುಕ್ರೀಡಾ ಶ್ರೇಷ್ಠತಾ ಕೇಂದ್ರಗಳು ಪಾಟಿಯಾಲ ಮತ್ತು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸೆಮಿಗೆ ಭಾರತದ ಐದು ಬಾಕ್ಸರ್‌ಗಳು

ಅಮ್ಮಾನ್ (ಜೋರ್ಡಾನ್), (ಪಿಟಿಐ): ಬಾಲಕರ ವಿಭಾಗದಲ್ಲಿ ಮೂವರು ಸೇರಿದಂತೆ ಭಾರತದ ಐವರು ಬಾಕ್ಸರ್‌ಗಳು, ಇಲ್ಲಿ ನಡೆಯುತ್ತಿರುವ ಏಷ್ಯನ್ 15 ವರ್ಷದೊಳಗಿನವರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್‌ಗೆ ಮುನ್ನಡೆದಿದ್ದಾರೆ.

ಸ್ಪರ್ಧೆಗಳ ಐದನೇ ದಿನವಾದ ಬುಧವಾರ, 55 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ನೆಲ್ಸನ್ ಖ್ವೈರಾಕ್‌ಪಂ ಅವರು ಚೀನಾ ತೈಪೆಯ ವಾಂಗ್ ಶೆಂಗ್-ಯಾಂಗ್ ಅವರನ್ನು ಮೊದಲ ಸುತ್ತಿನಲ್ಲಿ ಸೋಲಿಸಿದರು.

ಅಭಿಜಿತ್ (61 ಕೆ.ಜಿ.) ಮತ್ತು ಲಕ್ಷಯ್ ಪಂಡಿತ್ (64 ಕೆ.ಜಿ) ಅವರು ಎಂಟರ ಘಟ್ಟದ ಪಂದ್ಯದಲ್ಲಿ ಕ್ರಮವಾಗಿ ಕಿರ್ಗಿಸ್ತಾನ ಮತ್ತು ಜೋರ್ಡಾನ್‌ನ ಎದುರಾಳಿಗಳ ವಿರುದ್ಧ 5-0 ಗೆಲುವು ಸಾಧಿಸಿದರು.

ಡಬಲ್ ಒಲಿಂಪಿಕ್ ಚಾಂಪಿಯನ್ ಅಥ್ಲೀಟ್ ದಲೀಲಾ

'ಟೋಕಿಯೊದಲ್ಲಿ ಕೊನೆಯ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಟೋಕಿಯೊ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನನ್ನ ಪಾಲಿಗೆ ಮಹತ್ವದ ಕೂಟವಾಗಿದ್ದು, ವೃತ್ತಿಜೀವನದ ಕೊನೆಯ ಸ್ಪರ್ಧೆಯಾಗಿರಲಿದೆ' ಎಂದು ಡಬಲ್ ಒಲಿಂಪಿಕ್ ಚಾಂಪಿಯನ್, ಅಮೆರಿಕದ ಅಥ್ಲೀಟ್ ದಲೀಲಾ ಮುಹಮ್ಮದ್ ಹೇಳಿದರು.

ನಗರದಲ್ಲಿ ಇದೇ 27ರಂದು ನಡೆಯಲಿರುವ ಟಿಸಿಎಸ್ ವಿಶ್ವ 10ಕೆ ಓಟದ ರಾಯಭಾರಿಯಾಗಿರುವ 'ಕ್ವೀನ್ ಆಫ್ ದಿ ಕ್ವಾರ್ಟರ್ ಮೈಲ್' ಖ್ಯಾತಿಯ ದಲೀಲಾ ಗುರುವಾರ ಮಾಧ್ಯಮದವರೊಂದಿಗೆ ಸಂವಾದ ನಡೆಸಿದರು.

'ವಿಶ್ವ 10ಕೆ ಓಟದಲ್ಲಿ 35 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುತ್ತಿರುವುದರಿಂದ ಆ ಕ್ಷಣವನ್ನು ಆಸ್ವಾದಿಸಲು ಕಾತರಳಾಗಿದ್ದೇನೆ. ಓಟವು ನನಗೆ ಎಲ್ಲವನ್ನೂ ನೀಡಿದೆ. ಅದೇ ಉತ್ಸಾಹದಲ್ಲಿ ಬೆಂಗಳೂರಿಗೆ ಬಂದಿದ್ದೇನೆ' ಎಂದು ಮೊದಲ ಬಾರಿ ಭಾರತಕ್ಕೆ ಭೇಟಿ ನೀಡಿರುವ ದಲೀಲಾ ಹೇಳಿದರು.

35 ವರ್ಷ ವಯಸ್ಸಿನ ದಲೀಲಾ ಅವರು 2016ರ ರಿಯೊ ಒಲಿಂಪಿಕ್ಸ್‌ನ 400 ಮೀಟರ್ ಹರ್ಡಲ್ಸ್‌ನಲ್ಲಿ ಚಿನ್ನ ಮತ್ತು 2020ರ ಟೋಕಿಯೊ ಕೂಟದಲ್ಲಿ 4x400 ಮೀಟರ್ ರಿಲೆನಲ್ಲಿ ಚಿನ್ನ ಮತ್ತು 400 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿಯ ಸಾಧನೆಗೆ ಪಾತ್ರರಾಗಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಎರಡು ಚಿನ್ನ ಸೇರಿದಂತೆ ಐದು ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ.



ಡಬಲ್ ಒಲಿಂಪಿಕ್ ಚಾಂಪಿಯನ್, ಅಮೆರಿಕದ ಅಥ್ಲೀಟ್ ದಲೀಲಾ ಮುಹಮ್ಮದ್ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

'ಪ್ಯಾರಿಸ್ ಒಲಿಂಪಿಕ್ಸ್ ಮೂಲಕ ವೃತ್ತಿಜೀವನದ ವಿದಾಯಕ್ಕೆ ಯೋಚಿಸಿದ್ದೆ. ಆದರೆ, ದೀರ್ಘಕಾಲದ ಗಾಯದಿಂದಾಗಿ 2024ರ ಆ ಕ್ರೀಡೆಗಳಿಗೆ ಅರ್ಹತೆ ಗಳಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ದೈಹಿಕ ಮತ್ತು ಮಾನಸಿಕವಾಗಿ ಚೇತರಿಕೆಗೆ ಅಗತ್ಯ ವಿರಾಮ ಪಡೆದು ಈ ಋತುವಿನಲ್ಲಿ ಕಣಕ್ಕೆ ಇಳಿದಿದ್ದೇನೆ. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನದೊಡನೆ ವಿದಾಯಕ್ಕೆ ನಿರ್ಧರಿಸಿದ್ದೇನೆ' ಎಂದು 2021ರಲ್ಲಿ 400 ಮೀ ಹರ್ಡಲ್ಸ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದ್ದ ದಲೀಲಾ (51.58 ಸೆ). ತಿಳಿಸಿದರು. ಪ್ರಸ್ತುತ ಈ ದಾಖಲೆ ಅಮೆರಿಕದ ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೋನ್ (50.37ಸೆ) ಹೆಸರಿನಲ್ಲಿದೆ.

ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯು ಮಹಿಳಾ ಅಥ್ಲೀಟ್‌ಗಳಿಗೆ ಲಿಂಗ ಪರೀಕ್ಷೆ ನಡೆಸಲು ಉದ್ದೇಶಿಸಿರುವ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಅದು ತುಂಬಾ ಸೂಕ್ಷ್ಮ ಮತ್ತು ಸಂಕೀರ್ಣ ವಿಷಯ. ಈ ಪ್ರಶ್ನೆಗೆ ಉತ್ತರಿಸಲು ಇನ್ನಷ್ಟು ಆಳವಾದ ಜ್ಞಾನ ಅಗತ್ಯವಿದೆ' ಎಂದರು.